# ಭಾರತದ ಲೆಕ್ಕನಿಯಂತ್ರಕರು
# ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ
# ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ
# ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷ

लोकहितार्थ सत्यनिष्ठा

Dedicated to Truth in Public Interest

**ಕರ್ನಾಟಕ ಸರ್ಕಾರ**

**2021ರ ವರದಿ ಸಂಖ್ಯೆ – 1**

# ಭಾರತದ ಲೆಕ್ಕನಿಯಂತ್ರಕರು

# ಮತ್ತು ಮಹಾ ಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ

# ಹಣಕಾಸಿನ ವ್ಯವಹಾರಗಳ ಮೇಲಿನ ವರದಿ

## 31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷ

## ಕರ್ನಾಟಕ ಸರ್ಕಾರ

## 2021ರ ವರದಿ ಸಂಖ್ಯೆ – 1

## ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | i x |
| ಕಾರ್ಯ ನಿರ್ವಹಣಾ ಸಾರಾಂಶ | | xi |
| **ಅಧ್ಯಾಯ 1 – ಅವಲೋಕನ** | | |
| **ಪೀಠಿಕೆ** | **1.1** | **1** |
| **ರಾಜ್ಯದ ಚಿತ್ರಣ** | **1.2** | **1** |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 1.2.1 | 1 |
| **ರಾಜ್ಯದ ಹಣಕಾಸಿನ ವ್ಯವಹಾರ ಹಾಗೂ ಲೆಕ್ಕ ಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ಮಾರ್ಗ** | **1.3** | **4** |
| **ಸರ್ಕಾರಿ ಲೆಕ್ಕಗಳ ವಿನ್ಯಾಸ** | **1.4** | **5** |
| **ಆಯವ್ಯಯ ಪ್ರಕ್ರಿಯೆಗಳು** | **1.5** | **7** |
| **ಹಣಕಾಸು ವ್ಯವಹಾರಗಳ ಕ್ಷಿಪ್ರಚಿತ್ರ** | **1.6** | **8** |
| **ಸರ್ಕಾರದ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಕ್ಷಿಪ್ರಚಿತ್ರ** | **1.7** | **9** |
| **ವಿತ್ತೀಯ ಪ್ರಮಿತಿಗಳು** | **1.8** | **10** |
| ಕೊರತೆ/ಹೆಚ್ಚಳಗಳಲ್ಲಿನ ಪ್ರವೃತ್ತಿಗಳು | 1.8.1 | 10 |
| ವಿತ್ತೀಯ ಹೊಣೆಗಾರಿಕೆಗಳು ಮತ್ತು ರಾಒಆಂಉದಲ್ಲಿನ ಪ್ರವೃತ್ತಿಗಳು | 1.8.2 | 11 |
| **ರಾಜ್ಯದ ಹಣಕಾಸಿನ ಪರಿಸ್ಥಿತಿ** | **1.9** | **12** |
| ಪ್ರಮುಖ ಹಣಕಾಸಿನ ಪ್ರಮಿತಿಗಳು ಮತ್ತು ಅವುಗಳ ಸಾಧನೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ 2002ರ ಗುರಿಗಳು | 1.9.1 | 12 |
| 2019–20ರ ಮಧ್ಯಮಾವಧಿ ವಿತ್ತೀಯ ಯೋಜನೆಯ (ಎಂಟಿಎಫ್‌ಪಿ) ಪ್ರಕ್ಷೇಪಗಳಿಗೆ ಪ್ರತಿಯಾಗಿ ವಾಸ್ತವಗಳು | 1.9.2 | 13 |
| **2019–20ರಲ್ಲಿ ರಾಜಸ್ವ ಸ್ವೀಕೃತಿಗಳು, ವಿತ್ತೀಯ ಕೊರತೆ ಮತ್ತು ಹೊಣೆಗಾರಿಕೆಗಳ ಮೇಲೆ ಕೆಲವು ವಹಿವಾಟುಗಳ ಪರಿಣಾಮ** | **1.10** | **13** |
| **ಅಧ್ಯಾಯ 2 –ರಾಜ್ಯದ ಹಣಕಾಸು ವ್ಯವಹಾರಗಳು** | | |
| **ಪೀಠಿಕೆ** | **2.1** | **19** |
| **2019–20ರ ಪ್ರಮುಖ ಹಣಕಾಸಿನ ಸಮಗ್ರತೆಯಲ್ಲಿನ ಬದಲಾವಣೆಗಳು** | **2.2** | **19** |
| **ಹಣದ ಆಕರಗಳು ಮತ್ತು ಅನ್ವಯ** | **2.3** | **20** |
| **ರಾಜ್ಯದ ಸಂಪನ್ಮೂಲಗಳು** | **2.4** | **21** |
| ರಾಜಸ್ವ ಸ್ವೀಕೃತಿಗಳು | 2.4.1 | 21 |
| ರಾಜಸ್ವ ಸ್ವೀಕೃತಿಗಳ ಪ್ರವೃತಿಗಳು ಮತ್ತು ಬೆಳವಣಿಗೆ | 2.4.2 | 22 |
| ರಾಜ್ಯದ ಸ್ವಂತ ಸಂಪನ್ಮೂಲಗಳು | 2.4.3 | 24 |
| ಕೇಂದ್ರದಿಂದ ವರ್ಗಾವಣೆ | 2.4.4 | 28 |
| ಭಾರತ ಸರ್ಕಾರದಿಂದ ಸಹಾಯಾನುದಾನ | 2.4.5 | 29 |
| ಬಂಡವಾಳ ಸ್ವೀಕೃತಿಗಳು | 2.4.6 | 32 |
| ಸಂಪನ್ಮೂಲಗಳ ಕ್ರೋಡೀಕರಣದಲ್ಲಿ ರಾಜ್ಯದ ಸಾಧನೆ | 2.4.7 | 33 |
| **ಸಂಪನ್ಮೂಲಗಳ ಬಳಕೆ** | **2.5** | **34** |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ವೆಚ್ಚದ ಬೆಳವಣಿಗೆ ಮತ್ತು ಸಂಯೋಜನೆ | 2.5.1 | 34 |
| ರಾಜಸ್ವ ವೆಚ್ಚ | 2.5.2 | 35 |
| ಬಂಡವಾಳ ವೆಚ್ಚ | 2.5.3 | 45 |
| ಬಂಡವಾಳ ವೆಚ್ಚದ ಗುಣಮಟ್ಟ | 2.5.4 | 46 |
| ವೆಚ್ಚದ ಆದ್ಯತೆಗಳು | 2.5.5 | 56 |
| **ಸಾರ್ವಜನಿಕ ಲೆಕ್ಕ** | **2.6** | **57** |
| ನಿವ್ವಳ ಸಾರ್ವಜನಿಕ ಲೆಕ್ಕ ಶಿಲ್ಕುಗಳು | 2.6.1 | 57 |
| ಮೀಸಲು ನಿಧಿಗಳು | 2.6.2 | 59 |
| ನಿಷ್ಕ್ರಿಯ ಮೀಸಲು ನಿಧಿಗಳು | 2.6.3 | 63 |
| ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿ | 2.6.4 | 63 |
| **ಋಣ ನಿರ್ವಹಣೆ** | **2.7** | **64** |
| ಋಣ ವಿಭಾಗಗಳ ಚಿತ್ರಣ | 2.7.1 | 64 |
| ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ | 2.7.2 | 68 |
| ಋಣ ಚಿತ್ರಣ ಅವಧಿ ಪೂರ್ಣತೆ ಮತ್ತು ಮರು ಪಾವತಿ | 2.7.3 | 69 |
| **ಋಣ ಸಹಿಷ್ಣುತೆಯ ವಿಶ್ಲೇಷಣೆ** | **2.8** | **70** |
| ಸಾಲದ ಮೊತ್ತಗಳ ಬಳಕೆ | 2.8.1 | 72 |
| ಖಾತರಿಗಳ ಸ್ಥಿತಿ–ಸಾಂದರ್ಭಿಕ ಜವಾಬ್ದಾರಿಗಳು | 2.8.2 | 72 |
| ನಗದು ಶಿಲ್ಕು ನಿರ್ವಹಣೆ | 2.8.3 | 77 |
| **ತೀರ್ಮಾನ ಮತ್ತು ಶಿಫಾರಸುಗಳು** | **2.9** | **81** |
| **ಅಧ್ಯಾಯ 3 –ಆಯವ್ಯಯ ನಿರ್ವಹಣೆ** | | |
| **ಪೀಠಿಕೆ** | **3.1** | **85** |
| **ಆಯವ್ಯಯ ಪ್ರಕ್ರಿಯೆ** | **3.2** | **85** |
| **ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಸಮೀಕ್ಷೆ** | **3.3** | **86** |
| ಪೀಠಿಕೆ | 3.3.1 | 86 |
| ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ | 3.3.2 | 86 |
| ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಕುರಿತು ಲೆಕ್ಕ ಪರಿಶೋಧನೆಯ ಫಲಿತಾಂಶಗಳು | 3.3.3 | 87 |
| **ಆಯವ್ಯಯ ಪ್ರಮುಖ ಕಾರ್ಯನೀತಿ ಘೋಷಣೆಗಳು ಮತ್ತು ಅವುಗಳ ಅನುಷ್ಠಾನವನ್ನು ಖಾತ್ರಿಪಡಿಸಲು ಒದಗಿಸಿದ ವಾಸ್ತವ ವೆಚ್ಚಗಳು** | **3.4** | **97** |
| **ಧನವಿನಿಯೋಗ ಲೆಕ್ಕಗಳು** | **3.5** | **98** |
| 2019–20ರ ಒಟ್ಟು ಅವಕಾಶಗಳು, ವಾಸ್ತವ ವೆಚ್ಚ ಹಾಗೂ ಉಳಿತಾಯಗಳ ಸಾರಾಂಶ | 3.5.1 | 98 |
| ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು | 3.5.2 | 99 |
| **ಧನವಿನಿಯೋಗಗಳ ಲೆಕ್ಕಪರಿಶೋಧನೆ** | **3.6** | **99** |
| ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ಸಮೀಕ್ಷೆ | 3.6.1 | 100 |
| ಆಯವ್ಯಯ ಸಮಗ್ರತೆ ಹಾಗೂ ಲೆಕ್ಕ ಪ್ರಕ್ರಿಯೆ ಮೇಲಿನ ವ್ಯಾಖ್ಯಾನಗಳು | 3.6.2 | 102 |
| ಪರಿಣಾಮಕಾರಿ ಆಯವ್ಯಯ ತಯಾರಿಕೆ ಹಾಗೂ ಲೆಕ್ಕ ವಿಧಾನದ ಮೇಲಿನ ವ್ಯಾಖ್ಯಾನಗಳು | 3.6.3 | 106 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಆಯ್ದ ಅನುದಾನಗಳ ಸಮೀಕ್ಷೆಯ ಫಲಿತಾಂಶಗಳು** | **3.7** | **108** |
| ಅನುದಾನ ಸಂಖ್ಯೆ 18–ವಾಣಿಜ್ಯ ಮತ್ತು ಕೈಗಾರಿಕೋದ್ಯಗಳು | 3.7.1 | 108 |
| ಅನುದಾನ ಸಂಖ್ಯೆ 21 – ಜಲಸಂಪನ್ಮೂಲಗಳು | 3.7.2 | 112 |
| **ನಿರ್ಣಯಗಳು** | **3.8** | **117** |
| **ಶಿಫಾರಸುಗಳು** | **3.9** | **117** |
| **ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ದತಿಗಳು** | | |
| **ರಾಜ್ಯದ ಸಂಚಿತ ನಿಧಿ ಅಥವಾ ಸಾರ್ವಜನಿಕ ಲೆಕ್ಕದಿಂದ ಹೊರಗೆ ಉಳಿದಿರುವ ಮೊತ್ತ** | **4.1** | **121** |
| **ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿ ವಿಳಂಬ** | **4.2** | **123** |
| **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು** | **4.3** | **125** |
| **ವೈಯಕ್ತಿಕ ಠೇವಣಿ ಲೆಕ್ಕಗಳು** | **4.4** | **126** |
| ವೈಯಕ್ತಿಕ ಠೇವಣಿ ಲೆಕ್ಕಗಳ ಅಂತಿಮ ಶಿಲ್ಕುಗಳ ಪ್ರವೃತ್ತಿಗಳು | 4.4.1 | 126 |
| ನಿಷ್ಕ್ರಿಯ ಮತ್ತು ಹೊಂದಾಣಿಕೆಯಾಗದ ವೈಯಕ್ತಿಕ ಠೇವಣಿ ಖಾತೆಗಳು | 4.4.2 | 127 |
| **ಅಮಾನತ್ತು ಮತ್ತು ಋಣ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಕ್ಕಗಳಡಿ ಉಳಿದಿರುವ ಶಿಲ್ಕುಗಳು** | **4.5** | **128** |
| ಪ್ರಮುಖ ಅಮಾನತ್ತು ಲೆಕ್ಕಗಳಡಿ ಬಾಕಿ ಉಳಿದಿರುವ ಶಿಲ್ಕುಗಳು | 4.5.1 | 128 |
| ಋಣ, ಠೇವಣಿ, ಇರಸಾಲು (ಡಿಡಿಆರ್) ಶೀರ್ಷಿಕೆಗಳಡಿ ವ್ಯತಿರಿಕ್ತ ಶಿಲ್ಕುಗಳು | 4.5.2 | 130 |
| **ಹೊಂದಾಣಿಕೆಯಾಗದ ಇಲಾಖೆಯ ಅಂಕಿಗಳು** | **4.6** | **131** |
| **ನಗದು ಶಿಲ್ಕುಗಳಲ್ಲಿ ಹೊಂದಾಣಿಕೆ** | **4.7** | **133** |
| **ಲೆಕ್ಕ ಮಾನದಂಡಗಳ ಅನುಸರಣೆ** | **4.8** | **133** |
| **ಸ್ವಾಯುತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೀಲನಾ ವರದಿಗಳ ಮಂಡನೆಯ ಸ್ಥಿತಿ** | **4.9** | **134** |
| **ಇಲಾಖಾ ವಾಣಿಜ್ಯ ಉದ್ದಿಮೆಗಳು/ನಿಗಮಗಳು/ಕಂಪನಿಗಳು** | **4.10** | **135** |
| **ಸಂಸ್ಥೆಗಳಿಗೆ ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ/ಸಾಲದ ವಿವರಗಳನ್ನು ಸಲ್ಲಿಸದಿರುವುದು** | **4.11** | **136** |
| **ಲೆಕ್ಕಗಳಲ್ಲಿನ ಗುಣಮಟ್ಟ ಮತ್ತು ಕಾಲ ಪರಿಮಿತಿಗಳು** | **4.12** | **136** |
| **ದುರುಪಯೋಗಗಳು, ನಷ್ಟಗಳು, ಕಳವು ಮುಂತಾದವುಗಳು** | **4.13** | **137** |
| **ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳ ವರದಿಯ ಅನುಸರಣಾ ಕ್ರಮಗಳು** | **4.14** | **138** |
| **ಸಮಾಪನ** | **4.15** | **138** |
| **ಶಿಫಾರಸುಗಳು** | **4.16** | **139** |

## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1.1 | ರಾಜ್ಯ ಚಿತ್ರಣ | 143 |
| 1.2 | ಸರ್ಕಾರಿ ಲೆಕ್ಕಗಳ ಸ್ವರೂಪ | 145 |
| 1.3 | 31 ಮಾರ್ಚ್ 2020ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 146 |
| 2.1 | ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ | 147 |
| 2.2 | ರಾಜ್ಯಸರ್ಕಾರದ ಹಣಕಾಸಿನ ಕಾಲಸರಣಿ ದತ್ತಾಂಶಗಳು | 150 |
| 2.3 | ಇಲಾಖಾವಾರು ಸಹಾಯಧನಗಳ ಪಾಲು | 154 |
| 2.4 | ಪರೋಕ್ಷ ಸಹಾಯಧನಗಳು | 155 |
| 2.5 | ಮಹಾಲೇಖಾಪಾಲರ ಕಚೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು | 156 |
| 3.1 | ಮಹಿಳಾ ಉದ್ದೇಶಿತ ಆಯವ್ಯಯದ ಅಧ್ಯಯನಕ್ಕಾಗಿ ಅನುದಾನ 23ರಲ್ಲಿ ಪರಿಶೀಲಿಸಿದ ಯೋಜನೆಗಳ ಪಟ್ಟಿ | 157 |
| 3.2 | ಆಯವ್ಯಯ 2019-20ರ ಪ್ರಮುಖ ಕಾರ್ಯನೀತಿ ಉಪಕ್ರಮಗಳು | 159 |
| 3.3 | ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು | 162 |
| 3.4 | ಅನಗತ್ಯ ಪೂರಕ ಅಂದಾಜುಗಳು | 163 |
| 3.5 | ಅಧಿಕವಾದ ಪೂರಕ ಅಂದಾಜುಗಳು | 164 |
| 3.6 | ಸಾಕಷ್ಟಿಲ್ಲದ ಪೂರಕ ಅಂದಾಜುಗಳು | 165 |
| 3.7 | ಅನವಶ್ಯಕ/ಅಧಿಕತಮ/ಅಸಮರ್ಪಕ ಪುನರ್ವಿನಿಯೋಗಗಳು | 166 |
| 3.8 | ದೋಷಪೂರಿತ ಪುನರ್ವಿನಿಯೋಗ ಆದೇಶಗಳು | 169 |
| 3.9 | ₹ 100 ಕೋಟಿ ಹಾಗೂ ಅದಕ್ಕಿಂತ ಹೆಚ್ಚಾದ ಬಳಕೆಯಾಗದೆ ಉಳಿದ ಅವಕಾಶಗಳ ಅನುದಾನ/ವಿನಿಯೋಗಗಳು | 171 |
| 3.10 | ಅವಕಾಶಗಳು ಬಳಕೆಯಾಗದೆ ಉಳಿದು ಅದರ ಯಾವುದೇ ಭಾಗವನ್ನು ಅಧ್ಯರ್ಪಣೆ ಮಾಡದಿರುವ ವಿವಿಧ ಅನುದಾನಗಳು/ವಿನಿಯೋಗಗಳು | 173 |
| 3.11 | ಬಳಕೆಯಾಗದೆ ಉಳಿದ ಅವಕಾಶಗಳ ಅಧ್ಯರ್ಪಣೆ | 174 |
| 3.12 | ಪ್ರಸಕ್ತ ವರ್ಷದಲ್ಲಿ ಗಣನೀಯ ಅಧ್ಯರ್ಪಣೆಗಳ ಸಮೀಕ್ಷೆಯ ಫಲಿತಾಂಶಗಳು | 176 |
| 3.13 | ಮಾರ್ಚ್ 30 ಮತ್ತು 31 2020ರಂದು ಅಧ್ಯರ್ಪಣೆ ಮಾಡಲಾದ ಐದು ಕೋಟಿಗೂ ಮೀರಿದ ಅವಕಾಶಗಳು | 178 |
| 3.14 | ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | 179 |
| 3.15 | ಉಳಿತಾಯದ ಮೊತ್ತಗಳಿಗೆ ನಿರ್ದಿಷ್ಟ ಮಾಹಿತಿ ಒದಗಿಸದ ಅನುದಾನಗಳ ವಿವರಗಳು | 181 |
| 4.1 | ಪ್ರಧಾನ ಶೀರ್ಷಿಕಾವಾರು ಇಲಾಖಾವಾರು ಮತ್ತು ವರ್ಷಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳು | 182 |
| 4.2 | ಸಕ್ರಿಯ ಮತ್ತು ನಿಷ್ಕ್ರಿಯ ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಉಳಿದಿರುವ ಶಿಲ್ಕುಗಳು | 183 |
| 4.3 | ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 184 |

| ಅನುಬಂಧ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 4.4 | ಬಾಕಿ ಇರುವ ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆ ವಾಣಿಜ್ಯ ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ವಿವರಗಳು | 185 |
| 4.5 | ಸರ್ಕಾರದಿಂದ ಗಣನೀಯವಾಗಿ ಹಣ ಸಹಾಯ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವುದು | 186 |
| 4.6 | ಹಣದುರುಪಯೋಗ, ದುರ್ಬಳಕೆ ಇತ್ಯಾದಿ ಪ್ರಕರಣಗಳ ಇಲಾಖಾವಾರು/ಅವಧಿವಾರು ವಿವರಗಳು | 187 |
| | **ಪಾರಿಭಾಷಿಕ ಪದಗಳು** | **188** |

# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನ ಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ– 1 ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೀಲನಾ ವರದಿಯ ಆಧಾರ ಮತ್ತು ವಿಧಾನ, ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳಾದ ರಾಜಸ್ವ ಹೆಚ್ಚಳ ಮತ್ತು ಆರ್ಥಿಕ ಕೊರತೆಗಳ ಪ್ರವೃತ್ತಿ ಹಾಗೂ ಆರ್ಥಿಕ ತಿದ್ದುಪಡಿಗಳ ಮಾರ್ಗಗಳನ್ನು ಒಳಗೊಂಡಿದೆ.

3. ಈ ವರದಿಯ ಅಧ್ಯಾಯ– 2 ಮತ್ತು 3 ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಹೊಂದಿವೆ. ಅಗತ್ಯವಿದ್ದ ಕಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

4. ಅಧ್ಯಾಯ–4 'ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣೆ' ಯಲ್ಲಿ, 2019–20ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

5. 31.3.2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸಿನ ಮೇಲೆ (ಹದಿಮೂರನೇ ವರದಿ – ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸುಗಳನ್ನು (ಐದನೇ ವರದಿ – ಜುಲೈ 2015) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

6. ಕಾರ್ಯ ನಿರ್ವಹಣಾ ಲೆಕ್ಕ ಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ, ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

7. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಹಿನ್ನೆಲೆ

ಕರ್ನಾಟಕ ಸರ್ಕಾರದಲ್ಲಿ ಹನ್ನೊಂದನೇ ಹಣಕಾಸು ಆಯೋಗವು (ಇಎಫ್‌ಸಿ) ನಿಗದಿಪಡಿಸಿದ ವಿತ್ತೀಯ ತಿದ್ದುಪಡಿಯ ಪ್ರಮಿತಿಗಳನ್ನು ಆಧರಿಸಿ 2000–05ರ ಅವಧಿಗೆ ಮೊದಲ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು (ಎಂಟಿಎಫ್‌ಪಿ) ಜಾರಿಗೆ ತರುವ ಮೂಲಕ ಹಣಕಾಸಿನ ಸುಧಾರಣೆ ಮತ್ತು ಕ್ರೋಢೀಕರಣಗಳಿಗೆ ಆದ್ಯತೆ ನೀಡಲಾಯಿತು. ಈ ಮಧ್ಯಮಾವಧಿ ವಿತ್ತೀಯ ಯೋಜನೆಯು ಆವರ್ತಕ ವಾರ್ಷಿಕ ದಾಖಲೆಯಾಯಿತಲ್ಲದೆ ಯೋಜನೆಯಲ್ಲಿ ನಿಗದಿಪಡಿಸಿದ ವಿತ್ತೀಯ ಗುರಿಗಳು ಮತ್ತು ಕಾರ್ಯನೀತಿಗಳು ವಾರ್ಷಿಕ ಆಯವ್ಯಯ ತಯಾರಿಕೆಗೆ ಒತ್ತಾಸೆಯಾದವು. ಕರ್ನಾಟಕವು ಮಧ್ಯಮಾವಧಿ ವಿತ್ತೀಯ ಯೋಜನೆಗೆ ಶಾಸನಬದ್ಧ ಆಧಾರವನ್ನು ಒದಗಿಸಲು ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ. (ಸೆಪ್ಟೆಂಬರ್ 2002). ಈ ಕಾಯಿದೆಯು, ಹಣಕಾಸಿನ ಸ್ಥಿರತೆ ಮತ್ತು ಸಹಿಷ್ಣುತೆಯನ್ನು ಖಚಿತಪಡಿಸುವ, ರಾಜಸ್ವ ಹೆಚ್ಚಳವನ್ನು ಸಾಧಿಸುವ ಮೂಲಕ ಸಾಮಾಜಿಕ ಮತ್ತು ಭೌತಿಕ ಮೂಲಸೌಕರ್ಯ ಮತ್ತು ಮಾನವ ಅಭಿವೃದ್ಧಿಯನ್ನು ಉತ್ತಮಗೊಳಿಸಲು ಇರುವ ವ್ಯಾಪ್ತಿಯನ್ನು ಹೆಚ್ಚಿಸುವ, ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ, ವಿತ್ತಿಯ ಕಾರ್ಯನೀತಿಯ ಪರಿಣಾಮಕಾರಿ ನಿರ್ವಹಣೆ ಮತ್ತು ವಿವೇಕಯುತ ಋಣ ನಿರ್ವಹಣೆಗೆ ಇರುವ ಅಡ್ಡಿಗಳನ್ನು ಸಾಲಗಳ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ತೊಡೆದು ಹಾಕುವ ಮತ್ತು ಮಧ್ಯಂತರ ವಿತ್ತೀಯ ಕಟ್ಟುಪಾಡುಗಳ ಅನುಸರಣೆಯ ಮೂಲಕ ಹಣಕಾಸಿನ ವ್ಯವಹಾರಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

## ವರದಿ

ಈ ವರದಿಯು ಕರ್ನಾಟಕ ಸರ್ಕಾರದ 31 ಮಾರ್ಚ್ 2020 ಕ್ಕೆ ಕೊನೆಗೊಂಡ ವರ್ಷದ ಪರಿಶೋಧಿತ ಲೆಕ್ಕಪತ್ರಗಳ ಆಧಾರದ ಮೇಲೆ, ರಾಜ್ಯ ಸರ್ಕಾರದ ಹಣಕಾಸಿನ ವಿಶ್ಲೇಷಣಾತ್ಮಕ ಸಮೀಕ್ಷೆಯನ್ನು ಒದಗಿಸುತ್ತದೆ. ವರದಿಯನ್ನು ನಾಲ್ಕು ಅಧ್ಯಾಯಗಳಲ್ಲಿ ವಿನ್ಯಾಸಗೊಳಿಸಲಾಗಿದೆ.

**ಅಧ್ಯಾಯ 1 – ಅವಲೋಕನ:** ಈ ಅಧ್ಯಾಯವು ವರದಿಯ ಆಧಾರ ಮತ್ತು ವಿಧಾನವನ್ನು ವಿವರಿಸುತ್ತದೆ ಮತ್ತು ಸರ್ಕಾರಿ ಲೆಕ್ಕಪತ್ರಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಆದ್ಯಂತ ವಿತ್ತೀಯ ವಿಶ್ಲೇಷಣೆ ಮತ್ತು ಕೊರತೆ / ಹೆಚ್ಚಳ ಸೇರಿದಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

**ಅಧ್ಯಾಯ 2 – ರಾಜ್ಯದ ಹಣಕಾಸು ವ್ಯವಹಾರ:** ಈ ಅಧ್ಯಾಯವು ರಾಜ್ಯದ ಹಣಕಾಸು ಲೆಕ್ಕಗಳ ಆಧಾರದ ಮೇಲೆ ರಾಜ್ಯದ ಹಣಕಾಸಿನ ವ್ಯವಹಾರಗಳ ವಿಶಾಲ ದೃಷ್ಟಿಕೋನವನ್ನು ಒದಗಿಸುವುದರೊಂದಿಗೆ ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಹಣಕಾಸಿನ ಸಮಗ್ರತೆಯಲ್ಲಿನ ಪ್ರಮುಖ ನಿರ್ಣಾಯಕ ಬದಲಾವಣೆಗಳನ್ನು, 2015–16 ರಿಂದ 2019–20ರ ಅವಧಿಯಲ್ಲಿನ ಒಟ್ಟಾರೆ ಪ್ರವೃತ್ತಿಗಳನ್ನು, ರಾಜ್ಯದ ಋಣ ಚಿತ್ರಣ ಮತ್ತು ಸಾರ್ವಜನಿಕ ಲೆಕ್ಕದ ಪ್ರಮುಖ ವ್ಯವಹಾರಗಳನ್ನು ವಿಶ್ಲೇಷಿಸುತ್ತದೆ.

**ಅಧ್ಯಾಯ 3 – ಆಯವ್ಯಯ ನಿರ್ವಹಣೆ:** ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳನ್ನು ಆಧರಿಸಿದೆ ಮತ್ತು ರಾಜ್ಯ ಸರ್ಕಾರದ ಧನವಿನಿಯೋಗ ಮತ್ತು ಹಂಚಿಕೆಯ ಆದ್ಯತೆಗಳನ್ನು ಪರಿಶೀಲಿಸುತ್ತದೆ. ಇದು ಸಾಂವಿಧಾನಿಕ ನಿಬಂಧನೆಗಳಿಂದ ವಿಚಲನಗಳ ಬಗ್ಗೆ ವರದಿ ಮಾಡುತ್ತದೆ ಮತ್ತು ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವ ಸಮಸ್ಯೆಗಳನ್ನು ಪ್ರಧಾನವಾಗಿ ತೋರಿಸುತ್ತದೆ.

**ಅಧ್ಯಾಯ 4 – ಲೆಕ್ಕಪತ್ರಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣೆ:** ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ, ವಿವಿಧ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳ ಅನುಪಾಲನೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ.

ಲೆಕ್ಕಪರಿಶೋಧನಾ ಅಂಶಗಳ ಸಮರ್ಥನೆಗೆ ಹಲವಾರು ಆಕರಗಳಿಂದ ಸಂಗ್ರಹಿಸಲಾದ ಹೆಚ್ಚುವರಿ ದತ್ತಾಂಶದ ಅನುಬಂಧಗಳನ್ನು ಸಹ ವರದಿಯು ಒಳಗೊಂಡಿದೆ. ಆಯ್ದ ಪಾರಿಭಾಷಿಕ ಪದಗಳ ಪಟ್ಟಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

## ಲೆಕ್ಕ ಪರಿಶೋಧನೆಯ ಆವಿಷ್ಕಾರಗಳು

### ಹಣಕಾಸಿನ ಸ್ಥಿತಿ

ರಾಜ್ಯದ ವಿತ್ತೀಯ ಸ್ಥಿತಿಯನ್ನು ರಾಜಸ್ವ ಹೆಚ್ಚಳ, ವಿತ್ತೀಯ ಕೊರತೆ, ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಾಕಿ ಇರುವ ಋಣದ ಅನುಪಾತ ಎಂಬ ಮೂರು ಪ್ರಮುಖ ಹಣಕಾಸಿನ ಪ್ರಮಿತಿಗಳನ್ನು ಆಧರಿಸಿ ನೋಡಲಾಗುತ್ತದೆ.

2015–16ರಿಂದ 2019–20ರ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚಳವನ್ನು ದಾಖಲಿಸಿದೆ. 2019–20ರಲ್ಲಿ ರಾಜಸ್ವ ಹೆಚ್ಚಳವು ₹1,185 ಕೋಟಿಯಷ್ಟಿತ್ತು. ಕಳೆದ ಐದು ವರ್ಷಗಳಲ್ಲಿ ವಿತ್ತೀಯ ಕೊರತೆಯನ್ನು ರಾಒಆಂಉದ ಶೇಕಡ ಮೂರರ ಒಳಗೆ ನಿಯಂತ್ರಿಸುವಲ್ಲಿ ರಾಜ್ಯವು ಸಫಲವಾಗಿದೆ. 2019–20ರಲ್ಲಿ ವಿತ್ತೀಯ ಕೊರತೆಯು ಶೇಕಡಾ 2.25ರಷ್ಟಿತ್ತು.

ಈ ಅವಧಿಯಲ್ಲಿ, ರಾಜ್ಯದ ಬಾಕಿ ಇರುವ ಋಣವು ರಾಒಆಂಉ ದ ಶೇಕಡ 17.54 ರಿಂದ 19.86 ರ ನಡುವೆ ಉಳಿದಿದ್ದು, ಇದು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯ್ದೆ 2002 ರಲ್ಲಿ ನಿಗದಿಪಡಿಸಿದ ರಾಒಆಂಉದ ಶೇಕಡಾ 25ರ ಪ್ರಮಾಣಕ್ಕಿಂತಲೂ ಕಡಿಮೆಯಾಗಿದೆ.

(ಅಧ್ಯಾಯ 1)

### ರಾಜ್ಯದ ಹಣಕಾಸು ವ್ಯವಹಾರ

ಹಿಂದಿನ ವರ್ಷಕ್ಕೆ ಹೋಲಿಸಿದರೆ 2019–20ರಲ್ಲಿ ರಾಜ್ಯ ಸರ್ಕಾರ ತನ್ನ ರಾಜಸ್ವ ಸ್ವೀಕೃತಿಗಳಲ್ಲಿ ಶೇಕಡ 6.34ರಷ್ಟು ಹೆಚ್ಚಳ ದಾಖಲಿಸಿದೆ.

ರಾಒಆಂಉಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು 2015–16ರಲ್ಲಿ ಶೇಕಡ 7.23ರಷ್ಟಿದ್ದು 2019–20ರಲ್ಲಿ ಶೇಕಡ 6.02ಕ್ಕೆ ಇಳಿದಿದೆ. ಸ್ವಂತ ತೆರಿಗೆ ಆದಾಯವು ರಾಜಸ್ವ ಸ್ವೀಕೃತಿಗಳಲ್ಲಿ ಪ್ರಮುಖ ಭಾಗದ (ಶೇಕಡ 58) ಕೊಡುಗೆ ನೀಡಿದೆ. ತೆರಿಗೆಯೇತರ ಆದಾಯದ ರಾಜಸ್ವ ಸ್ವೀಕೃತಿಗಳ ಅನುಪಾತವು 2015–16ರಲ್ಲಿದ್ದ 4.51ರಿಂದ 2019–20ರಲ್ಲಿ ಶೇಕಡ 4.38ಕ್ಕೆ ಇಳಿದಿದೆ. ರಾಒಆಂಉಕ್ಕೆ ಅದರ ಅನುಪಾತವು ಅತ್ಯಲ್ಪವಾಗಿತ್ತು (2019–20ರಲ್ಲಿ ಶೇಕಡ 0.45), ಇದು ತೆರಿಗೆಯೇತರ ಆದಾಯವನ್ನು ಸಜ್ಜುಗೊಳಿಸುವ ಅಗತ್ಯವನ್ನು ಸೂಚಿಸುತ್ತದೆ. 2019–20ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳು (ಪಿಆರ್ಐ) ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ (ಯುಎಲ್‌ಬಿ) ಕಾರ್ಯಕ್ಷಮತೆ ಅನುದಾನವನ್ನು 31 ಮಾರ್ಚ್ 2020 ರ ಅಂತ್ಯದವರೆಗೆ ಭಾರತ ಸರ್ಕಾರವು ಬಿಡುಗಡೆ ಮಾಡಿಲ್ಲ.

### ರಾಜಸ್ವ ವೆಚ್ಚ

ಸಾಮಾನ್ಯ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಅಡಿಯಲ್ಲಿನ ವೆಚ್ಚವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಕ್ರಮವಾಗಿ 14 ಮತ್ತು 9ರಷ್ಟು ಬೆಳವಣಿಗೆಯನ್ನು ದಾಖಲಿಸಿದರೆ, ಸಾಮಾಜಿಕ ಸೇವೆಗಳ ಬೆಳವಣಿಗೆಯು ಶೇಕಡ ಎರಡುರಷ್ಟು ಕಡಿಮೆಯಾಗಿದೆ. ರಾಜಸ್ವ ವೆಚ್ಚದ ಎಂಭತ್ತೆರಡು ಶತಾಂಶವು ಸಂಬಳ, ಸ್ಥಳೀಯ

ಸಂಸ್ಥೆಗಳಿಗೆ ಹಂಚಿಕೆ, ಬಡ್ಡಿ ಪಾವತಿ, ಪಿಂಚಣಿ, ಸಹಾಯಧನಗಳು, ಆಡಳಿತಾತ್ಮಕ ವೆಚ್ಚಗಳು, ಅನುದಾನ–ಸಹಾಯ ಮತ್ತು ಹಣಕಾಸಿನ ನೆರವಿನ ಮೇಲಿನ ಬದ್ಧ ವೆಚ್ಚವನ್ನು ಒಳಗೊಂಡಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಸಹಾಯಧನಗಳ ವೆಚ್ಚವು ಶೇಕಡಾ 14ರಷ್ಟು ಹೆಚ್ಚಾಗಿದೆ.

## ವೆಚ್ಚದ ಗುಣಮಟ್ಟ

2019–20ನೇ ಸಾಲಿನಲ್ಲಿ ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚದ ಪಾಲು (ಶೇಕಡ 18.52) ಹಿಂದಿನ ವರ್ಷಕ್ಕೆ (ಶೇಕಡಾ 19.24) ಹೋಲಿಸಿದರೆ ಶೇಕಡಾ 0.72ರಷ್ಟು ಕಡಿಮೆಯಾಗಿದೆ. ಆದಾಗ್ಯೂ, ನಿಖರವಾಗಿ ಬಂಡವಾಳ ವೆಚ್ಚವು ₹453 ಕೋಟಿಗಳಷ್ಟು ಹೆಚ್ಚಾಗಿದೆ. ಕಂಪನಿಗಳು / ನಿಗಮಗಳಲ್ಲಿ 31 ಮಾರ್ಚ್ 2020 ರಲ್ಲಿದ್ದಂತೆ ಹೂಡಿಕೆಯಿಂದ ಬರುವ ಪ್ರತಿಫಲವು ತೀರಾ ಕಡಿಮೆಯಿದೆ. (₹53.64 ಕೋಟಿ). ಹೂಡಿಕೆಯಲ್ಲಿ ನಷ್ಟದಲ್ಲಿರುವ ಕಂಪನಿಗಳು / ನಿಗಮಗಳಲ್ಲಿ ಹೂಡಿರುವ ₹41,989 ಕೋಟಿಗಳು (ಶೇಕಡಾ 62) ಸೇರಿದೆ.

## ನಿಧಿಗಳು ಮತ್ತು ಇತರ ಹೊಣೆಗಾರಿಕೆಗಳು

ಈ ವರ್ಷದಲ್ಲಿ ಹಸಿರು ತೆರಿಗೆ ಉಪಕರ ಸಂಗ್ರಹ ₹14.55 ಕೋಟಿ ಮತ್ತು ಸಂಬಂಧಿತ ವೆಚ್ಚವನ್ನು (₹0.14 ಕೋಟಿ) ಹಸಿರು ತೆರಿಗೆ ನಿಧಿಗೆ ವರ್ಗಾಯಿಸಲಾಗಿಲ್ಲ. ಅಲ್ಲದೆ ₹268.45 ಕೋಟಿ ವೆಚ್ಚವನ್ನು ಅರಣ್ಯ ಅಭಿವೃದ್ಧಿ ನಿಧಿಗೆ ವರ್ಗಾಯಿಸದಿರುವುದು ರಾಜಸ್ವ ವೆಚ್ಚವನ್ನು ಅಧಿಕವಾಗಿ ಹೇಳಿದಂತಾಗಿದೆ.

ಖಾತರಿ ವಿಮೋಚನಾ ನಿಧಿಯನ್ನು ಪುನಶ್ಚೇತನಗೊಳಿಸಲಾಗಿಲ್ಲ.

## ಋಣ ಸಹಿಷ್ಣುತೆ

ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು ಹೊಂದಿವೆ (ಶೇ 59). 2019–20ರಲ್ಲಿ (₹24,510 ಕೋಟಿ) ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 38ರಷ್ಟು ಹೆಚ್ಚಾಗಿದೆ. 2018–19 ಮತ್ತು 2019–20ರ ಅವಧಿಯಲ್ಲಿ, ರಾಜಸ್ವ ಸ್ವೀಕೃತಿಗೆ ಬಡ್ಡಿ ಪಾವತಿಯ ಹೊರೆಯು ಹದಿನಾಲ್ಕನೆಯ ಹಣಕಾಸು ಆಯೋಗವು ಶಿಫಾರಸು ಮಾಡಿದ ಶೇಕಡಾ 9.15ನ್ನು ಮೀರಿದೆ.

## ನಗದು ಶಿಲ್ಕು

ಮಾರುಕಟ್ಟೆ ಸಾಲಗಳ ಹೆಚ್ಚಳದಿಂದಾಗಿ ವರ್ಷದಲ್ಲಿ ರಾಜ್ಯದ ನಗದು ಶಿಲ್ಕು ಶೇಕಡಾ 57ರಷ್ಟು ಹೆಚ್ಚಾಗಿದೆ.

(ಅಧ್ಯಾಯ 2)

## ಆಯವ್ಯಯ ನಿರ್ವಹಣೆ

2019–20ರಲ್ಲಿ ಒಟ್ಟು ₹2,63,804.67 ಕೋಟಿಗಳ ಆಯವ್ಯಯ ಅವಕಾಶದಲ್ಲಿ ₹2,33,978.23 ಕೋಟಿಗಳ ವೆಚ್ಚ ಮಾಡಲಾಗಿದೆ. ಇದು ₹29,826.44 ಕೋಟಿಗಳ (ಶೇಕಡ 11) ಅವಕಾಶ ವೆಚ್ಚ ಮಾಡದಿರುವಿಕೆಯಲ್ಲಿ ಫಲಿತವಾಗಿ ಇದು ಪೂರಕ ಆಯವ್ಯಯಕ್ಕಿಂತ ಶೇಕಡ 29.35ರಷ್ಟು ಹೆಚ್ಚಾಗಿದ್ದು, ಆಯವ್ಯಯದ ಕಾರ್ಯಗತಗೊಳಿಸುವಿಕೆ ಮತ್ತು ಮೇಲ್ವಿಚಾರಣೆಯ ಅಸಮರ್ಪಕ ನಿಯಂತ್ರಣವನ್ನು ಸೂಚಿಸುತ್ತದೆ.

ಪ್ರಸಕ್ತ ವರ್ಷದಲ್ಲಿ, ಶೇಕಡಾ 51ರಷ್ಟು ಉಳಿತಾಯವನ್ನು ಅಧ್ಯರ್ಪಣೆ ಮಾಡಿಲ್ಲ. ನಿಯಂತ್ರಣಾಧಿಕಾರಿಗಳು ಹಂಚಿಕೆಯ ಶೇಕಡ 46ರಷ್ಟು ಉಳಿತಾಯಕ್ಕೆ ಪ್ರಧಾನ ಮಹಾಲೇಖಾಪಾಲರಿಗೆ (ಲೆ.ಮತ್ತು ಹ.) ವೆಚ್ಚದ ವ್ಯತ್ಯಾಸಗಳಿಗೆ ವಿವರಣೆಯನ್ನು ನೀಡಲಿಲ್ಲ.

ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳು ಕೇವಲ ಲಿಂಗ ಘಟಕವನ್ನು ಹೊಂದಿರುವ ಯೋಜನೆಗಳಿಗೆ ಮೀಸಲಿಟ್ಟ ಹಂಚಿಕೆಯನ್ನು ಪ್ರಮಾಣೀಕರಿಸಿದೆ. ಹಿಂದಿನ ವರದಿಗಳಲ್ಲಿ ಗಮನ ಸೆಳೆದಿದ್ದರೂ, ಲಿಂಗ-ಪ್ರತ್ಯೇಕಿಸದ ಮಾಹಿತಿಯ ಕೊರತೆ ಮುಂದುವರೆದಿದೆ.

ಪ್ರಾಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ಪ್ರಮಾಣೀಕರಣ ಕೋರ್ಸ್‌ಗಳ ತರಬೇತಿ ಕೇಂದ್ರಗಳು, ಕ್ಷೀರ ಭಾಗ್ಯ ಯೋಜನೆಯಡಿ ಶಾಲೆಗೆ ಹೋಗುವ ಎಲ್ಲಾ ಮಕ್ಕಳಿಗೆ ಪೌಷ್ಠಿಕಾಂಶದ ಮಟ್ಟವನ್ನು ಹೆಚ್ಚಿಸಲು ಹಾಲು ಸರಬರಾಜು ಮಾಡುವುದು ಮುಂತಾದ ಸರ್ಕಾರದ ಮಹತ್ವದ ನೀತಿ ಉಪಕ್ರಮಗಳು, ಸಂಬಂಧಿಸಿದ ಪೂರ್ವಸಿದ್ಧತಾ ಚಟುವಟಿಕೆಗಳನ್ನು ಪೂರ್ಣಗೊಳಿಸದ ಕಾರಣ ಈ ವರ್ಷದಲ್ಲಿ ಈಡೇರಲಿಲ್ಲ.

21 ಪ್ರಕರಣಗಳಲ್ಲಿ ಪೂರಕ ಆಯವ್ಯಯದ ಮೂಲಕ ಪಡೆದ ₹340.97 ಕೋಟಿಗಳು ಅನಗತ್ಯವಾಗಿತ್ತು ಮತ್ತು 24 ಪ್ರಕರಣಗಳಲ್ಲಿ ಪಡೆದ ₹10,217.37 ಕೋಟಿಗಳು ಅಗತ್ಯಕ್ಕಿಂತ ಹೆಚ್ಚಾಗಿತ್ತು.

48 ಪ್ರಕರಣಗಳಲ್ಲಿ ಮಾಡಿದ ಹಣದ ಪುನರ್ವಿಯೋಗವು ಅನುಚಿತವಾಗಿದೆ. ಇದರ ಪರಿಣಾಮವಾಗಿ ಅವಕಾಶವು ಬಳಕೆಯಾಗದೆ ಉಳಿದಿದೆ ಅಥವಾ ಅವಕಾಶಕ್ಕಿಂತ ಹೆಚ್ಚು ವೆಚ್ಚವಾಗಿದೆ.

2012-13ರಿಂದ 2017-18ರ ಅವಧಿಗೆ ಸಂಬಂಧಿಸಿದ ₹2,409.53 ಕೋಟಿ ಹೆಚ್ಚುವರಿ ವೆಚ್ಚವನ್ನು ಸಂವಿಧಾನದ 205ನೇ ವಿಧಿ ಅಡಿಯಲ್ಲಿ ಕ್ರಮಬದ್ಧಗೊಳಿಸಬೇಕಾಗಿದೆ.

ವಿತ್ತೀಯ ಸೂಚಕಗಳಾದ ರಾಜಸ್ವ ಹೆಚ್ಚಳದ ಮೇಲೆ ಪರಿಣಾಮ ಬೀರುವ ರಾಜಸ್ವ / ಬಂಡವಾಳ ವಿಭಾಗಗಳ ಅಡಿಯಲ್ಲಿ ₹28.73 ಕೋಟಿ ಮೊತ್ತವನ್ನು ತಪ್ಪಾಗಿ ವರ್ಗೀಕರಿಸಲಾಗಿದೆ.

(ಅಧ್ಯಾಯ 3)

## ಲೆಕ್ಕಪತ್ರಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣೆ

2016-20ರ ಅವಧಿಯಲ್ಲಿ, 10 ಸರ್ಕಾರಿ ಕಂಪನಿಗಳು / ನಿಗಮಗಳು 31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷಕ್ಕೆ ಸರಕಾರದ ಅನುದಾನದಲ್ಲಿ ಗಳಿಸಿದ ಬಡ್ಡಿಯನ್ನು (₹803.99 ಕೋಟಿ) ಹಣಕಾಸು ಇಲಾಖೆ ನೀಡಿರುವ ಸೂಚನೆಗಳಿಗೆ ವಿರುದ್ಧವಾಗಿ ಸರ್ಕಾರಿ ಖಾತೆಗೆ ಸಂದಾಯ ಮಾಡಿರಲಿಲ್ಲ.

2019-20ರ ಅವಧಿಯಲ್ಲಿ ಖಜಾನೆಯಿಂದ ಪಡೆದ 2,109 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ 426 ಬಿಲ್ಲುಗಳು (ಶೇಕಡಾ 20) ಎನ್‌ಡಿಸಿ ಬಿಲ್ಲುಗಳ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಹದಿನಾಲ್ಕು ಇಲಾಖೆಗಳು ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಿರುವ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿಲ್ಲ.

ವೈಯಕ್ತಿಕ ಠೇವಣಿ (ಪಿಡಿ) ಖಾತೆಗಳಲ್ಲಿ ದೊಡ್ಡ ಮೊತ್ತದ ಹಣವನ್ನು ಉಳಿಸಿಕೊಳ್ಳುವುದು, ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಚ್ಚದಿರುವುದು, ಅಂತಹ ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳನ್ನು ಸಮನ್ವಯಗೊಳಿಸದಿರುವುದು ಮತ್ತು ವೆಚ್ಚ ಮಾಡದ ಶಿಲ್ಕುಗಳನ್ನು ಸಂಚಿತ ನಿಧಿಗೆ ವರ್ಗಾಯಿಸದಿರುವುದು ಶಾಸನಬದ್ಧ ಹಣಕಾಸು ನಿಯಂತ್ರಣ ತತ್ವಗಳಿಗೆ ವಿರುದ್ಧವಾಗಿದೆ

(ಅಧ್ಯಾಯ 4)

# ಅಧ್ಯಾಯ–1

# ಅವಲೋಕನ

# ಅಧ್ಯಾಯ–1: ಅವಲೋಕನ

## 1.1 ಪೀಠಿಕೆ

ಈ ಅಧ್ಯಾಯವು ಕರ್ನಾಟಕ ರಾಜ್ಯದ ಸಂಕ್ಷಿಪ್ತ ವಿವರವನ್ನು ಒದಗಿಸುತ್ತದೆ ಮತ್ತು ವರದಿಗೆ ಆಧಾರ, ವಿಧಾನ ಮತ್ತು ಅಂತರ್ನಿಹಿತವಾಗಿರುವ ದತ್ತಾಂಶದೊಂದಿಗೆ ಸರ್ಕಾರಿ ಲೆಕ್ಕಗಳ ವಿನ್ಯಾಸ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಹಣಕಾಸಿನ ಸ್ಥೂಲ ವಿಶ್ಲೇಷಣೆ ಮತ್ತು ಕೊರತೆ/ಹೆಚ್ಚಳಗಳನ್ನೂ ಒಳಗೊಂಡಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

## 1.2 ರಾಜ್ಯದ ಚಿತ್ರಣ

- **ಸಾಮಾಜಿಕ ಸೂಚಕಗಳು**

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ ಭಾರತದ ಆರನೆಯ ಅತಿ ದೊಡ್ಡ ರಾಜ್ಯವಾಗಿದ್ದು (1,91,791 ಚದರ ಕಿ.ಮೀ), ಜನಸಂಖ್ಯೆಯ ಪ್ರಕಾರ ಎಂಟನೇ ದೊಡ್ಡ ರಾಜ್ಯವಾಗಿದೆ. ರಾಜ್ಯದ ಜನಸಂಖ್ಯೆಯು 6.11 ಕೋಟಿಯಿದ್ದು (2011 ರ ಜನಗಣತಿ) 2001–11ರ ದಶಕದಲ್ಲಿ ಸುಮಾರು ಶೇಕಡಾ 16ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯು ಅಖಿಲ ಭಾರತದ ಸರಾಸರಿ 21.90ಕ್ಕೆ (2011–12) ಹೋಲಿಸಿದರೆ ಶೇಕಡಾ 20.90[1]ರಷ್ಟಿದೆ. 2001–11ರ ಅವಧಿಯಲ್ಲಿ ಸಾಕ್ಷರತಾ ಪ್ರಮಾಣವು ಶೇಕಡಾ 66.64ರಿಂದ 75.36ಕ್ಕೆ ಏರಿದೆ. ರಾಜ್ಯದಲ್ಲಿ 30 ಜಿಲ್ಲೆಗಳು ಮತ್ತು 176 ತಾಲ್ಲೂಕುಗಳಿವೆ.

- **ಆರ್ಥಿಕ ಸೂಚಕಗಳು**

ಮಾರುಕಟ್ಟೆ ದರದಲ್ಲಿ 2019–20ರಲ್ಲಿರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಂಉ) ₹16,99,115 ಕೋಟಿಗಳಾಗಿದ್ದು, ಹಿಂದಿನ ವರ್ಷಕ್ಕಿಂತ ಶೇಕಡಾ 10.02ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2019–20ರ ಅವಧಿಯಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ರಾಒಆಂಉ ಕ್ರಮವಾಗಿ ಶೇಕಡ 7.7, ಶೇಕಡ 5.9 ಮತ್ತು ಶೇಕಡ 11.5ರಷ್ಟು ಹೆಚ್ಚಾಗಿದೆ.

ರಾಜ್ಯದ ತಲಾ ಒಆಂಉ ರಾಷ್ಟ್ರೀಯ ತಲಾ ಒಆಂಉ ₹1,50,927ಕ್ಕೆ ಪ್ರತಿಯಾಗಿ ₹2,53,444 ಆಗಿತ್ತು. ಪ್ರಸಕ್ತ ಬೆಲೆಯಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು ದೇಶದ ಸರಾಸರಿ ₹1,35,050ಕ್ಕೆ[2] ಪ್ರತಿಯಾಗಿ ₹2,31,246 ಆಗಿತ್ತು (ಮಾರ್ಚ್ 2020 ರಲ್ಲಿದ್ದಂತೆ–ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ, 2019–20). ರಾಜ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಮತ್ತು ಆರ್ಥಿಕ ದತ್ತಾಂಶವನ್ನು ಅನುಬಂಧ–1.1ರಲ್ಲಿ ನೀಡಲಾಗಿದೆ.

### *1.2.1 ರಾಜ್ಯದ ಒಟ್ಟು ಆಂತರಿಕ ಉತ್ಪನ್ನ*

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಗಡಿಗಳ ಒಳಗೆ ಉತ್ಪಾದಿಸಲಾದ ಹಾಗೂ ಅಧಿಕೃತವಾಗಿ ಅಂಗೀಕರಿಸಲ್ಪಟ್ಟ ಅಂತಿಮ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯವಾಗಿದೆ.

ರಾಒಆಂಉಕ್ಕೆ ವಿಭಾಗೀಯ ಕೊಡುಗೆಗಳಲ್ಲಿನ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಏಕೆಂದರೆ ಅವು ಆರ್ಥಿಕತೆಯ ಬದಲಾಗುತ್ತಿರುವ ರೀತಿಯನ್ನು ಸೂಚಿಸುತ್ತವೆ. ಆರ್ಥಿಕ ಚಟುವಟಿಕೆಯನ್ನು ಸಾಮಾನ್ಯವಾಗಿ ಕೃಷಿ, ಕೈಗಾರಿಕೆ ಮತ್ತು ಸೇವಾ ವಿಭಾಗಗಳಿಗೆ ಅನುರೂಪವಾಗಿ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಿಭಾಗಗಳಾಗಿ ವಿಂಗಡಿಸಲಾಗಿದೆ, ಪ್ರಸಕ್ತ

[1]ಆರ್ಥಿಕ ಸಮೀಕ್ಷೆ 2019–20ರ ಅನ್ವಯ

[2]2019–20ರಲ್ಲಿ ರಾಜ್ಯದ ತಲಾ ಆದಾಯ ಮತ್ತು ರಾಷ್ಟ್ರೀಯ ಸರಾಸರಿ ನಡುವಿನ ವ್ಯತ್ಯಾಸವು ₹96,196 ಆಗಿತ್ತು.

ಬೆಲೆಗಳಲ್ಲಿ ರಾಷ್ಟ್ರೀಯ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ವೃದ್ಧಿಯ ಪ್ರವೃತ್ತಿಗಳನ್ನು **ಕೋಷ್ಟಕ–1.1**ರಲ್ಲಿ ಸೂಚಿಸಲಾಗಿದೆ ಮತ್ತು ಪ್ರಸಕ್ತ ಬೆಲೆ ಮತ್ತು ಸ್ಥಿರ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರವನ್ನು **ನಕ್ಷೆ–1.1**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–1.1: ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದಂತೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಪ್ರವೃತ್ತಿ**

| ವರ್ಷ | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಭಾರತದ ಒಟ್ಟು ಆಂತರಿಕ ಉತ್ಪನ್ನ* (ಕೋಟಿ ₹ಗಳಲ್ಲಿ) | 1,37,71,875 | 1,53,91,665 | 1,70,98,304 | 1,89,71,234 | 2,04,42,233 |
| ವೃದ್ಧಿಯ ದರ (ಶೇಕಡಾವಾರು) | 10.46 | 11.76 | 11.09 | 10.95 | 7.75 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ# (ಕೋಟಿ ₹ಗಳಲ್ಲಿ) | 10,45,168 | 12,09,136 | 13,57,579 | 15,44,399 | 16,99,115 |
| ವೃದ್ಧಿಯದರ (ಶೇಕಡಾವಾರು) | 14.36 | 15.69 | 12.28 | 13.76 | 10.02 |

ಆಕರ :*ಅಖಿಲ ಭಾರತ ಅಂಕಿಗಳು –ಆರ್ಥಿಕ ಸಮೀಕ್ಷೆ 2019–20 ಕರ್ನಾಟಕ ಸರ್ಕಾರ

# ರಾಒಆಂಉದ ಅಂಕಿಗಳು ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವೆಬ್ ಸೈಟ್ ನಲ್ಲಿ 31.07.2020ರಂದು ಇದ್ದಂತೆ.

**ನಕ್ಷೆ–1.1: ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ**




ಮೇಲಿನ ಕೋಷ್ಟಕ ಮತ್ತು ನಕ್ಷೆಯಲ್ಲಿ ಕಾಣಿಸಿದಂತೆ, ಪ್ರಸಕ್ತ ದರಗಳು ಮತ್ತು ಸ್ಥಿರ ದರಗಳಿಗಿಂತ ಕರ್ನಾಟಕದ ಒಆಂಉದ ವೃದ್ಧಿಯ ದರವು ರಾಷ್ಟ್ರದ ವೃದ್ಧಿಯ ದರಕ್ಕಿಂತಲೂ ಹೆಚ್ಚಾಗಿದೆ. ಆದರೂ, 2019–20ರ ಅವಧಿಯಲ್ಲಿ ಇದು ಐದು ವರ್ಷಗಳಲ್ಲಿ ಅತ್ಯಂತ ಕಡಿಮೆ ವೃದ್ಧಿಯದರವನ್ನು ದಾಖಲಿಸಿದೆ.

**ನಕ್ಷೆ–1.2**ರಲ್ಲಿ ಪ್ರಕಟವಾಗಿರುವಂತೆ 2015–16 ರಿಂದ 2019–20ರವರೆಗಿನ ಐದು ವರ್ಷಗಳ ಅವಧಿಯಲ್ಲಿ, ರಾಒಆಂಉ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳ ಸಾಪೇಕ್ಷ ಪಾಲಿನಲ್ಲಿ ಸ್ವಲ್ಪಮಟ್ಟಿಗೆ ಇಳಿಕೆ ಕಂಡು ಬಂದರೂ, ಸೇವಾ ಕ್ಷೇತ್ರದ ಸಾಪೇಕ್ಷ ಪಾಲಿನಲ್ಲಿ ಅಲ್ಪ ಮಾತ್ರ ಏರಿಕೆ ಕಂಡುಬಂದಿದೆ.

**ನಕ್ಷೆ : 1.2 ರಾಒಆಂಉಕ್ಕೆ ವಿಭಾಗೀಯ ಕೊಡುಗೆಯಲ್ಲಿನ ವ್ಯತ್ಯಯ (2015–16 ಮತ್ತು 2019–20)**




ಆಕರ :ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಆದರೂ, ಹಿಂದಿನ ವರ್ಷಕ್ಕೆ ಹೋಲಿಸಿದಾಗ, ಇದು ವಿಭಿನ್ನ ಚಿತ್ರವನ್ನು ತೋರಿಸುತ್ತದೆ. **ನಕ್ಷೆ–1.3**ರಲ್ಲಿ ಕಾಣುವಂತೆ 2019–20ರಲ್ಲಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳ ವೃದ್ಧಿಯ ದರದಲ್ಲಿ ಇಳಿಕೆ ಕಂಡು ಬಂದಿದ್ದು ಕೃಷಿ ಕ್ಷೇತ್ರದಲ್ಲಿ ಗಣನಾರ್ಹ ಏರಿಕೆ ಕಂಡು ಬಂದಿದೆ.

**ನಕ್ಷೆ 1.3: ರಾಒಆಂಉ ದಲ್ಲಿವಿಭಾಗೀಯ ಬೆಳವಣಿಗೆ**




| | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಕೃಷಿ | 3.16 | 7.25 | 23.76 | 3.69 | 7.68 |
| ಕೈಗಾರಿಕೆ | 10.82 | 18.51 | 10.72 | 10.15 | 5.91 |
| ಸೇವೆಗಳು | 16.56 | 15.28 | 11.45 | 16.21 | 11.51 |

2019–20ರಲ್ಲಿ ರಾಒಆಂಉಕ್ಕೆ ವಿಭಾಗೀಯ ಕೊಡುಗೆಯನ್ನು **ನಕ್ಷೆ–1.4**ರಲ್ಲಿ ನೀಡಲಾಗಿದೆ.

**ನಕ್ಷೆ–1.4: 2019–20 ರಲ್ಲಿ ರಾಒಆಂಉ ಕ್ಕೆ ವಿಭಾಗೀಯ ಕೊಡುಗೆ**




## 1.3 ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ಮಾರ್ಗ

ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯನ್ನು(ಎಸ್‌ಎಫ್‌ಎಆರ್) ಭಾರತದ ಸಂವಿಧಾನದ ಅನುಚ್ಛೇದ 151(2)ರ ಪ್ರಕಾರ ಸಿದ್ಧಪಡಿಸಲಾಗಿದೆ ಮತ್ತು ಸಲ್ಲಿಸಲಾಗಿದೆ, ಈ ಅನುಚ್ಛೇದದ ಅನ್ವಯ ರಾಜ್ಯದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿಯನ್ನು ರಾಜ್ಯದ ಶಾಸಕಾಂಗದ ಮುಂದೆ ಇಡಲು ಕ್ರಮ ತೆಗೆದುಕೊಳ್ಳಲು ಅನುವಾಗುವಂತೆ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುವುದು.

ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುವ, ಆರಂಭಿಕ ಮತ್ತು ಉಪ ಲೆಕ್ಕಗಳನ್ನು ನಿರ್ವಹಿಸುವ ಜವಾಬ್ದಾರಿಯಿರುವ, ಖಜಾನೆಗಳು, ಕಚೇರಿಗಳು ಮತ್ತು ಇಲಾಖೆಗಳು ಸಲ್ಲಿಸುವ ಲೆಕ್ಕಪತ್ರಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಸ್ವೀಕರಿಸಿದ ವಿವರಣಾ ಪಟ್ಟಿಗಳಿಂದ ಪ್ರತಿ ವರ್ಷ ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ, ಈ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ) ಅವರು ಸ್ವತಂತ್ರವಾಗಿ ಪರಿಶೋಧನೆ ಮಾಡುತ್ತಾರೆ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಈ ಲೆಕ್ಕಗಳನ್ನು ದೃಢೀಕರಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು ಈ ವರದಿಗೆ ಮುಖ್ಯ ಆಕರವಾಗಿದೆ ಇತರ ಮೂಲಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ.

- ವಿತ್ತೀಯ ಪ್ರಮಿತಿಗಳು ಮತ್ತು ಪ್ರಕ್ಷೇಪಣೆಗೆ ಪ್ರತಿಯಾಗಿ ಹಂಚಿಕೆಯ ಆದ್ಯತೆಗಳನ್ನು, ಹಾಗೆಯೇ ಅನುಷ್ಠಾನದ ಪರಿಣಾಮಕಾರಿತ್ವವನ್ನು ಸಂಬಂಧಿತ ನಿಯಮಗಳ ಮತ್ತು ನಿಗದಿತ ಕಾರ್ಯವಿಧಾನಗಳ ಅನುಸರಣೆಯ ಮೌಲ್ಯಮಾಪನ ಮಾಡಲು ರಾಜ್ಯದ ಆಯವ್ಯಯ;
- ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ) ಅವರು ನಡೆಸಿದ ಲೆಕ್ಕಪರಿಶೋಧನೆಯ ಫಲಿತಾಂಶಗಳು;
- ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದ ಇತರ ಹಣಕಾಸು ದತ್ತಾಂಶಗಳು;
- ರಾಒಆಂಉದ ಮಾಹಿತಿಮತ್ತು ಕರ್ನಾಟಕ ರಾಜ್ಯ ಸರ್ಕಾರದ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯದಿಂದ ಪಡೆದ ರಾಜ್ಯ ಸಂಬಂಧಿತ ಇತರೆ ಅಂಕಿಅಂಶಗಳು;

- ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸುಗಳು;
- ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯ್ದೆ 2002
- ಭಾರತ ಸರ್ಕಾರದ ಮಾರ್ಗಸೂಚಿಗಳು.

## 1.4 ಸರ್ಕಾರಿ ಲೆಕ್ಕಗಳ ವಿನ್ಯಾಸ

ರಾಜ್ಯ ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ:

**ಸಂಚಿತ ನಿಧಿ**

- ರಾಜಸ್ವ ಮತ್ತು ಬಂಡವಾಳ ಲೆಕ್ಕ, ಸಾರ್ವಜನಿಕ ಋಣ ಮತ್ತು ಸಾಲಗಳು ಹಾಗೂ ಮುಂಗಡಗಳಿಗೆ ಸಂಬಂಧಿಸಿದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳು ಭಾರತದ ಸಂವಿಧಾನದ 266(1)ನೇ ಅನುಚ್ಛೇದದ ಅನ್ವಯ ಸ್ಥಾಪಿಸಲಾದ ರಾಜ್ಯದ ಸಂಚಿತ ನಿಧಿ ಶೀರ್ಷಿಕೆಯಡಿಯ ಒಂದು ಕ್ರೋಢೀಕೃತ ನಿಧಿಯಾಗಿದೆ.

**ಸಾದಿಲ್ವಾರು ನಿಧಿ**

- ಸಂವಿಧಾನದ 267(2)ನೇ ಅನುಚ್ಛೇದದ ಅನ್ವಯ ಸ್ಥಾಪಿಸಲಾದ ರಾಜ್ಯದ ಸಾದಿಲ್ವಾರು ನಿಧಿಯು ರಾಜ್ಯಪಾಲರ ವಶದಲ್ಲಿರುವ ಮುಂಗಡ ಹಣ ರೂಪದ ಮೊತ್ತವಾಗಿದ್ದು ಅನಿರಿಕ್ಷಿತ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಶಾಸಕಾಂಗದ ಉತ್ತರಾನುಮೋದನೆಗೆ ಒಳಪಟ್ಟು ವೆಚ್ಚವನ್ನು ಭರಿಸಲು ಮುಂಗಡವನ್ನು ನೀಡಲು ಅವರಿಗೆ ಅವಕಾಶವನ್ನು ಒದಗಿಸುತ್ತದೆ. ವೆಚ್ಚವನ್ನು ಸಂಚಿತ ನಿಧಿಯಲ್ಲಿನ ಸಂಬಂಧಪಟ್ಟ ಕ್ರಿಯಾ ಪ್ರಧಾನ ಶೀರ್ಷಿಕೆಗೆ ವೆಚ್ಚಹಾಕಿ ನಿಧಿಗೆ ಪುನರ್ಭರ್ತಿ ಮಾಡಲಾಗುತ್ತದೆ.

**ಸಾರ್ವಜನಿಕ ಲೆಕ್ಕ**

- ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಮೀಸಲು ನಿಧಿಗಳು, ಠೇವಣಿಗಳು, ಅಮಾನತ್ತು ಮತ್ತು ಇರಸಾಲುಗಳು ಮುಂತಾದ ಸಂಚಿತ ನಿಧಿಯ ಭಾಗವಲ್ಲದ ಕೆಲವು ವ್ಯವಹಾರಗಳ ಸ್ವೀಕೃತಿ ಮತ್ತು ವಿತರಣೆಗಳನ್ನು ಸಂವಿಧಾನದ 266 (2) ನೇ ಅನುಚ್ಛೇದದ ಅನ್ವಯ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇರಿಸಲಾಗುವುದು ಮತ್ತು ಇವು ರಾಜ್ಯ ಶಾಸಕಾಂಗದ ಅನುಮೋದನೆಗೆ ಒಳಪಡುವುದಿಲ್ಲ.

ಭಾರತದ ಸಂವಿಧಾನದ 202 ನೇ ಅನುಚ್ಛೇದದಪ್ರಕಾರ ರಾಜ್ಯ ವಿಧಾನಸಭೆಯ ಉಭಯ ಸದನಗಳಿಗೆ ಆಯವ್ಯಯವನ್ನು ಮಂಡಿಸಲಾಗುವುದು. 'ವಾರ್ಷಿಕ ಹಣಕಾಸು ವಿವರಣಾ ಪಟ್ಟಿಯು' ಮುಖ್ಯ ಆಯವ್ಯಯ ದಾಖಲೆಯಾಗಿದ್ದು ಇದು ಕೆಳಗಿನವುಗಳನ್ನು ಒಳಗೊಂಡಿದೆ.

- **ರಾಜಸ್ವ ಸ್ವೀಕೃತಿಗಳು** ತೆರಿಗೆ ಆದಾಯ, ತೆರಿಗೆಯೇತರ ಆದಾಯ, ಕೇಂದ್ರ ತೆರಿಗೆ / ಸುಂಕಗಳಲ್ಲಿನ ಪಾಲು ಮತ್ತು ಭಾರತ ಸರ್ಕಾರದ ಅನುದಾನಗಳನ್ನು ಹೊಂದಿವೆ..
- **ರಾಜಸ್ವ ವೆಚ್ಚವು**, ಭೌತಿಕ ಅಥವಾ ಆರ್ಥಿಕ ಸ್ವತ್ತುಗಳ ಸೃಷ್ಟಿಯಲ್ಲಿ ಫಲಿತವಾಗದ ಸರ್ಕಾರದ ಎಲ್ಲ ಖರ್ಚುಗಳನ್ನು ಒಳಗೊಂಡಿರುತ್ತದೆ. ಇದು ಸರ್ಕಾರಿ ಇಲಾಖೆಗಳ ಸಾಮಾನ್ಯ ಕಾರ್ಯ ಚಟುವಟಿಕೆಗಳು ಮತ್ತು ವಿವಿಧ ಸೇವೆಗಳ ಮೇಲಿನ ವೆಚ್ಚ, ಸರ್ಕಾರವು ಮಾಡಿದ ಸಾಲದ ಮೇಲಿನ ಬಡ್ಡಿ ಪಾವತಿಗಳು ಮತ್ತು ವಿವಿಧ ಸಂಸ್ಥೆಗಳಿಗೆ ನೀಡಲಾಗುವ ಅನುದಾನಗಳ ವೆಚ್ಚಗಳಿಗೆ ಸಂಬಂಧಿಸಿದೆ (ಕೆಲವು ಅನುದಾನಗಳು ಸ್ವತ್ತುಗಳ ಸೃಷ್ಟಿಗೆ ಮೀಸಲಾಗಿದ್ದರೂ ಸಹ).
- **ಬಂಡವಾಳ ಸ್ವೀಕೃತಿಗಳು** ಇವುಗಳನ್ನು ಒಳಗೊಂಡಿರುತ್ತವೆ:

- ➢ **ಋಣಸ್ವೀಕೃತಿಗಳು**: ಮಾರುಕಟ್ಟೆ ಸಾಲಗಳು, ಬಾಂಡುಗಳು, ಹಣಕಾಸು ಸಂಸ್ಥೆಗಳಿಂದ ಸಾಲಗಳು, ಮಾರ್ಗೋಪಾಯಗಳ ಅಡಿಯಲ್ಲಿನ ನಿವ್ವಳ ವಹಿವಾಟು, ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು, ಇತ್ಯಾದಿ;
- ➢ **ಋಣೇತರ ಸ್ವೀಕೃತಿಗಳು**: ಹಿಂಪಡೆದ ಹೂಡಿಕೆಯ ಆದಾಯಗಳು, ಸಾಲ ಮತ್ತು ಮುಂಗಡಗಳ ವಸೂಲಿಗಳು.

- **ಬಂಡವಾಳ ವೆಚ್ಚವು** ಭೂಸ್ವಾಧೀನ, ಕಟ್ಟಡ, ಯಂತ್ರೋಪಕರಣಗಳು, ಷೇರುಗಳಲ್ಲಿನ ಹೂಡಿಕೆ, ಮತ್ತು ಸಾರ್ವಜನಿಕ ವಲಯ ಮತ್ತು ಇತರ ಸಂಸ್ಥೆಗಳಿಗೆ ಸರ್ಕಾರವು ನೀಡುವ ಸಾಲ ಮತ್ತು ಮುಂಗಡಗಳ ವೆಚ್ಚವನ್ನು ಒಳಗೊಂಡಿದೆ.

ಹಣಕಾಸು ಲೆಕ್ಕಗಳ ರೂಪರೇಷೆಯನ್ನು **ಅನುಬಂಧ–1.2ರಲ್ಲಿ** ತೋರಿಸಲಾಗಿದೆ ಮತ್ತು ಸರ್ಕಾರಿ ಲೆಕ್ಕಗಳ ರಚನೆಯ ಸಚಿತ್ರವಿನ್ಯಾಸವನ್ನು **ನಕ್ಷೆ–1.5ರಲ್ಲಿ** ನೀಡಲಾಗಿದೆ.

**ನಕ್ಷೆ 1.5: ಸರ್ಕಾರಿ ಲೆಕ್ಕಗಳ ರಚನೆಯ ಸಚಿತ್ರ ವಿನ್ಯಾಸ**




## 1.5 ಆಯವ್ಯಯ ಪ್ರಕ್ರಿಯೆಗಳು

ಭಾರತದ ಸಂವಿಧಾನದ ಅನುಚ್ಛೇದ 202ರ ಅನ್ವಯ, ರಾಜ್ಯಪಾಲರು ರಾಜ್ಯದ (2019–20ರ) ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚಗಳ ವಿವರಣಾ ಪಟ್ಟಿಯನ್ನು ವಾರ್ಷಿಕ ಹಣಕಾಸು ವಿವರಣಾ ಪಟ್ಟಿಯ ರೂಪದಲ್ಲಿ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುತ್ತಾರೆ. ಅನುಚ್ಛೇದ 203ರ ಪ್ರಕಾರ, ಅನುದಾನ/ ವಿನಿಯೋಗಗಳ ವಿವರಣಾ ಪಟ್ಟಿಯನ್ನು ಬೇಡಿಕೆಗಳ ರೂಪದಲ್ಲಿ ರಾಜ್ಯ ವಿಧಾನಸಭೆಗೆ ಸಲ್ಲಿಸಲಾಗುತ್ತದೆ. ಅನುಮೋದನೆಯ ನಂತರ, ಅನುಚ್ಛೇದ 204ರ ಅಡಿಯಲ್ಲಿ ಸಂಚಿತ ನಿಧಿಯಿಂದ

ಅಗತ್ಯವಾದ ಹಣವನ್ನು ಪಡೆದುಕೊಳ್ಳಲು ಧನ ವಿನಿಯೋಗ ಮಸೂದೆಯನ್ನು ಶಾಸಕಾಂಗವು ಅಂಗೀಕರಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ, ಆಯವ್ಯಯ ದಾಖಲೆಗಳು ಮಹಿಳಾ ಆಯವ್ಯಯ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಜಿಲ್ಲಾವಾರು ಮತ್ತು ಯೋಜನಾವಾರು ಹಂಚಿಕೆಯ ದಾಖಲೆಗಳು ಮುಂತಾದವುಗಳನ್ನು ಒಳಗೊಂಡಿವೆ.

ರಾಜ್ಯ ಆಯವ್ಯಯ ಕೈಪಿಡಿಯು ಆಯವ್ಯಯ ನಿರ್ಮಾಣದ ಪ್ರಕ್ರಿಯೆಯನ್ನು ನಿಯಮಿಸುತ್ತದೆ ಮತ್ತು ರಾಜ್ಯ ಸರ್ಕಾರಕ್ಕೆ ಅದರ ವೆಚ್ಚ ಚಟುವಟಿಕೆಗಳ ನಿಯಂತ್ರಣದ ಮಾರ್ಗದರ್ಶನ ನೀಡುತ್ತದೆ. ರಾಜ್ಯ ಸರ್ಕಾರದ ಆಯವ್ಯಯ ಮತ್ತು ಇತರ ಆಯವ್ಯಯ ಉಪಕ್ರಮಗಳ ಅನುಷ್ಠಾನದ ಪರಿಶೋಧನಾ ಫಲಿತಾಂಶಗಳನ್ನು ಈ ವರದಿಯ ಅಧ್ಯಾಯ–3ರಲ್ಲಿ ವಿವರಿಸಲಾಗಿದೆ.

## 1.6 ಹಣಕಾಸು ವ್ಯವಹಾರಗಳ ಕ್ಷಿಪ್ರಚಿತ್ರ

2019–20ನೇ ಸಾಲಿನ ಬಜೆಟ್ ಅಂದಾಜುಗಳಿಗೆ ಮತ್ತು 2018–19ರ ವಾಸ್ತವಗಳಿಗೆ ಪ್ರತಿಯಾಗಿ ವಾಸ್ತವ ಹಣಕಾಸು ಫಲಿತಾಂಶಗಳ ವಿವರಗಳನ್ನು **ಕೋಷ್ಟಕ–1.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.2:ಬಜೆಟ್ ಅವಕಾಶಗಳಿಗೆ ಸಂವಾದಿಯಾಗಿವಾಸ್ತವಹಣಕಾಸುಫಲಿತಾಂಶಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಘಟಕಗಳು | 2018–19 (ವಾಸ್ತವ) | 2019–20 (ಆಯವ್ಯಯ ಅವಕಾಶ) | 2019–20 (ವಾಸ್ತವ) | ವಾಸ್ತವಕ್ಕೆ ಆಯವ್ಯಯ ಅವಕಾಶದ ಶೇಕಡಾವಾರು |
|---|---|---|---|---|---|
| ಭಾಗ–ಎ: ರಾಜಸ್ವ ಸ್ವೀಕೃತಿಗಳು | | | | | |
| 1 | ತೆರಿಗೆ ರಾಜಸ್ವ* | 96,830 | 79,895 | 1,02,363 | 128.12 |
| 2 | ತೆರಿಗೆಯೇತರ ರಾಜಸ್ವ | 6,773 | 8,055 | 7,681 | 95.36 |
| 3 | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲು | 35,895 | 61,656 | 30,919 | 50.15 |
| 4 | ಸಹಾಯಾನುದಾನಗಳು ಮತ್ತು ವಂತಿಗೆಗಳು | 25,481 | 32,257 | 34,480 | 106.89 |
| 5 | **ರಾಜಸ್ವ ಸ್ವೀಕೃತಿಗಳು (1+2+3+4)** | **1,64,979** | **1,81,863** | **1,75,443** | **96.47** |
| ಭಾಗ–ಬಿ: ಬಂಡವಾಳ ಸ್ವೀಕೃತಿಗಳು | | | | | |
| 6 | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 31 | 195 | 203 | 103.59 |
| 7 | ಇತರೆ ಬಂಡವಾಳ ಸ್ವೀಕೃತಿಗಳು | (–)6 | 80 | 45 | 56.25 |
| 8 | ಸಾರ್ವಜನಿಕ ಋಣ ಸ್ವೀಕೃತಿಗಳು | 41,914 | 48,601 | 50,459 | 103.82 |
| 9 | ಬಂಡವಾಳ ಸ್ವೀಕೃತಿಗಳು (6+7+8) | 41,939 | 48,876 | 50,707 | 103.75 |
| 10 | **ಒಟ್ಟು ಸ್ವೀಕೃತಿಗಳು (5+9)** | **2,06,918** | **2,30,739** | **2,26,150** | **98.01** |
| ಭಾಗ–ಸಿ: ವೆಚ್ಚ/ವಿತರಣೆ | | | | | |
| 11 | ರಾಜಸ್ವ ವೆಚ್ಚ | 1,64,300 | 1,81,605 | 1,74,258 | 95.95 |
| 12 | ಬಡ್ಡಿ ಪಾವತಿಗಳು | 16,614 | 19,060 | 19,903 | 104.42 |
| 13 | ಬಂಡವಾಳ ವೆಚ್ಚ | 34,659 | 40,080 | 35,529 | 88.65 |
| 14 | ಸಾಲಗಳು ಮತ್ತು ಮುಂಗಡಗಳು | 4,487 | 2,503 | 4,069 | 162.56 |
| 15 | ಸಾರ್ವಜನಿಕ ಋಣಪಾವತಿಗಳು | 11,083 | 9,964 | 10,180 | 102.17 |
| 16 | **ಒಟ್ಟು ವೆಚ್ಚ(11+13+14)** | **2,03,446** | **2,24,188** | **2,13,856** | **95.39** |
| ಭಾಗ–ಡಿ: ಆರ್ಥಿಕ ಸೂಚಕಗಳು | | | | | |
| 17 | ರಾಜಸ್ವ ಹೆಚ್ಚಳ/ಕೊರತೆ(5–11) | 679 | 258 | 1,185 | 459.30 |
| 18 | ವಿತ್ತೀಯ ಕೊರತೆ{(5+6+7)–16} | 38,442 | 42,050 | 38,166 | 90.76 |
| 19 | ಪ್ರಾಥಮಿಕ ಕೊರತೆ(18–12) | 21,828 | 22,990 | 18,263 | 79.44 |

*ತೆರಿಗೆ ರಾಜಸ್ವವು ಪ್ರಧಾನ ಲೆಕ್ಕಶೀರ್ಷಿಕೆ 0005 –ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ (₹8,773.82 ಕೋಟಿ) 0006 –ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ (₹42,147.23 ಕೋಟಿ) ಮತ್ತು 0008–ಸಮಗ್ರ ಸರಕು ಮತ್ತು ಸೇವೆಗಳ ತೆರಿಗೆ (ಶೂನ್ಯ) ಗಳನ್ನು ಒಳಗೊಂಡಿದೆ.

ರಾಜ್ಯವು ತನ್ನ ರಾಜಸ್ವ ವೆಚ್ಚವನ್ನು (₹1,74,258 ಕೋಟಿ) ಆಯವ್ಯಯ ಪ್ರಕ್ಷೇಪಣೆಯ ₹1,81,605 ಕೋಟಿಗಳ ಒಳಗೆ ಸೀಮಿತಗೊಳಿಸುವ ಮೂಲಕ ತನ್ನ ರಾಜಸ್ವ ಆಧಿಕ್ಯವನ್ನು ಹೆಚ್ಚಿಸಿಕೊಂಡಿದೆ.

## 1.7 ಸರ್ಕಾರದ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಕ್ಷಿಪ್ರಚಿತ್ರ

ಸರ್ಕಾರದ ಲೆಕ್ಕಗಳು ಸರ್ಕಾರದ ಹಣಕಾಸಿನ ಹೊಣೆಗಾರಿಕೆಗಳನ್ನು ಮತ್ತು ವೆಚ್ಚದಿಂದ ಸೃಷ್ಟಿ ಮಾಡಿದ ಸ್ವತ್ತುಗಳ ಚಿತ್ರವನ್ನು ನೀಡುತ್ತವೆ. ಹೊಣೆಗಾರಿಕೆಗಳು ಮುಖ್ಯವಾಗಿ ಆಂತರಿಕ ಋಣ, ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕ ಮತ್ತು ಮೀಸಲು ನಿಧಿಗಳಲ್ಲಿನ ಸ್ವೀಕೃತಿಗಳನ್ನು ಹಾಗೂ ಸ್ವತ್ತುಗಳು ಮುಖ್ಯವಾಗಿ ಬಂಡವಾಳ ವೆಚ್ಚ, ರಾಜ್ಯ ಸರ್ಕಾರವು ನೀಡುವ ಸಾಲಗಳು ಮತ್ತು ಮುಂಗಡಗಳು ಹಾಗೂ ನಗದು ಶಿಲ್ಕುಗಳನ್ನು ಒಳಗೊಂಡಿರುತ್ತವೆ. ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಭಾಗಗಳ ವೃದ್ಧಿಯ ದರವನ್ನು ಕೋಷ್ಟಕ–1.3ರಲ್ಲಿ ನೀಡಲಾಗಿದೆ ಮತ್ತು 31 ಮಾರ್ಚ್ 2019ರಲ್ಲಿದ್ದ ಸ್ಥಿತಿಗೆ ಹೋಲಿಸಿದಂತೆ 31 ಮಾರ್ಚ್ 2020ರಂದು ಇದ್ದ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಸಂಕ್ಷಿಪ್ತ ಸ್ಥಿತಿಯನ್ನು ಅನುಬಂಧ–1.3ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಸಂಕ್ಷಿಪ್ತ ಸ್ಥಿತಿ**

(₹ ಕೋಟಿಗಳಲ್ಲಿ)

| ಭಾದ್ಯತೆಗಳು | | | | | ಆಸ್ತಿಗಳು | | | | |
|---|---|---|---|---|---|---|---|---|---|
| | | 2018–19 | 2019–20 | *ಶೇಕಡಾವಾರು ವೃದ್ಧಿ* | | | 2018–19 | 2019–20 | *ಶೇಕಡಾವಾರು ವೃದ್ಧಿ* |
| ಸಂಚಿತನಿಧಿ | | | | | | | | | |
| ಅ | ಆಂತರಿಕ ಋಣ | 1,79,309 | 2,20,337 | 22.88 | ಅ | ಒಟ್ಟು ಬಂಡವಾಳ ವೆಚ್ಚ | 2,70,270 | 3,05,798 | 13.15 |
| ಆ | ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 14,658 | 13,908 | (–)5.12 | ಆ | ಸಾಲಗಳು ಮತ್ತು ಮುಂಗಡಗಳು | 24,981 | 28,847 | 15.48 |
| ಸಾದಿಲ್ವಾರು ನಿಧಿ | | 80 | 80 | – | | ಸಾದಿಲ್ವಾರು ನಿಧಿ | – | – | – |
| ಸಾರ್ವಜನಿಕಲೆಕ್ಕ | | | | | | | | | |
| ಅ | ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಮುಂತಾದವುಗಳು | 31,024 | 35,179 | 13.39 | ಅ | ಮುಂಗಡಗಳು | 7 | 7 | – |
| ಆ | ಠೇವಣಿಗಳು | 28,385 | 31,559 | 11.18 | ಆ | ಜಮೆಗಳು | 690 | 1,038 | 50.43 |
| ಇ | ಮೀಸಲು ನಿಧಿಗಳು | 32,872 | 37,599 | 14.38 | ಇ | ಅಮಾನತ್ತು ಮತ್ತು ಇತರೆ | – | – | – |
| ಈ | ಅಮಾನತ್ತು ಮತ್ತು ಇತರೆ | 6,660 | 5,297 | (–)20.47 | **ನಗದು ಶಿಲ್ಕು (ಮೀಸಲು ನಿಧಿಯಲ್ಲಿನ ಹೂಡಿಕೆಗಳನ್ನು ಒಳಗೊಂಡು)** | | **22,004** | **34,463** | **56.62** |
| ಉ | ಜಮೆಗಳು | – | – | – | **ಒಟ್ಟು** | | **3,17,952** | **3,70,153** | **16.42** |
| | **ವೆಚ್ಚದ ಮೇಲಿನ ಸ್ವೀಕೃತಿಗಳ ಸಂಚಿತ ಹೆಚ್ಚುವರಿ** | **24,964** | **26,194** | 4.93 | **ರಾಜಸ್ವ ಲೆಕ್ಕದಲ್ಲಿನ ಕೊರತೆ** | | – | – | – |
| **ಒಟ್ಟು** | | **3,17,952** | **3,70,153** | **16.42** | **ಒಟ್ಟು** | | **3,17,952** | **3,70,153** | **16.42** |

ಆಕರ: ಹಣಕಾಸು ಲೆಕ್ಕಗಳು

ಸಂಚಿತ ನಿಧಿಯಲ್ಲಿನ ಸ್ವತ್ತುಗಳ ಬೆಳವಣಿಗೆಯ ದರವು 2018–19ರಲ್ಲಿದ್ದ ಪ್ರತಿಶತ 15ರಿಂದ 2019–20ರಲ್ಲಿ ಪ್ರತಿಶತ 13ಕ್ಕೆ ಇಳಿದಿದ್ದರೆ, ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ ಹೊಣೆಗಾರಿಕೆಗಳು 2018–19ರಲ್ಲಿದ್ದ ಪ್ರತಿಶತ 19ರಿಂದ 2019–20ರಲ್ಲಿ ಪ್ರತಿಶತ 22ಕ್ಕೆ ಏರಿದೆ. ರಾಜ್ಯದ ಹಣಕಾಸು ಲೆಕ್ಕಗಳು ಎಲ್‌ಐಸಿ, ಜಿಐಸಿ, ನಬಾರ್ಡ್, ಎನ್‌ಸಿಡಿಸಿ ಇತ್ಯಾದಿಗಳ ಲೆಕ್ಕಗಳಲ್ಲಿನ ₹388.58 ಕೋಟಿಗಳ ವ್ಯತ್ಯಾಸವನ್ನು ಗಣನೆಗೆ ತೆಗೆದುಕೊಂಡ ನಂತರ 2019–20ರ ಅಂತ್ಯದ ವೇಳೆಗೆ ₹2,20,337 ಕೋಟಿಗಳನ್ನು ಬಾಕಿ ಇರುವ ಆಂತರಿಕ ಋಣವಾಗಿ ತೋರಿಸಿದೆ. ವರ್ಷದ ಕೊನೆಯಲ್ಲಿ ರಾಜ್ಯದ ನಗದು ಶಿಲ್ಕು ₹34,463 ಕೋಟಿ ಗಳಷ್ಟು ಇದ್ದಿತು. ನಗದು ಶಿಲ್ಕಿನ ಹೆಚ್ಚಳವು ಹಿಂದಿನ ವರ್ಷಕ್ಕಿಂತ ಶೇಕಡಾ 57ರಷ್ಟಿತ್ತು.

## 1.8 ವಿತ್ತೀಯ ಪ್ರಮಿತಿಗಳು

ಮೂರು ಪ್ರಮುಖ ಹಣಕಾಸಿನ ನಿಯತಾಂಕಗಳು – ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಒಟ್ಟಾರೆ ಹಣಕಾಸಿನ ಅಸಮತೋಲನದ ಪ್ರಮಾಣವನ್ನು ಸೂಚಿಸುತ್ತವೆ.

ಕೊರತೆಯ ಸ್ವರೂಪವು ಹಣಕಾಸಿನ ನಿರ್ವಹಣೆಯಲ್ಲಿನ ವಿವೇಚನೆಯ ಸೂಚಕವಾಗಿದೆ. ಇದಲ್ಲದೆ, ಕೊರತೆಯನ್ನು ತುಂಬಲು ಅನುಸರಿಸಿದ ಮಾರ್ಗಗಳು ಮತ್ತು ಸಂಗ್ರಹಿಸಿದ ಸಂಪನ್ಮೂಲಗಳ ಅನ್ವಯಿಕೆಯು ಅದರ ಹಣಕಾಸಿನ ಸ್ವಾಸ್ಥ್ಯದ ಪ್ರಮುಖ ಸೂಚಿಗಳಾಗಿವೆ. ಈ ವಿಭಾಗವು ಕೊರತೆಗಳ ಪ್ರವೃತ್ತಿ, ಸ್ವರೂಪ ಮತ್ತು ಪ್ರಮಾಣಗಳನ್ನು ಮತ್ತು ಈ ಕೊರತೆಗಳನ್ನು ತುಂಬಲು ಹಣಕಾಸು ಒದಗಿಸಲು ಅನುಸರಿಸಿದ ಮಾರ್ಗ ಮತ್ತು ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮವು 2019–20ರ ಆರ್ಥಿಕ ವರ್ಷಕ್ಕೆ ನಿಗದಿ ಪಡಿಸಿದ ಗುರಿಗಳಿಗೆ ಪ್ರತಿಯಾಗಿ ವಾಸ್ತವ ಆದಾಯ ಮತ್ತು ಕೊರತೆಗಳ ನಿರ್ಧಾರಣೆಯನ್ನು ಪ್ರಸ್ತುತ ಪಡಿಸುತ್ತದೆ.

### *1.8.1 ಕೊರತೆ/ಹೆಚ್ಚಳಗಳಲ್ಲಿನ ಪ್ರವೃತ್ತಿಗಳು*

2015–16ರಿಂದ 2019–20ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಪ್ರಮುಖ ವಿತ್ತೀಯ ಪ್ರಮಿತಿಗಳ ಹೆಚ್ಚಳ ಮತ್ತು ಕೊರತೆಗಳ ಪ್ರವೃತ್ತಿಯನ್ನು ನಕ್ಷೆ–1.6ರಲ್ಲಿ ನೀಡಲಾಗಿದೆ ಮತ್ತು ರಾಒಆಂಉಕ್ಕೆ ಸಾಪೇಕ್ಷವಾಗಿ ಹೆಚ್ಚಳ ಮತ್ತು ಕೊರತೆಗಳ ಪ್ರವೃತ್ತಿಯನ್ನು ನಕ್ಷೆ–1.7ರಲ್ಲಿ ನೀಡಲಾಗಿದೆ.

**ನಕ್ಷೆ 1.6: ಕೊರತೆಯ ಪ್ರಮಿತಿಗಳಲ್ಲಿನ ಪ್ರವೃತ್ತಿಗಳು**




| | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ಪ್ರಾಥಮಿಕ ಕೊರತೆ | -7826 | -15815 | -16128 | -21828 | -18263 |
| ವಿತ್ತೀಯ ಕೊರತೆ | -19169 | -28664 | -31101 | -38442 | -38166 |
| ರಾಜಸ್ವ ಹೆಚ್ಚಳ | 1789 | 1293 | 4518 | 679 | 1185 |

ರಾಜಸ್ವ ಹೆಚ್ಚಳ ವಿತ್ತೀಯ ಕೊರತೆ ಪ್ರಾಥಮಿಕ ಕೊರತೆ

**ನಕ್ಷೆ1.7:ರಾಒಆಂಉ ಕ್ಕೆ ಸಾಪೇಕ್ಷವಾಗಿ ಹೆಚ್ಚಳ/ಕೊರತೆಗಳ ಪ್ರವೃತ್ತಿ**




2019–20ರಲ್ಲಿ ರಾಜಸ್ವ ಹೆಚ್ಚಳವು, ರಾಜಸ್ವ ವೆಚ್ಚಕ್ಕಿಂತಲೂ ರಾಜಸ್ವ ಸ್ವೀಕೃತಿಗಳು ಶೇಕಡ 0.28ರಷ್ಟು[3] ಹೆಚ್ಚಾಗಿದ್ದುದರಿಂದ ಉಂಟಾಗಿದೆ. 2019–20ರಲ್ಲಿ ಬಂಡವಾಳ ವೆಚ್ಚವು ಸ್ವಲ್ಪ ಮಟ್ಟಿಗೆ ಶೇಕಡ 1.16ರಷ್ಟು (₹453 ಕೋಟಿ) ಹೆಚ್ಚಾಗಿದ್ದುದರಿಂದ ವಿತ್ತೀಯ ಕೊರತೆಯು ₹276 ಕೋಟಿಯಷ್ಟು ಕಡಿಮೆಯಾಗಿದೆ.

### *1.8.2 ವಿತ್ತೀಯ ಹೊಣೆಗಾರಿಕೆಗಳು ಮತ್ತು ರಾಒಆಂಉದಲ್ಲಿನ ಪ್ರವೃತ್ತಿಗಳು*

2015–16 ರಿಂದ 2019–20ರ ಅವಧಿಯಲ್ಲಿ ರಾಜ್ಯದ ಬಾಕಿ ಇರುವ ಹಣಕಾಸಿನ ಹೊಣೆಗಾರಿಕೆಗಳ ಪ್ರವೃತ್ತಿಗಳು ಮತ್ತು ರಾಒಆಂಉ ಕ್ಕೆ ಅದರ ಅನುಪಾತದ ವಿವರಗಳನ್ನು ಕೋಷ್ಟಕ–1.4ನೀಡಲಾಗಿದೆ.

**ಕೋಷ್ಟಕ 1.4: ಹಣಕಾಸಿನ ಹೊಣೆಗಾರಿಕೆಗಳು ಮತ್ತು ರಾಒಆಂಉದ ಪ್ರವೃತ್ತಿಗಳು**

(₹ ಕೋಟಿಯಲ್ಲಿ)

| ಹೊಣೆಗಾರಿಕೆಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಆಂತರಿಕ ಋಣ | 1,09,545 | 1,32,489 | 1,48,581 | 1,79,309 | 2,20,337 |
| ಭಾರತ ಸರ್ಕಾರದ ಸಾಲಗಳು | 13,002 | 13,794 | 14,555 | 14,657 | 13,908 |
| ಸಾರ್ವಜನಿಕ ಲೆಕ್ಕ | 53,076 | 64,788 | 69,922 | 76,410 | 85,172 |
| ಆಯವ್ಯಯವೇತರ ಸಾಲಗಳು | 7,699 | 10,248 | 13,173 | 14,862 | 18,103 |
| ಒಟ್ಟು ಆರ್ಥಿಕ ಹೊಣೆಗಾರಿಕೆಗಳು | **1,83,322** | **2,21,319** | **2,46,231** | **2,85,238** | **3,37,520** |
| ರಾಒಆಂಉಗೆ ಒಟ್ಟು ಹೊಣೆಗಾರಿಕೆಗಳು (ಶೇಕಡಾವಾರು) | 17.54 | 18.30 | 18.14 | 18.47 | 19.86 |
| ಗುರಿ (ಶೇಕಡಾವಾರು) | 25.00 | 25.00 | 25.00 | 25.00 | 25.00 |

ರಾಜ್ಯದ ಹಣಕಾಸಿನ ಹೊಣೆಗಾರಿಕೆಗಳು 2015–16ರಲ್ಲಿದ್ದ ₹1,83,322 ಕೋಟಿಗಳಿಂದ 2019–20ರಲ್ಲಿ ₹3,37,520 ಕೋಟಿಗೆ ಏರಿ ಶೇಕಡಾ 84ರಷ್ಟು ಏರಿಕೆಯಾಗಿದೆ. ಆಂತರಿಕ ಸಾಲವು 2019–20ರಲ್ಲಿ ಶೇಕಡಾ 65 ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಸಾಲಗಳು ಒಟ್ಟು ಹಣಕಾಸಿನ ಹೊಣೆಗಾರಿಕೆಗಳ ಶೇಕಡಾ 25ರಷ್ಟಿದೆ. ರಾಒಆಂಉಕ್ಕೆ ಒಟ್ಟು ಹೊಣೆಗಾರಿಕೆಗಳು 2015–16ರಲ್ಲಿದ್ದ ಶೇಕಡ 17.54 ರಿಂದ 2019–

[3] ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ವೃದ್ಧಿಯು 2019–20ರಲ್ಲಿ ಕ್ರಮವಾಗಿ ಶೇಕಡ 6.34 ಮತ್ತು 6.06ರಷ್ಟಿದೆ. ಇವೆರಡರ ವ್ಯತ್ಯಾಸವು ಶೇಕಡ 0.28ರಷ್ಟಿದೆ.

20ರಲ್ಲಿ ಶೇಕಡ 19.86ಕ್ಕೆ ಏರಿದ್ದು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದರೂ, ಕರ್ನಾಟಕ ವಿತ್ತೀಯ ಸುಧಾರಣಾ ನಿಯಮದಡಿಯಲ್ಲಿ ಸೂಚಿಸಲಾಗಿರುವ ಗರಿಷ್ಠ ಮಿತಿಯ ಒಳಗೆ ಇದೆ.

ವಿತ್ತೀಯ ಕೊರತೆ ಹಾಗೂ ಸಾಲ/ರಾಒಆಉದ ಅನುಪಾತವು ರಾಜ್ಯ ವಿತ್ತೀಯ ಸುಧಾರಣಾ ಹಾಗೂ ಆಯವ್ಯಯ ನಿರ್ವಹಣಾ ಮಿತಿಯ ಒಳಗಿದ್ದು, ರಾಜ್ಯವು ಹೆಚ್ಚು ಸಾಲ ಪಡೆಯಲು ಹಾಗೂ ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಅನುವು ಮಾಡಿದೆ. ಆದರೆ, 2019-20ರಲ್ಲಿ ರಾಜ್ಯವು ಕಳೆದ ವರ್ಷಕ್ಕಿಂತ ಶೇಕಡ 18.59ರಷ್ಟು (ಆಂತರಿಕ ಸಾಲವು ಆಯವ್ಯಯದ ಹೊರಗಿನ ಸಾಲವನ್ನು ಒಳಗೊಂಡಿದೆ) ಅಧಿಕ ಸಾಲ ಮಾಡಿದ್ದರೂ ಸಹ ಬಂಡವಾಳ ವೆಚ್ಚವು ಕಳೆದ ವರ್ಷಕ್ಕಿಂತ ಶೇಕಡ 1.14ರಷ್ಟು ಮಾತ್ರ ಹೆಚ್ಚಾಗಿದ್ದಿತು.

## 1.9 ರಾಜ್ಯದ ಹಣಕಾಸಿನ ಪರಿಸ್ಥಿತಿ

ಹಣಕಾಸಿನ ನಿರ್ವಹಣೆಯಲ್ಲಿ ಅಂತರ-ಪೀಳಿಗೆಯ ನೀತಿಯನ್ನು ಮತ್ತು ದೀರ್ಘಕಾಲೀನ ದೃಢ-ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ 2002ನ್ನು ಜಾರಿಗೆ ತರಲಾಯಿತು.

### *1.9.1 ಪ್ರಮುಖ ಹಣಕಾಸಿನ ಪ್ರಮಿತಿಗಳು ಮತ್ತು ಅವುಗಳ ಸಾಧನೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ 2002ರ ಗುರಿಗಳು*

ಸಾಲಗಳು, ಋಣ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ಸಾಕಷ್ಟು ರಾಜಸ್ವ ಹೆಚ್ಚಳ ಮತ್ತು ವಿವೇಚನಾ ಯುಕ್ತ ಋಣ ನಿರ್ವಹಣೆಯನ್ನು ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ 2002 ಕಲ್ಪಿಸಿದೆ. ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಗುರಿಗಳು ಮತ್ತು ಅವುಗಳ ವಾಸ್ತವ ಮಟ್ಟಗಳನ್ನು ಕೋಷ್ಟಕ-1.5ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5: ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ನಿಬಂಧನೆಗಳ ಅನುಸರಣೆ**

| ಆರ್ಥಿಕ ನಿಯತಾಂಕಗಳು | ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿ | ಸಾಧನೆ | | | | |
|---|---|---|---|---|---|---|
| | | 2015-16 | 2016-17 | 2017-18 | 2018-19 | 2019-20 |
| ರಾಜಸ್ವ ಹೆಚ್ಚಳ (+) (₹ ಕೋಟಿಗಳಲ್ಲಿ) | ರಾಜಸ್ವ ಹೆಚ್ಚಳವನ್ನು ನಿರ್ವಹಿಸುವುದು | 1,789 | 1,293 | 4,518 | 679 | 1,185 |
| | | √ | √ | √ | √ | √ |
| ವಿತ್ತೀಯ ಕೊರತೆ (–) (ರಾಒಆಉಗೆ ಶತಾಂಶವಾಗಿ) | ಶೇಕಡ 3.00 | 19,169 (1.83) | 28,664 (2.37) | 31,101 (2.29) | 38,442 (2.49) | 38,166 (2.25) |
| | | √ | √ | √ | √ | √ |
| ರಾಒಆಉಗೆ ಒಟ್ಟು ಬಾಕಿಯಿರುವ ಋಣದ ಅನುಪಾತ (ಶತಾಂಶವಾಗಿ) | ಶೇಕಡ 25.00 | 17.54 | 18.30 | 18.14 | 18.47 | 19.86 |
| | | √ | √ | √ | √ | √ |

ಫೆಬ್ರವರಿ 2014 ರಲ್ಲಿ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ತಿದ್ದುಪಡಿಯ ಮೂಲಕ, ಪರಿಚ್ಛೇದ-2 (ಜಿ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಒಟ್ಟು ಹೊಣೆಗಾರಿಕೆಗಳ ವ್ಯಾಪ್ತಿಯನ್ನು ಸಾರ್ವಜನಿಕ ವಲಯ ಉದ್ಯಮಗಳು (ಪಿಎಸ್ ಯು) ಮತ್ತು ವಿಶೇಷ ಉದ್ದೇಶ ಸಾಧನಗಳು[4] (ಎಸ್ ಪಿ ವಿ) ಮತ್ತು ಇತರ ಸಮಾನ ಸಾಧನಗಳು ಮಾಡಿದ ಸಾಲಗಳನ್ನು ಒಳಗೊಳ್ಳಲು ವಿಸ್ತರಿಸಲಾಯಿತು. ಇದರಿಂದಾಗಿ ಈ ಸಾಲಗಳ ಅಸಲು ಮತ್ತು/ಅಥವ ಬಡ್ಡಿಯನ್ನು ರಾಜ್ಯದ ಆಯವ್ಯಯದಿಂದಲೇ ಪೂರೈಸಬೇಕಾಗಿದೆ. ರಾಜ್ಯ ಸರ್ಕಾರವು, ಉತ್ತರೋತ್ತರ ಹಣಕಾಸು ಆಯೋಗಗಳು (ಎಫ್‌ಸಿ) ನಿಗದಿಪಡಿಸುವ ಪ್ರಮಿತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಕಾಲಕಾಲಕ್ಕೆ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮಕ್ಕೆ ತಿದ್ದುಪಡಿ ಮಾಡುತ್ತಿದೆ. ರಾಜ್ಯ ಸರ್ಕಾರವು 2004-05ರಿಂದ ರಾಜಸ್ವ ಹೆಚ್ಚಳವನ್ನು ದಾಖಲಿಸಿದೆ ಮತ್ತು ವಿತ್ತೀಯ

[4]ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶಿತ ಸಾಧನಗಳ ಸಾಲಗಳು ಆಯವ್ಯಯೇತರ ಸಾಲಗಳಾಗಿವೆ.

ಕೊರತೆ ಮತ್ತು ಋಣ-ರಾಒಆಂಉ ದ ಅನುಪಾತವು ಅಧಿನಿಯಮದಡಿ ವಿಧಿಸಿದ ಶೇಕಡ ಮೂರರ ಮತ್ತು ರಾಒಆಂಉದ ಶೇಕಡ 25ರ ಮಿತಿಯ ಒಳಗಿದೆ.

### *1.9.2 2019-20ರ ಮಧ್ಯಮಾವಧಿ ವಿತ್ತೀಯ ಯೋಜನೆಯ (ಎಂ ಟಿ ಎಫ್ ಪಿ) ಪ್ರಕ್ಷೇಪಣಗಳಿಗೆ ಪ್ರತಿಯಾಗಿ ವಾಸ್ತವಗಳು*

ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಅನ್ವಯ ರಾಜ್ಯ ಸರ್ಕಾರವು ಶಾಸನಸಭೆಯ ಮುಂದೆ ವಾರ್ಷಿಕ ಆಯವ್ಯಯದ ಜೊತೆಗೆ ಐದು ವರ್ಷಗಳ ಹಣಕಾಸಿನ ಯೋಜನೆಯನ್ನು ಮಂಡಿಸಬೇಕಾಗುತ್ತದೆ. ಮಧ್ಯಮಾವಧಿ ವಿತ್ತೀಯ ಯೋಜನೆಯು ನಿಗದಿತ ಹಣಕಾಸಿನ ಸೂಚಕಗಳಿಗಾಗಿ ಐದು ವರ್ಷಗಳ ಆವರ್ತನ ಗುರಿಯನ್ನು ನಿಗದಿಪಡಿಸಿದೆ.

ಮಧ್ಯಮಾವಧಿ ವಿತ್ತೀಯ ಯೋಜನೆಯಡಿ2019-20ರಲ್ಲಿ ಮಾಡಿದ ಪ್ರಕ್ಷೇಪಗಳು ಮತ್ತು ವರ್ಷದ ವಾಸ್ತವಿಕತೆಗಳ ನಡುವಿನ ವ್ಯತ್ಯಾಸವನ್ನು ಕೋಷ್ಟಕ-1.6 ಸೂಚಿಸುತ್ತದೆ.

**ಕೋಷ್ಟಕ-1.6:2019-20ರಲ್ಲಿನ ಮಧ್ಯಮಾವಧಿ ವಿತ್ತೀಯ ಯೋಜನೆಯ ಪ್ರಕ್ಷೇಪ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸ**

(₹ ಕೋಟಿಗಳಲ್ಲಿ)

| ಕ್ರಮಸಂಖ್ಯೆ | ಆರ್ಥಿಕ ಸ್ಥಿರಾಂಕಗಳು | ಮ.ಅ.ವಿ.ಯೋ 2018-22ರ ಅನ್ವಯ ಪ್ರಕ್ಷೇಪಣೆಗಳು | ವಾಸ್ತವಗಳು (2019-20) | ವ್ಯತ್ಯಾಸ (ಶೇಕಡಾವಾರು) |
|---|---|---|---|---|
| 1 | ಸ್ವಂತ ತೆರಿಗೆ ರಾಜಸ್ವ | 1,20,898 | 1,02,363 | (-) 15.33 |
| 2 | ತೆರಿಗೆಯೇತರ ರಾಜಸ್ವ | 8,592 | 7,681 | (-) 10.60 |
| 3 | ಕೇಂದ್ರ ತೆರಿಗೆಗಳ ಪಾಲು | 41,070 | 30,919 | (-) 24.72 |
| 4 | ಭಾರತ ಸರ್ಕಾರದಿಂದ ಸಹಾಯಾನುದಾನಗಳು | 17,263 | 34,480 | (+) 99.73 |
| 5 | ರಾಜಸ್ವ ಸ್ವೀಕೃತಿಗಳು (1+2+3+4) | 1,87,823 | 1,75,443 | (-) 6.59 |
| 6 | ರಾಜಸ್ವ ವೆಚ್ಚ | 1,87,633 | 1,74,258 | (-) 7.13 |
| 7 | ಒಟ್ಟು ಸಾಲ | 3,37,756 | 3,37,520 | (-) 0.07 |
| 8 | ಜಿಎಸ್‌ಡಿಪಿ | 15,70,206 | 16,99,115 | (+) 8.21 |
| 9 | ರಾಜಸ್ವ ಕೊರತೆ(-)/ಹೆಚ್ಚಳ (+) (5-6) | 190 | 1,185 | (+) 523.68 |
| 10 | ವಿತ್ತೀಯ ಕೊರತೆ (-)/ಅಧಿಕ (+) | 45,536 | 38,166 | (-) 16.18 |
| 11 | ಋಣ-ರಾಒಆಂಉ ಅನುಪಾತ (*ಶತಾಂಶವಾಗಿ*) | 20.51 | 19.86 | (-) 0.65 |
| 12 | ಪ್ರಸಕ್ತ ದರದಲ್ಲಿ (ಶತಾಂಶವಾಗಿ) ರಾಒಆಂಉ ವೃದ್ಧಿಯ ದರ | 11.51 | 10.02 | (-) 1.49 |

ಮೇಲಿನ ಕೋಷ್ಟಕದಲ್ಲಿ ಕಂಡುಬಂದಂತೆ, 2019-20ರಲ್ಲಿ ಎಲ್ಲಾ ಪ್ರಮುಖ ವಿತ್ತೀಯ ಪ್ರಮಿತಿಗಳಿಗೆ - ರಾಜಸ್ವ ಸ್ವೀಕೃತಿಗಳು, ವಿತ್ತೀಯ ಕೊರತೆ ಮತ್ತು ಋಣ-ರಾಒಆಂಉದ ಅನುಪಾತ - ಸಂಬಂಧಿಸಿದಂತೆ ಮಧ್ಯಮಾವಧಿ ವಿತ್ತೀಯ ಯೋಜನೆಯಡಿ ಮಾಡಿದ ಪ್ರಕ್ಷೇಪಗಳು ಸುಧಾರಿಸಿದೆ. ಆದಾಗ್ಯೂ, ರಾಒಆಂಉ ದ ವೃದ್ಧಿಯ ದರವು ಮಧ್ಯಮಾವಧಿ ವಿತ್ತೀಯ ಯೋಜನೆಯಡಿ ಮಾಡಿದ ಪ್ರಕ್ಷೇಪಕ್ಕಿಂತ ಕಡಿಮೆಯಿದ್ದು ಗುರಿಯನ್ನು ಮುಟ್ಟಿಲ್ಲ.

### *1.10 2019-20ರಲ್ಲಿ ರಾಜಸ್ವ ಸ್ವೀಕೃತಿಗಳು, ವಿತ್ತೀಯ ಕೊರತೆ ಮತ್ತು ಹೊಣೆಗಾರಿಕೆಗಳ ಮೇಲೆ ಕೆಲವು ವಹಿವಾಟುಗಳ ಪರಿಣಾಮ*

2019-20ರ ಅವಧಿಯಲ್ಲಿನ ಕೆಲವು ವಹಿವಾಟುಗಳ ಪರಿಶೀಲನೆಯಿಂದ, ರಾಜ್ಯ ಹಣಕಾಸು ಲೆಕ್ಕಗಳ ಲೆಕ್ಕಗಳಿಗೆ ಟಿಪ್ಪಣಿಯ ಕಂಡಿಕೆ xxviiiರಲ್ಲಿ ವಿಶದಪಡಿಸಿದಂತೆ ಮತ್ತು ಕೋಷ್ಟಕ 1.7ರಲ್ಲಿ ವಿವರಿಸಿರುವಂತೆ ಕೆಲವು ಲೆಕ್ಕ ಹೊಂದಾಣಿಕೆಗಳಿಂದ ರಾಜಸ್ವ ಹೆಚ್ಚಳ ಮತ್ತು ವಿತ್ತೀಯ ಕೊರತೆಯ ಮೇಲೆ ಪರಿಣಾಮ ಬೀರಿರುವುದು ಕಂಡುಬಂದಿದೆ.

**ಕೋಷ್ಟಕ–1.7:2019–20ರ ಅವಧಿಯಲ್ಲಿ ಕೆಲವು ವಹಿವಾಟುಗಳ ಪರಿಣಾಮ**

(₹ ಕೋಟಿಗಳಲ್ಲಿ)

| ಕ್ರಮಸಂಖ್ಯೆ | ವಹಿವಾಟಿನಸ್ವರೂಪ | ರಾಜಸ್ವಹೆಚ್ಚಳ | | ವಿತ್ತೀಯಕೊರತೆ | |
|---|---|---|---|---|---|
| | | ಹೆಚ್ಚಿಗೆಹೇಳಿರುವುದು | ಕಡಿಮೆಹೇಳಿರುವುದು | ಹೆಚ್ಚಿಗೆಹೇಳಿರುವುದು | ಕಡಿಮೆಹೇಳಿರುವುದು |
| 1 | ರಾಜಸ್ವ ವೆಚ್ಚದ ಬದಲು ಬಂಡವಾಳ ವೆಚ್ಚದಡಿ ಭರಿಸಿರುವುದು | 28.73 | – | – | – |
| 2 | ಮೀಸಲು ನಿಧಿಗೆ ಹಸಿರು ತೆರಿಗೆಯನ್ನು ವರ್ಗಾವಣೆ ಮಾಡದಿರುವುದು | 14.55 | – | – | 14.55 |
| 3 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವೆಚ್ಚ ವರ್ಗಾವಣೆ ಆಗದಿರುವುದು | – | 268.45 | 268.45 | – |
| 4 | ಮೀಸಲು ನಿಧಿಗೆ ಮತ್ತು ಬಡ್ಡಿ ನೀಡುವ ಠೇವಣಿಗಳ ಪ್ರತಿಯಾಗಿ ಬಡ್ಡಿಯನ್ನು ಹೊಂದಾಣಿಕೆ ಮಾಡದಿರುವುದು | 48.17 | – | – | 48.17 |
| 5 | ಬಳಕೆಯಾಗದ ಪಂ.ರಾ.ಸಂಸ್ಥೆಗಳ ಅನುದಾನಗಳನ್ನು ಹಿಂಬರೆದಿರುವುದು | 1,732.64 | – | – | 1,732.64 |
| ಒಟ್ಟು | | **1,824.09** | **268.45** | **268.45** | **1,795.36** |

ಆಕರ: ಲೆಕ್ಕಗಳಿಗೆ ಟಿಪ್ಪಣಿಗಳು, ಹಣಕಾಸು ಲೆಕ್ಕಗಳು 2019–20

ಮೇಲಿನ ವಹಿವಾಟುಗಳನ್ನು ಕೆಳಗೆ ಚರ್ಚಿಸಲಾಗಿದೆ:

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಂಬಳ ಸಹಾಯಾನುದಾನ ಮತ್ತು ಸಾಮಾನ್ಯ ವೆಚ್ಚಗಳಿಗೆ ಸಂಬಂಧಿಸಿದ ₹28.73 ಕೋಟಿ ವೆಚ್ಚವನ್ನು ರಾಜಸ್ವ ವೆಚ್ಚದ ಬದಲು ಬಂಡವಾಳದಡಿಯಲ್ಲಿ ದಾಖಲಿಸಲಾಗಿದೆ, ಇದನ್ನು ಅಧ್ಯಾಯ 3ರ ಕಂಡಿಕೆ 3.6.2.2ರಲ್ಲಿ ಚರ್ಚಿಸಲಾಗಿದೆ;

- ರಾಜ್ಯದ ಸಂಚಿತ ನಿಧಿಯಡಿಯಲ್ಲಿ ಸಂಗ್ರಹಿಸಲಾದ ₹14.55 ಕೋಟಿಗಳ ಹಸಿರು ತೆರಿಗೆ ಉಪಕರವನ್ನು ಮೀಸಲು ನಿಧಿಯಲ್ಲಿರುವ ನಿಧಿ ಖಾತೆಗೆ ವರ್ಗಾಯಿಸಲಾಗಿಲ್ಲ, ಇದನ್ನು ಅಧ್ಯಾಯ 2ರ ಕಂಡಿಕೆ 2.6.2(ಬಿ) ನಲ್ಲಿ ಚರ್ಚಿಸಲಾಗಿದೆ.

- ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯಡಿಯಲ್ಲಿನ ₹268.45 ಕೋಟಿ ವೆಚ್ಚವನ್ನು ಸಂಚಿತ ನಿಧಿಯಿಂದ ಸಾರ್ವಜನಿಕ ಲೆಕ್ಕದಲ್ಲಿನ ನಿಧಿ ಖಾತೆಗೆ ವರ್ಗಾಯಿಸಲಾಗಿಲ್ಲ, ಇದನ್ನು ಅಧ್ಯಾಯ 2ರ ಕಂಡಿಕೆ 2.6.2 (ಡಿ) ನಲ್ಲಿ ವಿಶದವಾಗಿ ವಿವರಿಸಲಾಗಿದೆ. ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಆರ್ಥಿಕ ಇಲಾಖೆಯು, ಪ್ರಕರಣವು ನ್ಯಾಯಲಯದಲ್ಲಿ ಬಾಕಿ ಇದ್ದು ಸಂಬಂಧಿಸಿದ ವೆಚ್ಚವನ್ನು ನಿಧಿ ಖಾತೆಗೆ ವರ್ಗಾಯಿಸಿಲ್ಲವೆಂದು ತಿಳಿಸಿದೆ. ಸಂಬಂಧಿಸಿದ ಇಲಾಖೆಯನ್ನು ಸಂಪರ್ಕಿಸಿ ಪ್ರಕರಣದ ಪರಿಣಾಮವನ್ನು ತಿಳಿದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದೆ.

- ರಾಜ್ಯ ಸರ್ಕಾರವು ಮೀಸಲು ನಿಧಿಗಳಲ್ಲಿನ ಹೂಡಿಕೆ ಮಾಡದೆ ಉಳಿದ ಮತ್ತು ಬಡ್ಡಿ ಸಹಿತ ಠೇವಣಿಗಳ ಅಡಿಯ ಶಿಲ್ಕುಗಳ ಮೇಲೆ ಬಡ್ಡಿ ಪಾವತಿಸಬೇಕಾಗಿತ್ತು. ವರ್ಷದ ಆರಂಭದಲ್ಲಿ ಹೂಡಿಕೆ ಮಾಡದ ಶಿಲ್ಕು ₹833.30 ಕೋಟಿಗಳಷ್ಟಿತ್ತು. ಮೀಸಲು ನಿಧಿಗಳ ಮೇಲಿನ ಶೇಕಡ 5.8 (ಮಾರ್ಗೋಪಾಯಗಳ ಮೇಲಿನ ಸರಾಸರಿ ಬಡ್ಡಿದರ) ಮತ್ತು ಬಡ್ಡಿ ಸಹಿತ ಠೇವಣಿ ಮತ್ತು ಮುಂಗಡಗಳ ಮೇಲಿನ ಶೇಕಡ 6ರ ದರದಲ್ಲಿ ₹48.17 ಕೋಟಿಯ ಬಡ್ಡಿ ಹೊಣೆಗಾರಿಕೆಗೆ

ಅವಕಾಶವನ್ನು ಕಲ್ಪಿಸಲಾಗಿಲ್ಲ. ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು 2017–18ರಲ್ಲಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಶಿಲ್ಕಿನ ₹41.98 ಕೋಟಿಗಳಿಗೆ ₹2.43 ಕೋಟಿಗಳ ಬಡ್ಡಿ ಪಾವತಿಗಾಗಿ ಅವಕಾಶವನ್ನು 2020–21ರಲ್ಲಿ ಮಾಡಲಾಗಿದೆ ಎಂದು ತಿಳಿಸಿದೆ. ಆದರೆ, ಉತ್ತರವು ಉಳಿದ ಠೇವಣಿ ಹಾಗೂ ಮೀಸಲು ನಿಧಿಯಡಿಯಲ್ಲಿ ಉಳಿದ ಶಿಲ್ಕುಗಳ ಮೇಲಿನ ಬಡ್ಡಿ ಪಾವತಿಯ ಕುರಿತು ಮೌನವಾಗಿದೆ.

- ಮೇಲಿನ ಕೋಷ್ಟಕದಲ್ಲಿನ ಕ್ರಮ ಸಂಖ್ಯೆ 5ಕ್ಕೆ ಸಂಬಂಧಿಸಿದಂತೆ 2016ರ ಡಿಸೆಂಬರ್‌ನಲ್ಲಿ ರಾಜ್ಯ ಸರ್ಕಾರವು ಒಂದು ನಿರ್ದಿಷ್ಟ ವರ್ಷದಲ್ಲಿ ಖರ್ಚು ಮಾಡದಿರುವ ಬಾಕಿಗಳ ಹೊಂದಾಣಿಕೆಯನ್ನು ತಕ್ಷಣದ ಮುಂದಿನ ವರ್ಷದ ಆಯವ್ಯಯದಲ್ಲಿ ಮಾಡಬೇಕೆಂದು ಎಂದು ವಿಧಿಸಿತ್ತು. ಅದರಂತೆ, 2017–18ನೇ ವರ್ಷಕ್ಕೆ ಜಿಲ್ಲಾ ಪಂಚಾಯತ್‌ಗಳಿಗೆ ಸಂಬಂಧಿಸಿದ ₹511.04 ಕೋಟಿ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಸಂಬಂಧಿಸಿದ ₹1,221.60 ಕೋಟಿ ಗಳನ್ನು ಸಾರ್ವಜನಿಕ ಲೆಕ್ಕದಿಂದ (ಪ್ರಧಾನ ಶೀರ್ಷಿಕೆ 8448) ಹಿಂಬರೆಯಲು ರಾಜ್ಯ ಸರ್ಕಾರ 2020ರ ಫೆಬ್ರವರಿಯಲ್ಲಿ ಅನುಮೋದನೆ ನೀಡಿತ್ತು. ಇದು ಪ್ರಸಕ್ತ ವರ್ಷದಲ್ಲಿ ವೆಚ್ಚವನ್ನು ಮುಚ್ಚಿಡುವುದರಲ್ಲಿ ಪರ್ಯವಸಾನವಾಯಿತು. ಇದು ₹1,732.64 ಕೋಟಿಗಳಷ್ಟು ರಾಜಸ್ವ ಹೆಚ್ಚಳವನ್ನು ಅಧಿಕವಾಗಿ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆಯಾಗಿ ತೋರಿಸಲು ಕಾರಣವಾಗಿದೆ. ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಮುಂದಿನ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ – 1) ಮತ್ತು ಪ್ರಧಾನ ಮಹಾಲೇಖಾಪಾಲ (ಲೆ. ಮತ್ತು ಹ.)ರ ಜೊತೆ ಹಿಂಬರತದ ಲೆಕ್ಕ ವಿಧಾನವನ್ನು ಚರ್ಚಿಸಿ ನಂತರ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿತು.

# ಅಧ್ಯಾಯ– 2

# ರಾಜ್ಯದ ಹಣಕಾಸು ವ್ಯವಹಾರಗಳು

# ಅಧ್ಯಾಯ 2 – ರಾಜ್ಯದ ಹಣಕಾಸು ವ್ಯವಹಾರಗಳು

## 2.1 ಪೀಠಿಕೆ

ಈ ಅಧ್ಯಾಯವು, ರಾಜ್ಯದ ಹಣಕಾಸು ಲೆಕ್ಕಗಳ ಆಧಾರದ ಮೇಲೆ ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಪ್ರಮುಖ ಹಣಕಾಸಿನ ಸಮಗ್ರತೆಗಳಲ್ಲಿನ ನಿರ್ಣಾಯಕ ಬದಲಾವಣೆಗಳ ವಿಶ್ಲೇಷಣೆಯನ್ನು, 2015–16 ರಿಂದ 2019–20ರವರೆಗಿನ ಐದು ವರ್ಷಗಳ ಅವಧಿಯಲ್ಲಿನ ಒಟ್ಟಾರೆ ಪ್ರವೃತ್ತಿಗಳು, ರಾಜ್ಯದ ಋಣ ಸಹಿಷ್ಣುತೆ ಮತ್ತು ಪ್ರಮುಖ ಸಾರ್ವಜನಿಕ ಲೆಕ್ಕ ವ್ಯವಹಾರಗಳ ರಾಜ್ಯದ ಹಣಕಾಸಿನ ಸ್ಥೂಲ ದೃಷ್ಟಿಕೋನವನ್ನು ನೀಡುತ್ತದೆ.

## 2.2 2019–20ರ ಪ್ರಮುಖ ಹಣಕಾಸಿನ ಸಮಗ್ರತೆಯಲ್ಲಿನ ಪ್ರಮುಖ ಬದಲಾವಣೆಗಳು

ಹಿಂದಿನ ವರ್ಷಕ್ಕೆ (2018–19) ಹೋಲಿಸಿದಂತೆ 2019–20ರ ಪ್ರಮುಖ ಹಣಕಾಸಿನ ಒಟ್ಟು ಮೊತ್ತದಲ್ಲಿನ ಪ್ರಮುಖ ಬದಲಾವಣೆಗಳ ಪಕ್ಷಿನೋಟವನ್ನು **ಕೋಷ್ಟಕ–2.1** ಪ್ರಸ್ತುತಪಡಿಸುತ್ತದೆ. ವಿವರಗಳನ್ನು ಅನುಬಂಧ–2.1ರಲ್ಲಿ ನೀಡಲಾಗಿದೆ. 2019–20ರ ಸ್ವೀಕೃತಿಗಳು ಮತ್ತು ವಿತರಣೆಯ ವಿವರಗಳು ಮತ್ತು ಹಿಂದಿನ ನಾಲ್ಕು ವರ್ಷಗಳಲ್ಲಿ ಒಟ್ಟಾರೆ ಹಣಕಾಸಿನ ಸ್ಥಿತಿಯನ್ನು ಅನುಬಂಧ–2.2ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–2.1: 2018–19ಕ್ಕೆ ಹೋಲಿಸಿದರೆ 2019–20ರಲ್ಲಿ ಪ್ರಮುಖ ಹಣಕಾಸಿನ ಸಮಗ್ರತೆಯಲ್ಲಿನ ಬದಲಾವಣೆಗಳು**

| | |
|---|---|
| ***ರಾಜಸ್ವ ಸ್ವೀಕೃತಿ*** | ✓ ರಾಜ್ಯದ ರಾಜಸ್ವ ಸ್ವೀಕೃತಿಗಳು ಶೇಕಡಾ 6.34ರಷ್ಟು ಏರಿಕೆಯಾಗಿದೆ<br>✓ ರಾಜ್ಯದ ಸ್ವಂತ ತೆರಿಗೆ ಸ್ವೀಕೃತಿಗಳು ಶೇಕಡಾ 5.71ರಷ್ಟು ಏರಿಕೆಯಾಗಿದೆ.<br>✓ ಸ್ವಂತ ತೆರಿಗೆಯೇತರ ಸ್ವೀಕೃತಿಗಳು ಶೇಕಡಾ 13.41ರಷ್ಟು ಏರಿಕೆಯಾಗಿದೆ.<br>✓ ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಶೇಕಡಾ 13.86ರಷ್ಟು ಇಳಿಕೆಯಾಗಿದೆ<br>✓ ಭಾರತ ಸರ್ಕಾರದ ಸಹಾಯಾನುದಾನಗಳು ಶೇಕಡಾ 35.32ರಷ್ಟು ಏರಿಕೆಯಾಗಿದೆ. |
| ***ರಾಜಸ್ವ ವೆಚ್ಚ*** | ✓ ರಾಜಸ್ವ ವೆಚ್ಚವು ಶೇಕಡಾ 6.06ರಷ್ಟು ಏರಿಕೆಯಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡಾ 14.46ರಷ್ಟು ಏರಿಕೆಯಾಗಿದೆ.<br>✓ ಸಾಮಾಜಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡಾ2.30ರಷ್ಟು ಇಳಿಕೆಯಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡಾ9.01ರಷ್ಟು ಏರಿಕೆಯಾಗಿದೆ.<br>✓ ಸಹಾಯಾನುದಾನಗಳ ಮೇಲಿನ ವೆಚ್ಚವು ಶೇಕಡಾ 18.43ರಷ್ಟು ಏರಿಕೆಯಾಗಿದೆ. |
| ***ಬಂಡವಾಳ ವೆಚ್ಚ*** | ✓ ಬಂಡವಾಳ ವೆಚ್ಚವು ಶೇಕಡಾ 2.51ರಷ್ಟು ಏರಿಕೆಯಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡಾ 5.80ರಷ್ಟು ಇಳಿಕೆಯಾಗಿದೆ.<br>✓ ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡಾ 6.15ರಷ್ಟು ಇಳಿಕೆಯಾಗಿದೆ. |

| | |
|---|---|
| | ✓ ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡಾ 6.33ರಷ್ಟು ಏರಿಕೆಯಾಗಿದೆ. |
| ***ಸಾಲಗಳು ಮತ್ತು ಮುಂಗಡಗಳು*** | ✓ ಸಾಲಗಳು ಮತ್ತು ಮುಂಗಡಗಳ ವಸೂಲಾತಿಯು ಶೇಕಡಾ 554.84ರಷ್ಟು ಏರಿಕೆಯಾಗಿದೆ.<br>✓ ಸಾಲಗಳು ಮತ್ತು ಮುಂಗಡಗಳ ವಿತರಣೆಯು ಶೇಕಡಾ 9.32ರಷ್ಟು ಇಳಿಕೆಯಾಗಿದೆ. |
| ***ಸಾರ್ವಜನಿಕ ಋಣ*** | ✓ ಸಾರ್ವಜನಿಕ ಋಣ ಸ್ವೀಕೃತಿಗಳು ಶೇಕಡಾ 20.39ರಷ್ಟು ಏರಿಕೆಯಾಗಿದ್ದಿತು.<br>✓ ಸಾರ್ವಜನಿಕ ಋಣದ ಮರುಪಾವತಿಯು ಶೇಕಡಾ 8.15ರಷ್ಟು ಇಳಿಕೆಯಾಗಿದೆ. |
| ***ಸಾರ್ವಜನಿಕಲೆಕ್ಕ*** | ✓ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಶೇಕಡಾ 7.52ರಷ್ಟು ಏರಿಕೆಯಾಗಿದ್ದಿತು.<br>✓ ಸಾರ್ವಜನಿಕ ಲೆಕ್ಕಗಳ ವಿತರಣೆಯು ಶೇಕಡಾ 4.68ರಷ್ಟು ಏರಿಕೆಯಾಗಿದೆ. |
| ***ನಗದುಶಿಲ್ಕು*** | ✓ ಹಿಂದಿನ ವರ್ಷಕ್ಕೆ ಹೋಲಿಸಿದರೆ 2019–20ರಲ್ಲಿ ನಗದು ಶಿಲ್ಕು ₹12,459 ಕೋಟಿಗಳಷ್ಟು (ಶೇಕಡಾ 56.62) ಏರಿಕೆಯಾಗಿದೆ. |

ಮೇಲಿನ ಪ್ರತಿಯೊಂದು ಸೂಚಕಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿಶ್ಲೇಷಿಸಲಾಗಿದೆ.

## 2.3 ಹಣದ ಆಕರಗಳು ಮತ್ತು ಅನ್ವಯ

**ಕೋಷ್ಟಕ–2.2**ರಲ್ಲಿ 2019–20 ರಲ್ಲಿ ರಾಜ್ಯದ ನಿಧಿಯ ಆಕರ ಮತ್ತು ಅನ್ವಯಗಳನ್ನು 2018–19ನೇ ಸಾಲಿಗೆ ಹೋಲಿಸಿದಂತೆ ನೀಡಲಾಗಿದೆ. ನಕ್ಷೆ–2.1 ಮತ್ತು ನಕ್ಷೆ–2.2 ರಲ್ಲಿ 2019–20ರಲ್ಲಿ ಸಂಚಿತನಿಧಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಶತಾಂಶ ಪರಿಮಾಣದಲ್ಲಿ ನೀಡಲಾಗಿದೆ.

**ಕೋಷ್ಟಕ–2.2 : 2018–19 ಮತ್ತು 2019–20ರಲ್ಲಿ ನಿಧಿಗಳ ಆಕರ ಮತ್ತು ಅನ್ವಯಗಳ ವಿವರಗಳು**

(₹ಕೋಟಿಗಳಲ್ಲಿ)

| | ವಿವರಗಳು | 2018–19 | 2019–20 | ಏರಿಕೆ/ಇಳಿಕೆ |
|---|---|---|---|---|
| ಸಂಪನ್ಮೂಲಗಳು | ಆರ್‌ಬಿಐನಲ್ಲಿನ ಪ್ರಾರಂಭಿಕ ನಗದು ಶಿಲ್ಕು | 26,184 | 22,004 | (–) 4,180 |
| | ರಾಜಸ್ವ ಸ್ವೀಕೃತಿಗಳು | 1,64,979 | 1,75,443 | 10,464 |
| | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 31 | 203 | 172 |
| | ಸಾರ್ವಜನಿಕ ಋಣ ಸ್ವೀಕೃತಿಗಳು (ನಿವ್ವಳ) | 30,831 | 40,279 | 9,448 |
| | ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು (ನಿವ್ವಳ) | 3,431 | 10,346 | 6,915 |
| | **ಒಟ್ಟು** | **2,25,456** | **2,48,275** | **22,819** |
| ಅನ್ವಯ | ರಾಜಸ್ವ ವೆಚ್ಚ | 1,64,300 | 1,74,258 | 9,958 |
| | ಬಂಡವಾಳ ವೆಚ್ಚ | 34,659 | 35,530 | 871 |
| | ಸಾಲಗಳು ಮತ್ತು ಮುಂಗಡಗಳ ವಿತರಣೆ | 4,487 | 4,069 | (–) 418 |
| | ಆರ್‌ಬಿಐನಲ್ಲಿನ ಅಂತಿಮ ನಗದು ಶಿಲ್ಕು | 22,004 | 34,463 | 12,459 |
| | **ಒಟ್ಟು** | **2,25,450** | **2,48,320** | **22,869** |

(ಆಕರ: ಹಣಕಾಸು ಲೆಕ್ಕಗಳು)

**ನಕ್ಷೆ–2.1: ಸಂಪನ್ಮೂಲಗಳ ಸಂಯೋಜನೆ (ಶೇಕಡಾವಾರು)**




**ನಕ್ಷೆ–2.2: ಸಂಪನ್ಮೂಲಗಳ ಅನ್ವಯ (ಶೇಕಡಾವಾರು)**




## 2.4 ರಾಜ್ಯದ ಸಂಪನ್ಮೂಲಗಳು

ರಾಜ್ಯದ ಸಂಪನ್ಮೂಲಗಳು ರಾಜಸ್ವ ಸ್ವೀಕೃತಿಗಳು,ಬಂಡವಾಳ ಸ್ವೀಕೃತಿಗಳು, ನಿವ್ವಳ ಸಾರ್ವಜನಿಕ ಲೆಕ್ಕಸ್ವೀಕೃತಿಗಳನ್ನು ಒಳಗೊಂಡಿರುತ್ತವೆ. ಇವುಗಳ ಸಂಯೋಜನೆಯನ್ನು ಈಗಾಗಲೇ ಅಧ್ಯಾಯ–1ರ ಕಂಡಿಕೆ–1.4ರಲ್ಲಿ ಚರ್ಚಿಸಲಾಗಿದೆ. 2019–20ರ ಅವಧಿಯಲ್ಲಿ ರಾಜ್ಯದ ಒಟ್ಟಾರೆ ಸ್ವೀಕೃತಿಗಳಅಂಶ ಮತ್ತು ಉಪ ಅಂಶಗಳನ್ನು **ನಕ್ಷೆ–2.3**ರಲ್ಲಿ ತೋರಿಸಲಾಗಿದೆ.

### *2.4.1 ರಾಜಸ್ವ ಸ್ವೀಕೃತಿಗಳು*

ಕರ್ನಾಟಕ ರಾಜ್ಯದಹಣಕಾಸಿನ ಸ್ಥಿತಿಯು ಬಹುತೇಕ ಆದಾಯದ ಭಾಗದಿಂದ ಪ್ರಭಾವಿತವಾಗಿದೆ. 2015–16ರಿಂದ 2019–20ರ ಅವಧಿಯಲ್ಲಿ ಸರಾಸರಿಯಾಗಿ ಶೇಕಡಾ 62ರಷ್ಟು ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. ಉಳಿದ ಭಾಗವು ಕೇಂದ್ರ ತೆರಿಗೆ ಹಾಗೂ ಸುಂಕಗಳಲ್ಲಿನ ರಾಜ್ಯ ಪಾಲು ಮತ್ತು ಸಹಾಯಾನುದಾನ ಮತ್ತು ವಂತಿಗೆಗಳ ರೂಪದಲ್ಲಿ ಭಾರತ ಸರ್ಕಾರದಿಂದ ವರ್ಗಾವಣೆಯಾಗಿದೆ. ತೆರಿಗೆ ಆದಾಯವು ಮೌಲ್ಯದ ದೃಷ್ಟಿಯಿಂದ ಬೆಳೆಯುತ್ತಿದ್ದರೂ, ರಾಜಸ್ವ ಸ್ವೀಕೃತಿಗಳ ಶತಾಂಶ ಭಾಗವಾಗಿ 2015–16 ರಿಂದ 2019–20ರ ಅವಧಿಯಲ್ಲಿ ಅದು ಶೇಕಡಾ 64ರಿಂದ 58ಕ್ಕೆ ಇಳಿದಿದೆ. ಮತ್ತೊಂದೆಡೆ, ತೆರಿಗೆಯೇತರ ವಿಭಾಗದಲ್ಲಿ ರಾಜ್ಯದ ಆದಾಯವು ಸುಧಾರಿಸಿಲ್ಲ, ಇದು 2015–16ರಿಂದ 2019–20ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳ ನಾಲ್ಕರಿಂದ ಐದು ಪ್ರತಿಶತದಷ್ಟಿತ್ತು.

**ನಕ್ಷೆ–2.3: 2019–20ರಲ್ಲಿರಾಜ್ಯದಸ್ವೀಕೃತಿಗಳಸಂಯೋಜನೆ**




### *2.4.2 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು ಮತ್ತು ಬೆಳವಣಿಗೆ*

2015–20ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು ಹಾಗೂ ರಾಒಆಂಉಕ್ಕೆ ಹೋಲಿಸಿದಂತೆ ಸ್ವೀಕೃತಿಗಳಲ್ಲಿನ ಪ್ಲವನತೆಯನ್ನು **ಕೋಷ್ಟಕ–2.3** ಒದಗಿಸುತ್ತದೆ. ಇದಲ್ಲದೆ, ರಾಒಆಂಉಕ್ಕೆ ಸಾಪೇಕ್ಷವಾಗಿ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು ಮತ್ತು ರಾಜಸ್ವ ಸ್ವೀಕೃತಿಗಳ ಸಂಯೋಜನೆಯನ್ನು ಕ್ರಮವಾಗಿ ನಕ್ಷೆ–2.4 ಮತ್ತು ನಕ್ಷೆ–2.5ರಲ್ಲಿ ನೀಡಲಾಗಿದೆ.

**ಕೋಷ್ಟಕ-2.3: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು ಮತ್ತು ಬೆಳವಣಿಗೆ**

| ಪ್ರಮಿತಿಗಳು | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ರಾಜಸ್ವ ಸ್ವೀಕೃತಿಗಳು (₹ ಕೋಟಿಗಳಲ್ಲಿ) | 1,18,817 | 1,33,214 | 1,47,000 | 1,64,979 | 1,75,443 |
| ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾವಾರು) | 14.09 | 12.12 | 10.35 | 12.23 | 6.34 |
| ಸ್ವಂತ ತೆರಿಗೆ ರಾಜಸ್ವ | 75,550 | 82,956 | 87,130 | 96,830 | 1,02,363 |
| ತೆರಿಗೆಯೇತರ ರಾಜಸ್ವ | 5,355 | 5,795 | 6,477 | 6,773 | 7,681 |
| ಸ್ವಂತ ರಾಜಸ್ವದ ವೃದ್ಧಿಯ ದರ (ಸ್ವಂತ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ) (*ಶೇಕಡಾವಾರು*) | 8.06 | 9.70 | 5.47 | 10.68 | 6.22 |
| ರಾಒಆಂಉ (₹ ಕೋಟಿಗಳಲ್ಲಿ) | 10,45,168 | 12,09,136 | 13,57,579 | 15,44,399 | 16,99,115 |
| ರಾಒಆಂಉ ದ ವೃದ್ಧಿಯ ದರ (ಶೇಕಡಾವಾರು) | 14.36 | 15.69 | 12.28 | 13.76 | 10.02 |
| ರಾಜಸ್ವ ಸ್ವೀಕೃತಿ/ರಾಒಆಂಉ (*ಶೇಕಡಾವಾರು*) | 11.37 | 11.02 | 10.83 | 10.68 | 10.33 |
| ಪ್ಲವನತೆಯ ಅನುಪಾತಗಳು[5] | | | | | |
| ರಾಒಆಂಉಗೆ ರಾಜಸ್ವ ಪ್ಲವನತೆ[6] | 0.98 | 0.77 | 0.84 | 0.89 | 0.63 |
| ರಾಒಆಂಉಗೆ ರಾಜ್ಯದ ಸ್ವಂತ ರಾಜಸ್ವ ಪ್ಲವನತೆ[7] | 0.56 | 0.62 | 0.45 | 0.78 | 0.62 |

**(ಆಕರ: ಹಣಕಾಸು ಲೆಕ್ಕಗಳು ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ)**

**ನಕ್ಷೆ-2.4: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**




**(ಆಕರ: ಹಣಕಾಸು ಲೆಕ್ಕಗಳು ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ)**

---

5 ಪ್ಲವನತೆಯ ಅನುಪಾತವು ವಿತ್ತೀಯ ವ್ಯತ್ಯಾಸ ಸಾಧ್ಯ ಸ್ಪಂದನೆಯ ಮಟ್ಟ ಅಥವ ನಮ್ಯತೆಮೂಲ ವ್ಯತ್ಯಯ ಸ್ಥಿತಿ ಸ್ಥಾಪಕತ್ವ ಅಥವಾ ಪ್ರತಿಕ್ರಿಯಾತ್ಮಕತೆಯ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ,ರಾಜಸ್ವ ಪ್ಲವನತೆಯು ರಾಒಆಂಉಕ್ಕೆ ಸಂಬಂಧಿಸಿದಂತೆ 0.63 ಇದೆ ಎಂದರೆ ರಾಒಆಂಉವು ಶೇಕಡಾ ಒಂದು ಹೆಚ್ಚಾದರೆ ಸ್ವೀಕೃತಿಗಳು ಶೇಕಡಾ 0.63 ಅಂಕಗಳಿಂದ ಹೆಚ್ಚಾಗುತ್ತವೆ ಎಂದು ಸೂಚಿಸುತ್ತದೆ.

6 ರಾಜಸ್ವ ಪ್ಲವನತೆಯು ರಾಒಆಂಉದ ವೃದ್ಧಿಗೆ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರದ ಅನುಪಾತಕ್ಕೆ ಸಂಬಂಧಿಸಿದೆ.

7 ಸ್ವಂತ ರಾಜಸ್ವ ಪ್ಲವನತೆಯು ರಾಒಆಂಉದ ವೃದ್ಧಿಯ ದರಕ್ಕೆ ತೆರಿಗೆ ಆದಾಯದ ವೃದ್ಧಿಯ ದರ ಮತ್ತು ತೆರಿಗೆಯೇತರ ಆದಾಯದ ವೃದ್ಧಿಯ ದರದ ಅನುಪಾತಕ್ಕೆ ಸಂಬಂಧಿಸಿದೆ.

**ನಕ್ಷೆ–2.5: ರಾಜಸ್ವ ಸ್ವೀಕೃತಿಗಳ ಘಟಕಗಳ ಪ್ರವೃತ್ತಿ**




ರಾಜ್ಯದ ರಾಜಸ್ವ ಸ್ವೀಕೃತಿಗಳಿಗೆಸಂಬಂಧಿಸಿದ ಸಾಮಾನ್ಯ ಪ್ರವೃತ್ತಿಗಳು ಹೀಗಿವೆ:

- ರಾಜಸ್ವ ಸ್ವೀಕೃತಿಗಳು 2015–16ರಲ್ಲಿದ್ದ ₹1,18,817 ಕೋಟಿಗಳಿಂದ 2019–20ರಲ್ಲಿ ₹1,75,443 ಕೋಟಿಗಳಿಗೆ (ಶೇಕಡ 47.66ರಷ್ಟು) ಏರಿಕೆಯಾಗಿದ್ದು, ವಾರ್ಷಿಕ ಸರಾಸರಿ ಶೇಕಡಾ 11.03 ಬೆಳವಣಿಗೆಯ ದರದಲ್ಲಿ ಹೆಚ್ಚಾಗಿದೆ.
- 2019–20ರ ಅವಧಿಯಲ್ಲಿ ಸುಮಾರು ಶೇಕಡಾ 63ರಷ್ಟು ರಾಜಸ್ವ ಸ್ವಿಕೃತಿಗಳು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದ್ದರೆ, ಕೇಂದ್ರ ತೆರಿಗೆ ವರ್ಗಾವಣೆ ಮತ್ತು ಅನುದಾನ–ಸಹಾಯವು ಒಟ್ಟಾಗಿಶೇಕಡಾ 37ರಷ್ಟನ್ನು ಕೊಡುಗೆ ನೀಡಿದೆ. ಕರ್ನಾಟಕದ ಹಣಕಾಸಿನ ಸ್ಥಿತಿಯು ಹೆಚ್ಚಾಗಿ ಸ್ವಂತ ಸಂಪನ್ಮೂಲಗಳಿಂದ ಮಾತ್ರ ಪ್ರಭಾವಿತವಾಗಿರುತ್ತದೆ ಎಂಬ ಅಂಶವನ್ನು ಇದು ಸೂಚಿಸುತ್ತದೆ.
- ಪ್ರಸಕ್ತ ವರ್ಷದಲ್ಲಿ, ರಾಜಸ್ವ ಸ್ವೀಕೃತಿಗಳಲ್ಲಿ ಶೇಕಡಾ 6.34ರಷ್ಟು (₹10,464 ಕೋಟಿ) ಹೆಚ್ಚಳವು ರಾಜಸ್ವ ವೆಚ್ಚದಲ್ಲಿನ ಶೇಕಡಾ 6.06ರಷ್ಟು (₹9,958 ಕೋಟಿ) ಅಲ್ಪ ಹೆಚ್ಚಳಕ್ಕಿಂತ ಸ್ವಲ್ಪ ಹೆಚ್ಚಾಗಿದೆ, ಇದು ಹಿಂದಿನ ವರ್ಷಕ್ಕಿಂತ ರಾಜಸ್ವ ಹೆಚ್ಚಳದಲ್ಲಿ ಏರಿಕೆಗೆ ಕಾರಣವಾಯಿತು.
- ರಾಜ್ಯದ ರಾಜಸ್ವ ಪ್ಲವನತೆಯು 2015–16ರಲ್ಲಿದ್ದ 0.98ರಿಂದ ಜಿಎಸ್‌ಟಿ ಅನುಷ್ಠಾನ, (2017–18ರಲ್ಲಿ) ವಾಸ್ತವ ಆದಾಯದ ವಿವಿಧ ಅಂಗಗಳ ಮೇಲೆ ಪ್ರಭಾವ ಬೀರಿದ ರಾಒಆಂಉದ ಅಲ್ಪವೃದ್ಧಿ ಮುಂತಾದ ಬಾಹ್ಯ ಪ್ರಭಾವಗಳಿಂದಾದ ಅಂತರ ವಾರ್ಷಿಕ ವ್ಯತ್ಯಯಗಳಿಂದ 2019–20ರಲ್ಲಿ 0.63ಕ್ಕೆ ಇಳಿದಿದೆ.

### *2.4.3 ರಾಜ್ಯದ ಸ್ವಂತ ಸಂಪನ್ಮೂಲಗಳು*

ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯಲ್ಲಿ ರಾಜ್ಯದ ಸಾಧನೆಯನ್ನು ಅದರ ಸ್ವಂತ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಬಂದ ಸಂಪನ್ಮೂಲಗಳ ಮೂಲಕ ಅಳೆಯಲಾಗುತ್ತದೆ.

ಪ್ರಮುಖ ತೆರಿಗೆ ಮತ್ತು ತೆರಿಗೆಯೇತರಆದಾಯಕ್ಕೆ ಸಂಬಂಧಿಸಿದಂತೆ ಒಟ್ಟು ಸಂಗ್ರಹಣೆಗಳು ಮತ್ತು 2015–20ರ ಅವಧಿಯಲ್ಲಿ ರಾಒಆಂಉದಲ್ಲಿ ಅವುಗಳ ಸಾಪೇಕ್ಷ ಪಾಲನ್ನು **ಅನುಬಂಧ–2.2**ರಲ್ಲಿ ನೀಡಲಾಗಿದೆ.

#### *(ಅ) ಸ್ವಂತ ತೆರಿಗೆ ಆದಾಯ*

2015–20ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಪ್ರವೃತ್ತಿಯನ್ನು **ನಕ್ಷೆ–2.6** ರಲ್ಲಿ ನೀಡಲಾಗಿದೆ.

**ನಕ್ಷೆ – 2.6: 2015–20ರ ಅವಧಿಯಲ್ಲಿ ಸ್ವಂತ ತೆರಿಗೆ ಆದಾಯದ ಬೆಳವಣಿಗೆ**




ಆಕರ: ಹಣಕಾಸು ಲೆಕ್ಕಗಳು

2015–20ರ ಅವಧಿಯಲ್ಲಿ ಸಂಗ್ರಹಿಸಲಾದ ರಾಜ್ಯದ ಸ್ವಂತ ಆದಾಯದ ವರ್ಗವಾರು ವಿವರಗಳನ್ನು**ಕೋಷ್ಟಕ–2.4**ರಲ್ಲಿ ನೀಡಿದೆ.

**ಕೋಷ್ಟಕ–2.4: 2015–20ರಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಭಾಗಗಳು**

**(₹ ಕೋಟಿಗಳಲ್ಲಿ)**

| ರಾಜಸ್ವ ಶೀರ್ಷಿಕೆ | 2015-16 | 2016-17 | 2017-18 | 2018-19 | 2019-20 | ಸ್ಪಾರ್ಕ್‌ಲೈನ್ |
|---|---|---|---|---|---|---|
| ವ್ಯಾಪಾರ, ಮಾರಾಟ ಮೇಲಿನ ತೆರಿಗೆ | 40,449 | 46,105 | 25,093 | 14,003 | 16,424 | |
| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 0 | 0 | 24,182 | 41,956 | 42,147 | |
| ರಾಜ್ಯ ಅಬಕಾರಿ | 15,333 | 16,484 | 17,949 | 19,944 | 21,584 | |
| ವಾಹನಗಳ ಮೇಲಿನ ತೆರಿಗೆ | 5,001 | 5,594 | 6,209 | 6,568 | 6,762 | |
| ಮುದ್ರಾಂಕಗಳು ಮತ್ತು ನೋಂದಣಿ | 8,215 | 7,806 | 9,024 | 10,775 | 11,308 | |
| ಭೂ ಕಂದಾಯ | 181 | 209 | 195 | 144 | 203 | |
| ಇತರೆ ತೆರಿಗೆಗಳು | 6,371 | 6,758 | 4,478 | 3,440 | 3,935 | |
| ಒಟ್ಟು | **75,550** | **82,956** | **87,130** | **96,830** | **102,363** | |

ಆಕರ: ಹಣಕಾಸು ಲೆಕ್ಕಗಳು

ರಾಜ್ಯದ ಸ್ವಂತ ತೆರಿಗೆ ಆದಾಯವು 2015–16ರಲ್ಲಿದ್ದ ₹75,550 ಕೋಟಿಯಿಂದ ವಾರ್ಷಿಕ ಸರಾಸರಿ 7.86ರ ಬೆಳವಣಿಗೆಯ ದರದಲ್ಲಿ 2019–20ರಲ್ಲಿ ₹1,02,363 ಕೋಟಿಗೆ ಏರಿ ₹26,813 ಕೋಟಿಗಳಷ್ಟು ಹೆಚ್ಚಾಗಿದೆ. ಪ್ರಸಕ್ತ ವರ್ಷದಲ್ಲಿ, ತೆರಿಗೆ ಆದಾಯದ ಪ್ರಮುಖ ಕೊಡುಗೆಯು ಸರಕು ಮತ್ತು ಸೇವಾ ತೆರಿಗೆ

(ಶೇಕಡಾ41), ರಾಜ್ಯ ಅಬಕಾರಿ (ಶೇಕಡಾ 21), ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ (ಶೇಕಡಾ 16) ಮತ್ತು ಮುದ್ರಾಂಕ ಮತ್ತು ನೋಂದಣಿ ಶುಲ್ಕ (11 ಶೇಕಡಾ)ಗಳದ್ದಾಗಿದೆ.

### *ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಎಸ್‌ಜಿಎಸ್‌ಟಿ)*

2018–19 ಮತ್ತು 2019–20ರ ಅವಧಿಯಲ್ಲಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಎಸ್‌ಜಿಎಸ್‌ಟಿ) ಅಡಿಯಲ್ಲಿ ಆದಾಯದ ವಾಸ್ತವ ಸಂಗ್ರಹವನ್ನು **ಕೋಷ್ಟಕ–2.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.5: ಕರ್ನಾಟಕ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ ಸ್ವೀಕೃತಿಗಳು**

(₹ಕೋಟಿಗಳಲ್ಲಿ)

| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 2018–19 | 2019–20 | ಏರಿಕೆ/ಇಳಿಕೆ |
|---|---|---|---|
| ತೆರಿಗೆ | 22,266 | 24,645 | 2,379 |
| ಐಜಿಎಸ್‌ಟಿಯಿಂದ ತೆರಿಗೆ ಹಂಚಿಕೆ | 5,559 | 331 | (–)5,228 |
| ಇತರೆ | 14,131 | 17,171 | 3,040 |
| **ಎಸ್‌ಜಿಎಸ್‌ಟಿ ಸಂಗ್ರಹಣೆ** | **41,956** | **42,147** | **191** |

*ಆಕರ: ಹಣಕಾಸುಲೆಕ್ಕಗಳು*

ಸರಕು ಮತ್ತು ಸೇವಾ ತೆರಿಗೆ (ರಾಜ್ಯಗಳಿಗೆ ಪರಿಹಾರ) ಕಾಯ್ದೆ, 2017ರ ಪ್ರಕಾರ, ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನದಿಂದಾಗಿ ಉಂಟಾಗುವ ಆದಾಯದ ಕೊರತೆಗೆ ರಾಜ್ಯಗಳಿಗೆ ಮೂಲ ವರ್ಷದಿಂದ ಶೇಕಡಾ 14ರಷ್ಟು ವಾರ್ಷಿಕ ಬೆಳವಣಿಗೆಯನ್ನು ಪರಿಗಣಿಸಿ, 5 ವರ್ಷಗಳ ಅವಧಿಗೆ ಪರಿಹಾರ ನೀಡಲಾಗುವುದು, ಕೇಂದ್ರವು ಅಂತರ ರಾಜ್ಯ ಸರಕು ಮತ್ತು ಸೇವೆಗಳ ಪೂರೈಕೆಯ ಮೇಲೆ ಸಮಗ್ರ ಸರಕು ಮತ್ತು ಸೇವಾ ತೆರಿಗೆಯನ್ನು (ಐಜಿಎಸ್‌ಟಿ) ವಿಧಿಸುತ್ತದೆ ಮತ್ತು ಸರಕು ಅಥವಾ ಸೇವೆಗಳನ್ನು ಬಳಸಿಕೊಳ್ಳುವ ರಾಜ್ಯಕ್ಕೆ ತೆರಿಗೆಯ ರಾಜ್ಯದ ಪಾಲನ್ನು ಹಂಚುತ್ತದೆ.

2019–20ರ ಅವಧಿಯಲ್ಲಿ ರಾಜ್ಯದ ಸರಕು ಮತ್ತು ಸೇವಾ ತೆರಿಗೆ ಸಂಗ್ರಹವು ₹42,147.23 ಕೋಟಿಗಳಾಗಿದ್ದು, 2018–19ಕ್ಕಿಂತ ₹191.20 ಕೋಟಿ (ಶೇ 0.46) ಹೆಚ್ಚಾಗಿದೆ. ಇದಲ್ಲದೆ, ರಾಜ್ಯವು ಸಿಜಿಎಸ್‌ಟಿಯಲ್ಲಿನ ನಿವ್ವಳ ಹಂಚಿಕೆಯಾಗಿ ₹8,773.82 ಕೋಟಿಗಳನ್ನು ಪಡೆದಿದೆ. 2019–20ರ ಅವಧಿಯಲ್ಲಿ, ಐಜಿಎಸ್‌ಟಿಯಿಂದ ನಿವ್ವಳ ಆದಾಯವು 'ಶೂನ್ಯ' ಆಗಿತ್ತು. 2019–20ರ ಅವಧಿಯಲ್ಲಿ ಜಿಎಸ್‌ಟಿ ಅಡಿಯಲ್ಲಿ ಒಟ್ಟು ಆದಾಯವು ₹50,921.05 ಕೋಟಿಯಷ್ಟಿತ್ತು[8].2019–20ರ ಅವಧಿಯಲ್ಲಿ ಜಿಎಸ್‌ಟಿ ಅನುಷ್ಠಾನದಿಂದ ಉಂಟಾದ ಆದಾಯದ ನಷ್ಟ ಪರಿಹಾರವಾಗಿ ರಾಜ್ಯಕ್ಕೆ ₹14,496.90 ಕೋಟಿ ದೊರೆತಿತ್ತು.

2019–20ರ ಪ್ರಾಯೋಜಿತ ಆದಾಯ ₹61,046.04 ಕೋಟಿಗಳಿಗೆ ಪ್ರತಿಯಾಗಿ ರಾಜ್ಯದ ವಾಸ್ತವಿಕ ತೆರಿಗೆಯ ಸಂಗ್ರಹ (ಸರಕು ಮತ್ತು ಸೇವಾ ತೆರಿಗೆ ಪೂರ್ವ ಮತ್ತು ರಾಜ್ಯ ಸರಕು ಮತ್ತು ಸೇವಾ ತೆರಿಗೆ) ಐಜಿಎಸ್‌ಟಿಯನ್ನೊಳಗೊಂಡು ಮತ್ತು 2019–20ರ ಜಿ ಎಸ್ ಟಿ ನಷ್ಟ ಪರಿಹಾರ ಸೇರಿ ಒಟ್ಟು ₹61,209.97 ಕೋಟಿಗಳಾಗಿವೆ. ₹163.93 ಕೋಟಿಯಷ್ಟು ಅಧಿಕ ಜಿ ಎಸ್ ಟಿ ನಷ್ಟ ಪರಿಹಾರ ದೊರೆತಿದೆ.

### *ಸರಕು ಮತ್ತು ಸೇವಾ ತೆರಿಗೆಗೆ ದತ್ತಾಂಶ ಗ್ರಹಿಕೆಗೆ ಕೊರತೆ*

ಜಿಎಸ್‌ಟಿಎನ್ ಅಂಗಣದಲ್ಲಿ ಪ್ಯಾನ್–ಇಂಡಿಯಾ ದತ್ತಾಂಶ ಪ್ರವೇಶಕ್ಕೆ ಅನುವು ಮಾಡಿಕೊಡುವ ಭಾರತ ಸರ್ಕಾರದ ನಿರ್ಧಾರವನ್ನು 22 ಜೂನ್ 2020 ರಂದು ತಿಳಿಸಲಾಯಿತು. ಈ ನಿರ್ಧಾರವನ್ನು ಕಾರ್ಯಗತಗೊಳಿಸಲು ಅಗತ್ಯವಾದ ಆಡಳಿತಾತ್ಮಕ ಕ್ರಮವು ಅನುಷ್ಠಾನದ ವಿವಿಧ ಹಂತಗಳಲ್ಲಿತ್ತು.

[8] ಪ್ರಧಾನ ಶೀರ್ಷಿಕೆಗಳ ಅಡಿಯಲ್ಲಿ 0005 –ಸಿಜಿಎಸ್‌ಟಿ (₹8,773.82 ಕೋಟಿ), 0006 –ಎಸ್‌ಜಿಎಸ್‌ಟಿ (₹42,147.23 ಕೋಟಿ) ಮತ್ತು 0008 –ಐಜಿಎಸ್‌ಟಿ (ಶೂನ್ಯ).

ಆದ್ದರಿಂದ, 2019–20ನೇ ಸಾಲಿನ ಲೆಕ್ಕಗಳನ್ನು ಜಿಎಸ್‌ಟಿಎನ್ ದತ್ತಾಂಶಕ್ಕೆ ಲೆಕ್ಕ ಪರಿಶೋಧಕ ಗ್ರಹಿಕೆಯನ್ನು ಒದಗಿಸುವ ಭಾರತ ಸರ್ಕಾರದ ನಿರ್ಧಾರವನ್ನು ಪೂರ್ಣವಾಗಿ ಜಾರಿಗೊಳಿಸುವವರೆಗೆ ನಿರೀಕ್ಷೆಯಲ್ಲಿ ದಾಖಲೆಗಳನ್ನು ಕೈಯಾರೆ ನಿರ್ವಹಿಸುವಾಗ ಮಾಡಲಾಗುತ್ತಿದ್ದಂತೆ ಪರೀಕ್ಷಾ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಪ್ರಮಾಣೀಕರಿಸಲಾಗಿದೆ.

### *(ಆ) ತೆರಿಗೆಯೇತರ ಆದಾಯ*

ತೆರಿಗೆಯೇತರ ಸ್ವೀಕೃತಿಗಳನ್ನು (ಶುಲ್ಕಗಳು, ಬಳಕೆದಾರರ ಶುಲ್ಕಗಳು, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನ ಬದ್ಧವಲ್ಲದ ಆದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ. ಬಾಕಿಯಿರುವ ಮುಂಗಡಗಳ ಮೇಲಿನ ಬಡ್ಡಿ, ಇಕ್ವಿಟಿ ಹೂಡಿಕೆಗಳಿಂದ ಬರುವ ಲಾಭಗಳು, ಖನಿಜಗಳು, ಅರಣ್ಯ ಮತ್ತು ವನ್ಯಜೀವಿಗಳಂತಹ ಸರ್ಕಾರದ ಸ್ವತ್ತುಗಳನ್ನು ಬಳಸಲು ಅನುಮತಿಸುವ ರಾಯಲ್ಟಿ ಶುಲ್ಕಗಳು, ಮತ್ತು ಸರ್ಕಾರದ ಯಂತ್ರವು ಒದಗಿಸುವ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಬಳಕೆದಾರರು ನೀಡಬೇಕಾದ ಶುಲ್ಕಗಳು ಮುಂತಾದವುಗಳು ತೆರಿಗೆಯೇತರ ಸ್ವೀಕೃತಿಗಳ ಮೂಲಗಳು.

2015–16ರಿಂದ 2019–20ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿ ತೆರಿಗೆಯೇತರ ಆದಾಯದ ಪಾಲು ಶೇಕಡಾ ನಾಲ್ಕರಿಂದ ಐದರಷ್ಟಿದೆ. 2015–20ರ ಅವಧಿಯಲ್ಲಿ ಜಿಎಸ್‌ಡಿಪಿಯ ಶತಾಂಶವಾಗಿ, ಇದು ಒಂದಕ್ಕಿಂತ ಕಡಿಮೆಯಿದೆ. ಬಳಕೆದಾರ ಶುಲ್ಕಗಳನ್ನು ನಿಯತಕಾಲಿಕವಾಗಿ ಪರಿಷ್ಕರಿಸದಿರುವುದು ಈ ಸ್ಥಗಿತಕ್ಕೆ ಕಾರಣವಾಗಿದೆ. ತೆರಿಗೆಯೇತರ ಆದಾಯದಅಡಿಯಲ್ಲಿ ಲಾಭಾಂಶ ಮತ್ತು ಲಾಭದ ಭಾಗವಾಗಿರುವ ಹೂಡಿಕೆಯ ಲಾಭವು 2019–20ರ ಅವಧಿಯಲ್ಲಿ (₹53.64 ಕೋಟಿ) ಬಹಳ ಕಡಿಮೆಯಾಗಿತ್ತು. ಇದನ್ನು ಕಂಡಿಕೆ 2.5.4.1 ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

2015–20ರ ಅವಧಿಯಲ್ಲಿ ಸಂಗ್ರಹಿಸಲಾದ ತೆರಿಗೆಯೇತರ ಆದಾಯದ ವರ್ಗಾವಾರು ವಿವರಗಳನ್ನು **ಕೋಷ್ಟಕ–2.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.6: ರಾಜ್ಯದ ತೆರಿಗೆಯೇತರ ಆದಾಯದ ವರ್ಗಗಳು**

(₹ಕೋಟಿಗಳಲ್ಲಿ)

| ಆದಾಯ ಶೀರ್ಷಿಕೆ | 2015-16 | 2016-17 | 2017-18 | 2018-19 | 2019-20 | ಸ್ಪಾರ್ಕ್‌ಲೈನ್ |
|---|---|---|---|---|---|---|
| ಬಡ್ಡಿ ಸ್ವೀಕೃತಿಗಳು | 1,293 | 1,200 | 1,178 | 1,112 | 895 | |
| ಲಾಭಾಂಶ ಮತ್ತು ಲಾಭಗಳು | 69 | 83 | 79 | 38 | 54 | |
| ಕಬ್ಬಿಣೇತರ ಗಣಿ ಮತ್ತು ಲೋಹಗಳ ಕೈಗಾರಿಕೆಗಳು | 2,004 | 2,419 | 2,747 | 3,027 | 3,629 | |
| ಇತರೆ ತೆರಿಗೆಯೇತರ ಸ್ವೀಕೃತಿಗಳು | 1,989 | 2,093 | 2,473 | 2,596 | 3,103 | |
| (ಅ) ವೈದ್ಯಕೀಯ ಮತ್ತು ಸಾರ್ವಜನಿಕ | 261 | 153 | 364 | 330 | 599 | |
| (ಆ) ಇತರೆ ಆಡಳಿತಾತ್ಮಕ ಸೇವೆಗಳು | 269 | 131 | 271 | 253 | 305 | |
| (ಇ) ಅರಣ್ಯ ಮತ್ತು ವನ್ಯಜೀವಿ | 168 | 292 | 314 | 309 | 267 | |
| (ಈ) ಶಿಕ್ಷಣ, ಕ್ರೀಡೆ ಮತ್ತು ಸಾಹಿತ್ಯ | 160 | 193 | 176 | 200 | 183 | |
| (ಉ) ಪೊಲೀಸ್ | 172 | 176 | 253 | 241 | 308 | |
| (ಊ) ರಸ್ತೆಗಳು ಮತ್ತು ಸೇತುವೆಗಳು | 56 | 62 | 103 | 105 | 71 | |
| (ಋ) ಇತರೆ | 903 | 1,086 | 992 | 1,158 | 1,370 | |
| ಒಟ್ಟು | **5,355** | **5,795** | **6,477** | **6,773** | **7,681** | |

ಮೂಲ: ಹಣಕಾಸು ಲೆಕ್ಕಗಳು

13ನೇ ಹಣಕಾಸು ಆಯೋಗದ ಅಭಿಪ್ರಾಯದಂತೆ ಮತ್ತು 2009–10 ರಿಂದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಗಳಲ್ಲಿ ಹೇಳಿದಂತೆ ರಾಜ್ಯದ ಹಣಕಾಸು ಸುಧಾರಣೆಗೆ ಬಳಕೆದಾರರ ಶುಲ್ಕವನ್ನು ನಿಯಮಿತವಾಗಿ ಪರಿಷ್ಕರಿಸಬೇಕಾಗುತ್ತದೆ. ವೆಚ್ಚಸುಧಾರಣಾ ಆಯೋಗ (ಇಆರ್‌ಸಿ) ತನ್ನ ನಾಲ್ಕನೇ ವರದಿಯಲ್ಲಿ (ಜೂನ್ 2011) ಬಳಕೆದಾರರ ಶುಲ್ಕಗಳ ಕುರಿತು ಸರ್ಕಾರವು ಸ್ಪಷ್ಟ ನೀತಿಯನ್ನು ರೂಪಿಸಬೇಕು ಎಂದು ಅಭಿಪ್ರಾಯಪಟ್ಟಿದೆ. ಈ ನಿಟ್ಟಿನಲ್ಲಿ, ಆರ್ಥಿಕ ಇಲಾಖೆಯು ತನ್ನ ಸುತ್ತೋಲೆಯಲ್ಲಿ (ನವೆಂಬರ್ 2018) ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ಎಲ್ಲಾ ತೆರಿಗೆಯೇತರ ಆದಾಯ ಮೂಲಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲು ಮತ್ತು ತೆರಿಗೆಯೇತರಆದಾಯದ ದರಗಳನ್ನು ಪರಿಷ್ಕರಿಸಲು ನಿಕಟ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿತು.

ಕಳೆದ ಕೆಲವು ವರ್ಷಗಳಲ್ಲಿ ಇದೇ ರೀತಿಯ ಶಿಫಾರಸು ಮಾಡಿದ್ದರೂ, 2019–20ರಲ್ಲೂ ತೆರಿಗೆಯೇತರ ಆದಾಯವು ಅಲ್ಪವಾಗಿತ್ತು.

2019–20ರ ಆರ್ಥಿಕ ಸಮೀಕ್ಷೆಯಲ್ಲಿ, ತೆರಿಗೆಯೇತರ ಆದಾಯವು ರಾಜ್ಯವು ಎದುರಿಸುತ್ತಿರುವ ಪ್ರಮುಖ ಹಣಕಾಸಿನ ಸವಾಲು ಎಂದು ಒಪ್ಪಿಕೊಳ್ಳಲಾಗಿದೆ. ದೇಶದಲ್ಲಿ ರಾಒಆಂಉಕ್ಕೆ ತೆರಿಗೆಯೇತರ ಆದಾಯದ ಅನುಪಾತ ಕಡಿಮೆ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಅನೇಕ ಇಲಾಖೆಗಳಲ್ಲಿ, ಬಳಕೆದಾರರ ಶುಲ್ಕಗಳು, ಶುಲ್ಕಗಳು ಮತ್ತು ದಂಡಗಳು ಮತ್ತು ಇತರ ತೆರಿಗೆಯೇತರ ಆದಾಯಗಳ ಪರಿಷ್ಕರಣೆ ಹಲವು ವರ್ಷಗಳಿಂದ ನಡೆದಿಲ್ಲ ಎಂದು ಹೇಳಲಾಗಿದೆ. 2019–20ರಲ್ಲಿ ಕಡಿಮೆ ತೆರಿಗೆಯೇತರ ಆದಾಯವನ್ನು ದಾಖಲಿಸಿರುವ ಅರಣ್ಯ ಮತ್ತು ವನ್ಯಜೀವಿ, ರಸ್ತೆಗಳು ಮತ್ತು ಸೇತುವೆಗಳು, ಪಶು ಸಂಗೋಪನೆ ಇತ್ಯಾದಿಗಳ ಅಡಿಯಲ್ಲಿ ಸ್ವೀಕೃತಿಗಳನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

### *2.4.4 ಕೇಂದ್ರದಿಂದ ವರ್ಗಾವಣೆ*

ಭಾರತ ಸರ್ಕಾರವು ಕೇಂದ್ರ ತೆರಿಗೆಗಳು ಮತ್ತು ಸುಂಕಗಳಾದ ಕಾರ್ಪೊರೇಷನ್ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳಲ್ಲಿ ರಾಜ್ಯ ಸರ್ಕಾರದ ಪಾಲನ್ನು ವರ್ಗಾವಣೆ ಮಾಡುತ್ತದೆ. 2015–16ರಿಂದ 2019–20ರ ಅವಧಿಯಲ್ಲಿ ಈ ತೆರಿಗೆ ವರ್ಗಾವಣೆಯ ಪ್ರವೃತ್ತಿಗಳನ್ನು **ಕೋಷ್ಟಕ–2.7** ರಲ್ಲಿ ನೀಡಲಾಗಿದೆ.

**ಕೋಷ್ಟಕ–2.7: ಕೇಂದ್ರ ತೆರಿಗೆ ವರ್ಗಾವಣೆಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) | – | – | 447.56 | 8,858.76 | 8,773.82 |
| ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) | – | – | 3,204.72 | 707.00 | – |
| ಕಾರ್ಪೋರೇಷನ್ ತೆರಿಗೆ | 7,547.57 | 9,211.05 | 9,721.29 | 12,481.94 | 10,542.17 |
| ಕಾರ್ಪೋರೇಷನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ | 5,252.47 | 6,401.72 | 8,208.94 | 9,192.40 | 8,260.51 |
| ಸೀಮಾ ಸುಂಕ | 3,830.22 | 3,962.25 | 3,203.80 | 2,544.18 | 1,959.84 |
| ಕೇಂದ್ರ ಅಬಕಾರಿ ಸುಂಕಗಳು | 3,181.60 | 4,524.54 | 3,348.80 | 1,690.77 | 1,362.62 |
| ಸೇವಾ ತೆರಿಗೆ | 4,153.56 | 4,639.22 | 3,617.15 | 331.65 | – |
| ಸಂಪತ್ತಿನ ಮೇಲಿನ ತೆರಿಗೆಗಳು | 1.65 | 21.08 | (–) 0.29 | 4.58 | 0.46 |
| ಆದಾಯ ಮತ್ತು ವೆಚ್ಚದ ಮೇಲಿನ ಇತರ ತೆರಿಗೆಗಳು | 0.15 | – | – | 65.01 | – |
| ಇತರ ಸುಂಕಗಳು, ತೆರಿಗೆಗಳು, ಸರಕುಗಳು ಮತ್ತು ಸೇವೆಗಳು | 16.12 | 0.08 | (–) 0.01 | 18.54 | 19.58 |
| ಒಟ್ಟು | **23,983.34** | **28,759.94** | **31,751.96** | **35,894.83** | **30,919.00** |
| ಹಿಂದಿನ ವರ್ಷದ ಮೇಲಿನ ವೃದ್ಧಿಯ ಶೇಕಡಾವಾರು | 63.66 | 19.92 | 10.40 | 13.05 | (–) 13.86 |
| ರಾಜಸ್ವ ಸ್ವೀಕೃತಿಗಳಿಗೆ ಕೇಂದ್ರ ತೆರಿಗೆ ವರ್ಗಾವಣೆಗಳ ಶೇಕಡಾವಾರು | 20.19 | 21.59 | 21.60 | 21.76 | 17.62 |

ಆಕರ : ಹಣಕಾಸು ಲೆಕ್ಕಗಳು

ಹದಿನಾಲ್ಕನೆಯ ಹಣಕಾಸು ಆಯೋಗವು ಕೇಂದ್ರ ತೆರಿಗೆಗಳ ನಿವ್ವಳ ಆದಾಯದಲ್ಲಿ (ಸೇವಾ ತೆರಿಗೆ ಹೊರತುಪಡಿಸಿ) ಮತ್ತು ಸೇವಾ ತೆರಿಗೆಯ ನಿವ್ವಳ ಆದಾಯದಲ್ಲಿ ರಾಜ್ಯಗಳ ಪಾಲನ್ನು ಕ್ರಮವಾಗಿ ಶೇಕಡ 4.713 ಮತ್ತು ಶೇಕಡ 4.822ಕ್ಕೆ ನಿಗದಿಪಡಿಸಬೇಕು ಎಂದು ಶಿಫಾರಸು ಮಾಡಿದೆ. ಆದರೆ ವಾಸ್ತವ ಹಂಚಿಕೆಯು ಸ್ವಲ್ಪಮಟ್ಟಿಗೆ[9] ಬದಲಾಗುತ್ತದೆ ಎಂದು ಗಮನಿಸಲಾಯಿತು. 2019-20ರ ಅವಧಿಯಲ್ಲಿ, ಕೇಂದ್ರ ತೆರಿಗೆಗಳ ಒಟ್ಟು ನಿವ್ವಳ ಸಂಗ್ರಹವಾದ ₹6,49,749.99 ಕೋಟಿಗಳಲ್ಲಿ, ರಾಜ್ಯದ ಪಾಲಿನ ನಿವ್ವಳ ಹಂಚಿಕೆ ₹30,919.00 ಕೋಟಿಗಳಷ್ಟಿದೆ. 2019-20ರ ಅವಧಿಯಲ್ಲಿ, ಐಜಿಎಸ್‌ಟಿ ಮತ್ತು ಸೇವಾ ತೆರಿಗೆಗಳಲ್ಲಿ ರಾಜ್ಯಕ್ಕೆ ಯಾವುದೇ ಹಂಚಿಕೆಯಾಗಿಲ್ಲ.

ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿರಾಜ್ಯದ ಪಾಲಿನ ನಿಜವಾದ ಹಂಚಿಕೆ ಮತ್ತು ಹಣಕಾಸು ಆಯೋಗದ ಶಿಫಾರಸುಗಳನ್ನು **ಕೋಷ್ಟಕ-2.8**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ-2.8 ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು; ಹದಿನಾಲ್ಕನೆ ಹಣಕಾಸು ಆಯೋಗದ ಶಿಫಾರಸುಗಳಿಗೆ ಪ್ರತಿಯಾಗಿ ವಾಸ್ತವ ಹಂಚಿಕೆಗಳು**

(₹ ಕೋಟಿಗಳಲ್ಲಿ)

| ವರ್ಷ | 14ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ವರ್ಗಾವಣೆ ಮಾಡಬೇಕಾದದ್ದು | ವಾಸ್ತವಿಕ ತೆರಿಗೆ ವರ್ಗಾವಣೆ | ವ್ಯತ್ಯಾಸ |
|---|---|---|---|
| 1 | 2 | 3 | 4=(3-2) |
| 2015-16 | 23,983.34 | 23,983.34 | 0 |
| 2016-17 | 28,759.94 | 28,759.94 | 0 |
| 2017-18 | 31,801.73 | 31,751.96 | (-) 49.77 |
| 2018-19 | 35,831.46 | 35,894.83 | 63.37 |
| 2019-20 | 30,622.71 | 30,919.00 | 296.29 |

ಮೂಲ: ಎಫ್‌ಎಫ್‌ಸಿ ವರದಿಗಳು ಮತ್ತು ಹಣಕಾಸು ಲೆಕ್ಕಗಳು

ಮೇಲಿನ ಕೋಷ್ಟಕದಿಂದ ನೋಡಿದಂತೆ, 14ನೇ ಹಣಕಾಸು ಆಯೋಗದ ಶಿಫಾರಸುಗಳ ಅನ್ವಯ ವರ್ಗಾವಣೆಯಾಗ ಬೇಕಾದ ಶೇಕಡಾವಾರು ಹಂಚಿಕೆಗೆ ಪ್ರತಿಯಾಗಿ 2015-16ರಿಂದ 2019-20ರ ಅವಧಿಯಲ್ಲಿ ರಾಜ್ಯವು ಪಡೆದ ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.

### *2.4.5 ಭಾರತ ಸರ್ಕಾರದಿಂದ ಸಹಾಯಾನುದಾನ*

**ಕೋಷ್ಟಕ-2.9**ರಲ್ಲಿ ತೋರಿಸಿರುವಂತೆ ಭಾರತ ಸರ್ಕಾರದಿಂದ ಸಹಾಯಾನುದಾನವು 2015-16ರಲ್ಲಿ ₹13,929 ಕೋಟಿಯಿದ್ದು 2019-20ರಲ್ಲಿ ₹34,480 ಕೋಟಿಗೆ ಏರಿ ಶೇಕಡ 148ರಷ್ಟು ಹೆಚ್ಚಾಗಿದೆ.

[9] ಒಟ್ಟು ಹಂಚಿಕೆಯಾದ ₹30,919 ಕೋಟಿಗಳಲ್ಲಿ ಕಾರ್ಪೊರೇಶನ್ ತೆರಿಗೆ, ಸೀಮಾ ಸುಂಕ ಮತ್ತು ಕೇಂದ್ರ ಅಬಕಾರಿ ಸುಂಕದ ಪಾಲು ಶೇಕಡ 4.75ರಷ್ಟಿತ್ತು, ಆದಾಯ ತೆರಿಗೆ ಮತ್ತು ಸಂಪತ್ತು ತೆರಿಗೆ ಶೇಕಡಾ 4.77ರಷ್ಟಿತ್ತು, ಸಿಜಿಎಸ್‌ಟಿ 4.76ರಷ್ಟಿತ್ತು ಮತ್ತು ಇತರೆ ತೆರಿಗೆಗಳು ಮತ್ತು ಸುಂಕಗಳು ಶೇಕಡಾ 4.80ರಷ್ಟಿದ್ದಿತು.

**ಕೋಷ್ಟಕ–2.9: ಭಾರತ ಸರ್ಕಾರದಿಂದ ಸಹಾಯಾನುದಾನ**

(₹ಕೋಟಿಗಳಲ್ಲಿ)

| ಶೀರ್ಷಿಕೆ | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಯೋಜನೇತರ ಅನುದಾನಗಳು* | 5,548 | 7,045 | – | – | – |
| ರಾಜ್ಯ ಯೋಜನಾ ಯೋಜನೆಗಳಿಗೆ ಅನುದಾನಗಳು* | 8,105 | 8,102 | – | – | – |
| ಕೇಂದ್ರ ಯೋಜನಾ ಯೋಜನೆಗಳಿಗೆ ಅನುದಾನಗಳು* | 139 | 116 | – | – | – |
| ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನಗಳು | 137 | 440 | 11,617 | 10,393 | 12,214 |
| ಇತರೆ ವರ್ಗಾವಣೆಗಳು/ ರಾಜ್ಯಗಳಿಗೆ ಅನುದಾನಗಳು[10] | – | – | 7,316 | 11,714 | 17,593 |
| ಹಣಕಾಸು ಆಯೋಗದ ಅನುದಾನಗಳು | – | – | 2,708 | 3,374 | 4,673 |
| ಒಟ್ಟು | **13,929** | **15,703** | **21,641** | **25,481** | **34,480** |
| ಹಿಂದಿನ ವರ್ಷಕ್ಕೆ ಹೋಲಿಸಿದಾಗ ಶೇಕಡಾವಾರು ವೃದ್ಧಿ | (–) 4.73 | 12.74 | 37.81 | 17.74 | 35.32 |
| ರಾಜಸ್ವ ಸ್ವೀಕೃತಿಗಳಿಗೆ ಸಹಾಯಾನುದಾನಗಳ ಶೇಕಡಾವಾರು | 11.72 | 11.79 | 14.72 | 15.44 | 19.65 |

ಆಕರ : ಹಣಕಾಸುಲೆಕ್ಕಗಳು

ಯೋಜನೆ ಮತ್ತು ಯೋಜನೇತರ ಅನುದಾನಗಳ ಹೆಸರುಗಳನ್ನು 2017–18ನೇ ವರ್ಷದಿಂದ ರದ್ದು ಮಾಡಲಾಗಿದ್ದು ಅವುಗಳ ಸ್ಥಾನದಲ್ಲಿ ರಾಜ್ಯಗಳಿಗೆ ಸಿಎಸ್ಎಸ್ ಅನುದಾನ, ಹಣಕಾಸು ಆಯೋಗದ ಅನುದಾನ ಮತ್ತು ಇತರ ಅನುದಾನಗಳನ್ನು ನೀಡಿರುವುದರಿಂದ ಯಾವುದೇ ಅಂಕಿಗಳು ಇರುವುದಿಲ್ಲ.

ಹಿಂದಿನ ವರ್ಷಕ್ಕೆ ಹೋಲಿಸಿದರೆ, 2019–20ರಲ್ಲಿ ₹8,999 ಕೋಟಿ ಹೆಚ್ಚಳವಿದ್ದು ಇದು ಮುಖ್ಯವಾಗಿ ರಾಜ್ಯಗಳಿಗೆ ಇತರ ವರ್ಗಾವಣೆ/ಅನುದಾನದ ಅಡಿಯಲ್ಲಿ (₹5,879 ಕೋಟಿ) ಉಂಟಾಗಿದೆ.

### *(ಅ) ಹದಿನಾಲ್ಕನೆಯ ಹಣಕಾಸು ಆಯೋಗದ ಅನುದಾನ*

ಸಂವಿಧಾನದ 280 ನೇ ವಿಧಿಯ ಅನ್ವಯ 2 ಜನವರಿ 2013 ರಂದು ರಾಷ್ಟ್ರಪತಿಗಳು ರಚಿಸಿದ XIV ಹಣಕಾಸು ಆಯೋಗದ ನಿಯಮಗಳ ಅನುಸಾರ ರಾಜ್ಯದಲ್ಲಿನ ಪಂಚಾಯತ್‌ಗಳ ಮತ್ತು ಪುರಸಭೆಗಳ ಸಂಪನ್ಮೂಲಗಳಿಗೆ ಪೂರಕವಾಗಿ ರಾಜ್ಯದ ಸಂಚಿತ ನಿಧಿಯನ್ನು ವೃದ್ಧಿಸಲು ಅಗತ್ಯವಾದ ಕ್ರಮಗಳಿಗೆ ಸಂಬಂಧಿಸಿದಂತೆ ಆಯೋಗವು ಶಿಫಾರಸುಗಳನ್ನು ಮಾಡುತ್ತದೆ.

- ***ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ(ಪಿ ಆರ್ ಐ/ಯು ಎಲ್ ಬಿ)***

**ಕೋಷ್ಟಕ–2.10**ರಲ್ಲಿ XIV ಹಣಕಾಸು ಆಯೋಗವು ಶಿಫಾರಸು ಮಾಡಿದಂತೆ 2015–16 ರಿಂದ 2019–20ರ ಅವಧಿಯಲ್ಲಿ ಪಿಆರ್‌ಐ ಮತ್ತು ಯುಎಲ್‌ಬಿಗಳಿಗೆ ಶಿಫಾರಸುಗಳು ಮತ್ತು ವರ್ಗಾವಣೆಯ ವಿವರಗಳನ್ನು ನೀಡಲಾಗಿದೆ.

---

[10] ಇದು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಗೆ ನೀಡಿದ ವಂತಿಗೆ ಮತ್ತು ಜಿಎಸ್‌ಟಿ ಅನುಷ್ಠಾನದಿಂದಾಗಿ ಉಂಟಾದ ಆದಾಯ ನಷ್ಟಪರಿಹಾರ ಅನುದಾನವನ್ನು ಒಳಗೊಂಡಿದೆ.

**ಕೋಷ್ಟಕ–2.10: 2015–16ರಿಂದ 2019–20ರ ಅವಧಿಯಲ್ಲಿ ಶಿಫಾರಸು ಮಾಡಲಾದ ಮತ್ತು ವಾಸ್ತವ ಅನುದಾನ ಬಿಡುಗಡೆ**

(₹ ಕೋಟಿಗಳಲ್ಲಿ)

| ವರ್ಷ | ಅನುದಾನದ ವರ್ಗ | ಪಿಆರ್ಐಗಳು | | | ಯುಎಲ್‌ಬಿಗಳು | | | ಎಸ್‌ಡಿಆರ್‌ಎಫ್ | | |
|---|---|---|---|---|---|---|---|---|---|---|
| | | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ (–)/ ಅಧಿಕ (+) |
| **2015–16** | ಮೂಲ ಅನುದಾನಗಳು | 1,002.85 | 972.36 | 30.49 | 562.08 | 562.08 | – | 249.00 | 207.00 | –42.00 |
| | ಕಾರ್ಯನಿರ್ವಹಣಾ ಅನುದಾನಗಳು | – | – | – | – | – | – | | | |
| **2016–17** | ಮೂಲ ಅನುದಾನಗಳು | 1,388.62 | 1,368.21 | 20.41 | 778.29 | 778.29 | – | 261.00 | 217.50 | –43.50 |
| | ಕಾರ್ಯ ನಿರ್ವಹಣಾ ಅನುದಾನಗಳು | 182.15 | 179.45 | 2.70 | 229.70 | 229.70* | – | | | |
| **2017–18** | ಮೂಲ ಅನುದಾನಗಳು | 1,604.42 | 1,580.18 | 24.24 | 899.25 | 899.25 | – | 305.00 | 228.75 | –76.25 |
| | ಕಾರ್ಯನಿರ್ವಹಣಾ ಅನುದಾನಗಳು | 206.13 | – | 206.13 | 259.94 | 256.16# | 3.78 | | | |
| **2018–19** | ಮೂಲ ಅನುದಾನಗಳು | 1,856.02 | 1,841.54 | 14.48 | 1,040.27 | 1,040.27 | – | 288.00 | 288.00 | – |
| | ಕಾರ್ಯನಿರ್ವಹಣಾ ಅನುದಾನಗಳು | 234.08 | – | 234.08 | 295.20 | – | 295.20 | | | |
| **2019–20** | ಮೂಲ ಅನುದಾನಗಳು | 2,507.88 | 2,504.13 | 3.75 | 1,405.62 | 1,405.62 | – | 302.00 | 507.00 | 205.00 |
| | ಕಾರ್ಯನಿರ್ವಹಣಾ ಅನುದಾನಗಳು | 306.51 | – | 306.51 | 386.54 | – | 386.54 | | | |
| **ಒಟ್ಟು** | **ಮೂಲ ಅನುದಾನಗಳು** | **8,359.79** | **8,266.42** | **93.37** | **4,685.51** | **4,685.51** | – | **1,405.00** | **1,448.25** | **43.25** |
| | **ಕಾರ್ಯನಿರ್ವಹಣಾ ಅನುದಾನಗಳು** | **928.87** | **179.45** | **749.42** | **1,171.38** | **485.86** | **685.52** | | | |

ಮೂಲ: 14ನೇ ಹಣಕಾಸು ಆಯೋಗ ವರದಿ ಮತ್ತು ಹಣಕಾಸು ಲೆಕ್ಕಗಳು

* ಈ ಅನುದಾನವನ್ನು 2017–18ರ ಅವಧಿಯಲ್ಲಿ ಬಿಡುಗಡೆ ಮಾಡಲಾಗಿದೆ.

# ಈ ಅನುದಾನವನ್ನು 2019–20ರ ಅವಧಿಯಲ್ಲಿ ಬಿಡುಗಡೆ ಮಾಡಲಾಗಿದೆ.

14ನೇ ಹಣಕಾಸು ಆಯೋಗದ ಅವಧಿಗೆ (2015–16 ರಿಂದ 2019–20) ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಯುಎಲ್‌ಬಿಗಳ ಮೂಲ ಅನುದಾನಕ್ಕೆ ಸಂಬಂಧಿಸಿದಂತೆ ₹8,359.79 ಕೋಟಿ ಮತ್ತು ₹4,685.51 ಕೋಟಿಗಳ ಶಿಫಾರಸಿಗೆ ಪ್ರತಿಯಾಗಿ ಪಿಆರ್ಐಗಳಿಗೆ ಸಂಬಂಧಿಸಿದಂತೆ ₹93.37 ಕೋಟಿಗಳಷ್ಟು ಕಡಿಮೆಯಾಗಿತ್ತು. ಆದಾಗ್ಯೂ ಕಾರ್ಯಾಧಾರಿತಅನುದಾನಕ್ಕೆ ಸಂಬಂಧಿಸಿದಂತೆ, ಪಿಆರ್ಐಗಳು ಮತ್ತು ಯುಎಲ್‌ಬಿಗಳಿಗೆ ₹928.87 ಕೋಟಿ ಮತ್ತು₹1,171.38 ಕೋಟಿಗಳ ಶಿಫಾರಸಿಗೆ ಪ್ರತಿಯಾಗಿ, ರಾಜ್ಯವು ಪಡೆದದ್ದು ಕೇವಲ ₹179.45 ಕೋಟಿ (ಶೇಕಡಾ 19) ಮತ್ತು ₹485.86 ಕೋಟಿ (ಶೇಕಡಾ 41) ಮಾತ್ರ.

2019–20ರ ಅವಧಿಯಲ್ಲಿ, ಪಿಆರ್ಐಗಳಿಗೆ ಪ್ರಾಥಮಿಕ ಅನುದಾನಕ್ಕೆ ಸಂಬಂಧಿಸಿದಂತೆ ₹3.75 ಕೋಟಿಗಳ ಕೊರತೆಯಿದ್ದರೆ, ಯುಎಲ್‌ಬಿಗಳಿಗೆ ಪ್ರಾಥಮಿಕ ಅನುದಾನದ ಶಿಫಾರಸ್ಸಿನ ಪೂರ್ಣ ₹1,405.62 ಕೋಟಿಗಳನ್ನು ಪಡೆಯಲಾಗಿತ್ತು. ಆದರೂ, ಪಿಆರ್ಐಗಳು ಮತ್ತು ಯುಎಲ್‌ಬಿಗಳಿಗೆ ಕಾರ್ಯಾಧಾರಿತ ಅನುದಾನವನ್ನು ಮಾರ್ಚ್ 2020ರ ಅಂತ್ಯದವರೆಗೆ ಭಾರತ ಸರ್ಕಾರವು ಬಿಡುಗಡೆ ಮಾಡಿಲ್ಲ.

ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021), 2018–19 ಮತ್ತು 2019–20ರ ಕಾರ್ಯಾಧಾರಿತ ಅನುದಾನಗಳಿಗಾಗಿ ಭಾರತ ಸರಕಾರಕ್ಕೆ ಕೋರಿಕೆ ಸಲ್ಲಿಸಲಾಗಿತ್ತು. ಕೇಂದ್ರ ಹಣಕಾಸು ಸಚಿವಾಲಯವು ಮೇಲೆ ತಿಳಿಸಿರುವ ವರ್ಷಗಳಿಗೆ ಶಿಫಾರಸು ಮಾಡಿದ ಕಾರ್ಯಾಧಾರಿತ ಅನುದಾನವನ್ನು ವಿವಿಧ ಕಾರಣಗಳಿಂದ ಮತ್ತು ಆಯವ್ಯಯ ನಿರ್ಬಂಧಗಳಿಂದ ಯಾವ ರಾಜ್ಯಗಳಿಗೂ ಸಹ ಬಿಡುಗಡೆ ಮಾಡಿಲ್ಲವೆಂದು ತಿಳಿಸಿತು (ಅಕ್ಟೋಬರ್ 2020).

- ***ವಿಪತ್ತು ಪರಿಹಾರದ ಅಡಿಯಲ್ಲಿ ಬಿಡುಗಡೆ***

ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಗೆ (ಎಸ್‌ಡಿಆರ್‌ಎಫ್) ಕೊಡುಗೆಯು ರಾಜಸ್ವ ಅನುದಾನದ ರೂಪದಲ್ಲಿ ಒಟ್ಟು ವಾರ್ಷಿಕ ಹಂಚಿಕೆಯಾಗಿದ್ದು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಕ್ರಮವಾಗಿ 90:10 ಅನುಪಾತದಲ್ಲಿರುತ್ತದೆ, ಭಾರತ ಸರ್ಕಾರವು ಈ ಶಿಫಾರಸನ್ನು 2018-19ರಿಂದ ಜಾರಿಗೆ ತಂದಿತ್ತು. ಹದಿನಾಲ್ಕನೇ ಹಣಕಾಸು ಆಯೋಗವು 2015-16 ರಿಂದ 2019-20ರ ಅವಧಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಗೆ ₹1,405 ಕೋಟಿಗಳನ್ನು ಕೇಂದ್ರದ ಪಾಲಾಗಿ ಶಿಫಾರಸು ಮಾಡಿತ್ತು. ಮೊದಲ ಮೂರು ವರ್ಷಗಳಲ್ಲಿ ₹161.75 ಕೋಟಿಗಳ ಕೊರತೆಯಿದ್ದರೆ, 2018-19ರಲ್ಲಿ ರಾಜ್ಯವು ಶಿಫಾರಸು ಮಾಡಿದ ಸಂಪೂರ್ಣ ಮೊತ್ತವನ್ನು ಪಡೆಯಿತು. 2019-20ರಲ್ಲಿ, ಕೇಂದ್ರದ ಪಾಲಾಗಿ ಶಿಫಾರಸು ಮಾಡಲಾದ ₹302.00 ಕೋಟಿಗಳಿಗೆ ಪ್ರತಿಯಾಗಿ ರಾಜ್ಯವು ₹507.00 ಕೋಟಿಗಳನ್ನು ಪ್ರವಾಹ ಪರಿಹಾರಕ್ಕಾಗಿ ಪಡೆದು ಶಿಫಾರಸು ಮಾಡಿದ ಮೊತ್ತಕ್ಕಿಂತ ₹205.00 ಕೋಟಿ ಹೆಚ್ಚಿಗೆ ಪಡೆಯಿತು. ಭಾರತ ಸರ್ಕಾರದ ವಂತಿಗೆ (₹507.00 ಕೋಟಿ) ಯೊಂದಿಗೆ ರಾಜ್ಯದ ಕೊಡುಗೆಯೂ (₹369 ಕೋಟಿ) ಸೇರಿ ಮೊತ್ತವನ್ನು ರಾಜ್ಯದ ಸಾರ್ವಜನಿಕ ಲೆಕ್ಕದಲ್ಲಿನ ರಾಜ್ಯ ವಿಪತ್ತು ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ.

### *2.4.6 ಬಂಡವಾಳ ಸ್ವೀಕೃತಿಗಳು*

ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿಗಳು, ಸಾರ್ವಜನಿಕ ಋಣಸ್ವೀಕೃತಿಗಳು, ಹೂಡಿಕೆ ಹಿಂತೆಗೆತದಿಂದ ಬಂದ ವರಮಾನ (ಇತರೆ ಬಂಡವಾಳ ಸ್ವೀಕೃತಿಗಳು ಶೀರ್ಷಿಕೆಯಡಿ) ಮುಂತಾದ ಋಣೇತರ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಿಗಳನ್ನು ಒಳಗೊಂಡಿದೆ. ಸಾರ್ವಜನಿಕ ಋಣ ತೀರಿಕೆಯ ನಂತರದ ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು ಮತ್ತು ಇತರ ಬಂಡವಾಳ ಸ್ವೀಕೃತಿಗಳು ನಿವ್ವಳ ಬಂಡವಾಳ ಸ್ವೀಕೃತಿಗಳಾಗುತ್ತವೆ. 2015-16 ರಿಂದ 2019-20ರ ಅವಧಿಯಲ್ಲಿ ಬಂಡವಾಳದ ಸ್ವೀಕೃತಿಗಳ ಸಂಯೋಜನೆ ಮತ್ತು ವೃದ್ಧಿಯ ಪ್ರವೃತ್ತಿಯನ್ನು **ಕೋಷ್ಟಕ-2.11** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ-2.11: ಬಂಡವಾಳ ಸ್ವೀಕೃತಿಗಳ ಬೆಳವಣಿಗೆ ಮತ್ತು ಸಂಯೋಜನೆಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ರಾಜ್ಯ ಸ್ವೀಕೃತಿಗಳ ಮೂಲಗಳು | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು | 16,962 | 23,736 | 16,853 | 30,831 | 40,279 |
| ಸಂಕೀರ್ಣ ಬಂಡವಾಳ ಸ್ವೀಕೃತಿಗಳು | 352 | 27 | 4 | (-) 6 | 45 |
| ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 60 | 100 | 137 | 31 | 203 |
| ನಿವ್ವಳ ಬಂಡವಾಳ ಸ್ವೀಕೃತಿಗಳು | **17,374** | **23,863** | **16,994** | **30,856** | **40,527** |
| ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾವಾರು) | 1.27 | 37.35 | (-) 28.79 | 81.57 | 31.34 |
| ನಿವ್ವಳ ಋಣ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾವಾರು) | (-) 0.59 | 39.94 | (-) 29.00 | 82.94 | 30.64 |

ಮೂಲ: ಹಣಕಾಸು ಲೆಕ್ಕಗಳು

ನಿವ್ವಳ ಬಂಡವಾಳ ಸ್ವೀಕೃತಿಗಳು 2015-16ರಲ್ಲಿ ₹17,374 ಕೋಟಿಯಿದ್ದು 2019-20ರಲ್ಲಿ ₹40,527 ಕೋಟಿಗೆ (ಶೇಕಡಾ 133) ಹೆಚ್ಚಾಗಿದೆ. ಋಣ ಸ್ವೀಕೃತಿಗಳು ಬಂಡವಾಳ ಸ್ವೀಕೃತಿಗಳಲ್ಲಿ ಪ್ರಮುಖ ಪಾಲು ಹೊಂದಿದ್ದು, 2015-16 ರಿಂದ 2019-20ರ ಅವಧಿಯಲ್ಲಿ ಅದು ಶೇಕಡಾ 98ರಿಂದ 100ರಷ್ಟಿತ್ತು. ಈ ಅವಧಿಯಲ್ಲಿ, ಸಾಲಗಳು ಮತ್ತು ಮುಂಗಡಗಳ ವಸೂಲಿಯು ಅತ್ಯಲ್ಪವಾಗಿತ್ತು. 2019-20ರ ಅಂತ್ಯದ ವೇಳೆಗೆ ವಸೂಲಾತಿಯು ಬಾಕಿ ಇರುವ ಸಾಲಗಳು ಮತ್ತು ಮುಂಗಡಗಳ ಶೇಕಡಾ ಒಂದಕ್ಕಿಂತಲೂ

ಕಡಿಮೆಯಾಗಿದೆ. ಆದಾಗ್ಯೂ, 2019-20ರಲ್ಲಿ ಸಾಲಗಳು ಮತ್ತು ಮುಂಗಡಗಳ ವಸೂಲಿಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಾಗಿದೆ. ಇದು ರಾಜಸ್ವ ಲೆಕ್ಕದಲ್ಲಿ ಸಹಾಯಧನವಾಗಿ ಪರಿಗಣಿಸಲ್ಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ಬಾಕಿ ₹144.18 ಕೋಟಿಗಳ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿದೆ.

ಸಾರ್ವಜನಿಕ ಋಣ ಸ್ವೀಕೃತಿಗಳಲ್ಲಿ ಮಾರುಕಟ್ಟೆ ಸಾಲಗಳು ಪ್ರಧಾನವಾಗಿದ್ದು ಶೇಕಡ 96ರಷ್ಟಿದೆ. ನಂತರ ಸಮಾಲೋಚಿತ ಸಾಲಗಳು (ಶೇಕಡ ಮೂರು) ಮತ್ತು ಕೇಂದ್ರ ಸರ್ಕಾರದ ಸಾಲಗಳು (ಶೇಕಡ ಒಂದು) ಇವೆ. ಕೇಂದ್ರ ಸರ್ಕಾರದ ಸಾಲಗಳು ಇತರೆ ಸಾಲಗಳನ್ನು[11] ಮಾತ್ರ ಒಳಗೊಂಡಿದೆ. 2015-20ರ ಐದು ವರ್ಷಗಳ ಅವಧಿಯಲ್ಲಿ, ಶೇಕಡ 24.19ರಷ್ಟು ಸಾರ್ವಜನಿಕ ಋಣ ಸ್ವೀಕೃತಿಗಳು ಹಿಂದಿನ ವರ್ಷಗಳಲ್ಲಿ ತೆಗೆದುಕೊಂಡ ಸಾರ್ವಜನಿಕ ಋಣವನ್ನು ಮರುಪಾವತಿಸಲು ಬಳಸಲಾಗುತ್ತಿತ್ತು ಮತ್ತು ಉಳಿದ ಶೇಕಡಾ 75.81ನ್ನು ಇತರ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿತ್ತು.

### *2.4.7 ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಸಾಧನೆ*

ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಸ್ವಂತ-ತೆರಿಗೆ ಮತ್ತು ತೆರಿಗೆಯೇತರ ಮೂಲಗಳನ್ನು ಒಳಗೊಂಡಿರುವ ತನ್ನದೇ ಆದ ಸಂಪನ್ಮೂಲಗಳ ಪ್ರಕಾರ ನಿರ್ಣಯಿಸಲಾಗುತ್ತದೆ. ರಾಜ್ಯ ಸರ್ಕಾರ ಮಂಡಿಸಿದ ಬಜೆಟ್ ಒಂದು ನಿರ್ದಿಷ್ಟ ಹಣಕಾಸು ವರ್ಷದ ಆದಾಯ ಮತ್ತು ಖರ್ಚಿನ ಪ್ರಕ್ಷೇಪಗಳು/ಅಂದಾಜುಗಳನ್ನು ಸೂಚಿಸುತ್ತದೆ. ಬಜೆಟ್ ಅಂದಾಜುಗಳಿಂದ ವಿಚಲನೆಗಳು ವಿವಿಧ ಅಂಶಗಳ ಕಾರಣದಿಂದಾಗಿ ಅಪೇಕ್ಷಿತ ಹಣಕಾಸಿನ ಉದ್ದೇಶಗಳನ್ನು ಸಾಧಿಸದಿರುವುದು/ಅತ್ಯುತ್ತಮವನ್ನು ಪಡೆಯದಿರುವುದನ್ನು ಸೂಚಿಸುತ್ತವೆ, ಅವುಗಳಲ್ಲಿ ಕೆಲವು ಸರ್ಕಾರದ ನಿಯಂತ್ರಣದಲ್ಲಿರುತ್ತವೆ ಮತ್ತು ಕೆಲವು ಅದರ ನಿಯಂತ್ರಣವನ್ನು ಮೀರಿವೆ. **ಕೋಷ್ಟಕ-2.12**ರಲ್ಲಿ ಹದಿನಾಲ್ಕನೆ ಹಣಕಾಸು ಆಯೋಗದ ಅಂದಾಜುಗಳು ಮತ್ತು 2019-20ರ ಆಯವ್ಯಯ ಪ್ರಕ್ಷೇಪಗಳಿಗೆ ಪ್ರತಿಯಾಗಿ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳನ್ನು ನೀಡಲಾಗಿದೆ.

**ಕೋಷ್ಟಕ-2.12:2019-20ರಲ್ಲಿ ಪ್ರಕ್ಷೇಪಗಳಿಗೆ ಪ್ರತಿಯಾಗಿ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳು**

(₹ ಕೋಟಿಗಳಲ್ಲಿ)

| | 14ನೇ ಹಣಕಾಸು ಆಯೋಗದ ಅಂದಾಜು | ಆಯವ್ಯಯ ಅಂದಾಜುಗಳು | ವಾಸ್ತವ | ವಾಸ್ತವದೊಂದಿಗಿನ ಶೇಕಡಾವಾರು | |
|---|---|---|---|---|---|
| | | | | ಆಯವ್ಯಯ ಅಂದಾಜುಗಳು | 14ನೇ ಹಣಕಾಸು ಆಯೋಗದ ಅಂದಾಜು |
| ಸ್ವಂತ ತೆರಿಗೆ ರಾಜಸ್ವ | 1,34,901 | 79,895 | 1,02,363 | 28.12 | (-) 24.12 |
| ತೆರಿಗೆಯೇತರ ರಾಜಸ್ವ | 10,392 | 8,055 | 7,681 | (-) 4.65 | (-) 26.09 |

ಆಕರ: ಹದಿನಾಲ್ಕನೇ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು

ಮೇಲಿನ ಕೋಷ್ಟಕದಿಂದ ನೋಡಿದಂತೆ, ಸ್ವಂತ ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯಕ್ಕೆ ಸಂಬಂಧಿಸಿದಂತೆ ಹದಿನಾಲ್ಕನೆ ಹಣಕಾಸು ಆಯೋಗದ ಅಂದಾಜುಗಳನ್ನು ಸಾಧಿಸಲಾಗಿಲ್ಲ ಮತ್ತು ಕೊರತೆಯು ಶೇಕಡಾ 24ರಿಂದ 26ರಷ್ಟಿದೆ. ಹದಿನಾಲ್ಕನೇ ಹಣಕಾಸು ಆಯೋಗದ ಅಂದಾಜುಗಳು ಅಧಿಕವಾಗಿ ಹೇಳಲ್ಪಟ್ಟಿದೆ ಎಂದು ಇದು ಸೂಚಿಸುತ್ತದೆ. ಆದರೆ ಸ್ವಂತ ತೆರಿಗೆ ಆದಾಯದ ಆಯವ್ಯಯ ಪ್ರಕ್ಷೇಪಗಳ ಮೇಲೆ ವಾಸ್ತವಿಕತೆಯ ವ್ಯತ್ಯಾಸವು ಶೇಕಡಾ 28ರಷ್ಟಿದ್ದು ಅಪೇಕ್ಷಿತ ಉದ್ದೇಶದ ಸಾಧನೆಯನ್ನು ಸೂಚಿಸುತ್ತದೆ. ತೆರಿಗೆಯೇತರ ರಾಜಸ್ವ ಸ್ವೀಕೃತಿಯಲ್ಲಿ ಇದು ತೇಜೋರಹಿತವಾಗಿದೆ.

[11] ಇತರೆ ಸಾಲಗಳು ಮತ್ತೆ ಮತ್ತೆ ಮಾಡಿದ ಹೊರಗಿನ ಸಾಲಗಳನ್ನು ಒಳಗೊಂಡಿದ್ದವು.

## 2.5 ಸಂಪನ್ಮೂಲಗಳ ಬಳಕೆ

ರಾಜ್ಯ ಸರ್ಕಾರದ ಮಟ್ಟದಲ್ಲಿ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ ಏಕೆಂದರೆ ಪ್ರಮುಖ ವೆಚ್ಚ ಜವಾಬ್ದಾರಿಗಳ ನಿರ್ವಹಣೆಆ ಮಟ್ಟದಲ್ಲಿ ಇರುತ್ತದೆ. ಹಣಕಾಸಿನ ಜವಾಬ್ದಾರಿ ಶಾಸನಗಳ ಚೌಕಟ್ಟಿನೊಳಗೆ, ಕೊರತೆ ಅಥವಾ ಸಾಲಗಳಿಂದ ಹಣಕಾಸಿನ ವೆಚ್ಚವನ್ನು ಹೆಚ್ಚಿಸುವಲ್ಲಿ ಆಯವ್ಯಯ ನಿರ್ಬಂಧಗಳಿವೆ. ಆದ್ದರಿಂದ, ರಾಜ್ಯ ಮಟ್ಟದಲ್ಲಿನ ವಿತ್ತೀಯ ತಿದ್ದುಪಡಿ ಮತ್ತು ಬಲವರ್ಧನೆ ಪ್ರಕ್ರಿಯೆಯು ವೆಚ್ಚದ ಮೂಲಕವಲ್ಲ, ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿಗೆ ನಿರ್ದೇಶಿಸಲಾದ ವೆಚ್ಚ- ಎಂಬುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ.

ವಿವೇಚನಾಯುಕ್ತ ಹಣಕಾಸಿನ ನಿರ್ವಹಣೆಯು ರಾಜಸ್ವ ವೆಚ್ಚಗಳಿಗಿಂತ ರಾಜಸ್ವ ಆದಾಯವನ್ನು ಹೆಚ್ಚಿಸುವ ಮೂಲಕ ಉಳಿತಾಯವನ್ನು ಸಾಧಿಸುವ ಗುರಿಯನ್ನು ಹೊಂದಿರಬೇಕು. ನೇರವಾಗಿ ಆದಾಯ ನೀಡುವ ಇಳುವರಿ ಚಟುವಟಿಕೆಗಳಿಗೆ ಅಥವಾ ಪರೋಕ್ಷವಾಗಿ ಉತ್ಪಾದಕ ಬಳಕೆಗಳಿಗೆ ಎರವಲು ಪಡೆದ ಹಣವನ್ನು ಬಳಸುವುದು ತೆರಿಗೆ ಅಥವಾ ತೆರಿಗೆಯೇತರ ಆದಾಯದ ಮೂಲಕ ಆದಾಯವನ್ನು ಸೃಷ್ಟಿಸುತ್ತದೆ, ಇದನ್ನು ಋಣ ಸೇವೆ ಮತ್ತು ಸಾಲಗಳ ಮರುಪಾವತಿಗೆ ಬಳಸಬಹುದು.

### *2.5.1 ವೆಚ್ಚದ ಬೆಳವಣಿಗೆ ಮತ್ತು ಸಂಯೋಜನೆ*

ಒಟ್ಟು ವೆಚ್ಚದ ಮೂಲ ಪ್ರಮಿತಿಗಳು, ರಾಜಸ್ವ, ಬಂಡವಾಳ ಮತ್ತು ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಅದರ ಸಂಯೋಜನೆ ಮತ್ತು 2015-16 ರಿಂದ 2019-20ರ ಐದು ವರ್ಷಗಳ ಅವಧಿಯಲ್ಲಿ ರಾಒಆಂಉದಹೋಲಿಕೆಗಳನ್ನು**ಕೋಷ್ಟಕ-2.13**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.13: ಒಟ್ಟು ವೆಚ್ಚ - ಪ್ರವೃತ್ತಿಗಳು ಮತ್ತು ಸಂಯೋಜನೆ**

(₹ಕೋಟಿಗಳಲ್ಲಿ)

| ಪ್ರಮಿತಿಗಳು | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ಒಟ್ಟು ವೆಚ್ಚ | 1,38,398 | 1,62,005 | 1,78,242 | 2,03,446 | 2,13,857 |
| ರಾಜಸ್ವ ವೆಚ್ಚ | 1,17,028 | 1,31,921 | 1,42,482 | 1,64,300 | 1,74,258 |
| ಬಂಡವಾಳ ವೆಚ್ಚ | 20,713 | 28,150 | 30,667 | 34,659 | 35,530 |
| ಸಾಲಗಳು ಮತ್ತು ಮುಂಗಡಗಳು | 657 | 1,934 | 5,093 | 4,487 | 4,069 |
| ರಾಆಂಒಉಗೆ ಶೇಕಡಾವಾರು | | | | | |
| ಒಟ್ಟು ವೆಚ್ಚ/ರಾಒಆಂಉ | 13.24 | 13.40 | 13.13 | 13.17 | 12.59 |
| ರಾಜಸ್ವ ವೆಚ್ಚ/ರಾಒಆಂಉ | 11.20 | 10.91 | 10.50 | 10.64 | 10.26 |
| ಬಂಡವಾಳ ವೆಚ್ಚ/ರಾಒಆಂಉ | 1.98 | 2.33 | 2.26 | 2.24 | 2.09 |
| ಸಾಲಗಳು ಮತ್ತು ಮುಂಗಡಗಳು/ರಾಒಆಂಉ | 0.06 | 0.16 | 0.38 | 0.29 | 0.24 |

2015-16 ರಿಂದ 2019-20ರ ಅವಧಿಯಲ್ಲಿ, ಒಟ್ಟು ವೆಚ್ಚದ ಶೇಕಡಾ 82ರಷ್ಟು ರಾಜಸ್ವ ಲೆಕ್ಕದಲ್ಲಿದೆ. 2019-20ರಲ್ಲಿ ಇದು ಶೇಕಡಾ 81 ಮತ್ತು ಬಂಡವಾಳ ವೆಚ್ಚದ ಪಾಲು (ಸಾಲ ಮತ್ತು ಮುಂಗಡ ಸೇರಿದಂತೆ) ಶೇಕಡಾ 19ರಷ್ಟಿತ್ತು. 2015-16ರಿಂದ 2019-20ರವರೆಗಿನ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲ ಮತ್ತು ಮುಂಗಡಗಳ ಪಾಲನ್ನು **ನಕ್ಷೆ-2.7**ರಲ್ಲಿ ನೀಡಲಾಗಿದೆ.

**ನಕ್ಷೆ–2.7: ಒಟ್ಟು ವೆಚ್ಚ – ಅದರ ಭಾಗಗಳಲ್ಲಿನ ಪಾಲಿನ ಪ್ರವೃತ್ತಿ**




ನಕ್ಷೆ–**2.8**ರಲ್ಲಿ ಸಾಮಾನ್ಯ. ಸಾಮಾಜಿಕ. ಆರ್ಥಿಕ, ಸಾಲಗಳು ಮತ್ತು ಮುಂಗಡ ಮತ್ತು ಸಹಾಯಾನುದಾನಗಳಡಿಯ ಚಟುವಟಿಕೆಗಳ ಒಟ್ಟು ವೆಚ್ಚದ ಪ್ರವೃತ್ತಿಯನ್ನು ನೀಡಲಾಗಿದೆ.

**ನಕ್ಷೆ–2.8: ಒಟ್ಟು ವೆಚ್ಚ – ಚಟುವಟಿಕೆಗಳ ವೆಚ್ಚ**




ಈ ಘಟಕಗಳ ಸಾಪೇಕ್ಷ ಪಾಲು 2015–16 ರಿಂದ 2019–20ರ ಅವಧಿಯಲ್ಲಿ ಕನಿಷ್ಠ ಅಂತರ ವರ್ಷದ ವ್ಯತ್ಯಾಸಗಳೊಂದಿಗೆ ಸ್ಥಿರತೆಯನ್ನು ಪ್ರದರ್ಶಿಸಿದೆ.

### *2.5.2 ರಾಜಸ್ವ ವೆಚ್ಚ*

ಪ್ರಸಕ್ತ ಮಟ್ಟದ ಸೇವೆಗಳನ್ನು ನಿರ್ವಹಿಸಲು ಮತ್ತು ಹಿಂದಿನ ಬಾಧ್ಯತೆಗಳನ್ನುಪಾವತಿಸಲು ರಾಜಸ್ವ ವೆಚ್ಚವನ್ನು ಮಾಡಲಾಗುತ್ತದೆ.

ರಾಜಸ್ವ ವೆಚ್ಚವು ವೇತನ ಮತ್ತು ಸಂಬಳ, ಬಡ್ಡಿ ಪಾವತಿ, ಪಿಂಚಣಿ, ಬಂಡವಾಳ ಕಾಮಗಾರಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚ, ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ಮತ್ತು ಇತರರಿಗೆ ಸಹಾಯಾನುದಾನ ಮತ್ತು ವರ್ಗಾವಣೆಗಳನ್ನು ಒಳಗೊಂಡಿದೆ.

ಆಡಳಿತಾತ್ಮಕ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಂತಹ ವಿವಿಧ ಕ್ರಿಯಾತ್ಮಕ ವರ್ಗಗಳಾಗಿ ವೆಚ್ಚವನ್ನು ವರ್ಗೀಕರಿಸಬಹುದು. ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಭೌತಿಕ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಮಾಡುವ ವೆಚ್ಚವನ್ನು, ಉತ್ಪಾದಕ ವೆಚ್ಚವೆಂದು ಪರಿಗಣಿಸಲಾಗುತ್ತದೆ, ಆದರೆ ಸಾಮಾನ್ಯ ಆಡಳಿತ ಮತ್ತು ಋಣ ಸೇವೆಗಳ ವೆಚ್ಚವನ್ನು ಅನುತ್ಪಾದಕವೆಂದು ಪರಿಗಣಿಸಲಾಗುತ್ತದೆ.

ಒಟ್ಟಾರೆ ರಾಜಸ್ವ ವೆಚ್ಚ, ಅದರ ವೃದ್ಧಿಯದರ, ಒಟ್ಟು ವೆಚ್ಚಕ್ಕೆ ಅದರ ಅನುಪಾತ ಮತ್ತು ರಾಒಆಉ ಕ್ಕೆ ಪ್ರತಿಯಾಗಿ ಪ್ಲವನತೆಮತ್ತು ರಾಜಸ್ವ ಸ್ವೀಕೃತಿಗಳಿಗೆ ಅದರ ಅನುಪಾತವನ್ನು **ಕೋಷ್ಟಕ–2.14**ರಲ್ಲಿ ಸೂಚಿಸಲಾಗಿದೆ ಮತ್ತು 2019–20ಕ್ಕೆ ಸಂಬಂಧಿಸಿದ ರಾಜಸ್ವ ವೆಚ್ಚದ ವಿಭಾಗವಾರು ವಿತರಣೆಯನ್ನು **ನಕ್ಷೆ–2.9** ರಲ್ಲಿ ನೀಡಲಾಗಿದೆ.

**ಕೋಷ್ಟಕ–2.14: ರಾಜಸ್ವ ವೆಚ್ಚ – ಮೂಲ ಪ್ರಮಿತಿಗಳು**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಒಟ್ಟು ವೆಚ್ಚ | 1,38,398 | 1,62,005 | 1,78,242 | 2,03,446 | 2,13,857 |
| ರಾಜಸ್ವ ವೆಚ್ಚ | 1,17,028 | 1,31,921 | 1,42,482 | 1,64,300 | 1,74,258 |
| ರಾಜಸ್ವ ವೆಚ್ಚದ ವೃದ್ಧಿಯದರ (ಶತಾಂಶವಾಗಿ) | 12.95 | 12.73 | 8.01 | 15.31 | 6.06 |
| ಒಟ್ಟು ವೆಚ್ಚಕ್ಕೆ ಶತಾಂಶವಾಗಿ ರಾಜಸ್ವ ವೆಚ್ಚ | 84.56 | 81.43 | 79.94 | 80.76 | 81.48 |
| ರಾಜಸ್ವ ವೆಚ್ಚ/ರಾಒಆಉ | 11.20 | 10.91 | 10.50 | 10.64 | 10.26 |
| ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ರಾಜಸ್ವ ವೆಚ್ಚ | 98.49 | 99.03 | 96.93 | 99.59 | 99.32 |
| ರಾಜಸ್ವ ವೆಚ್ಚದ ಪ್ಲವನತೆ | | | | | |
| ರಾಒಆಉ (ಅನುಪಾತ) | 0.90 | 0.81 | 0.65 | 1.11 | 0.60 |
| ರಾಜಸ್ವ ಸ್ವೀಕೃತಿಗಳು (ಅನುಪಾತ) | 0.92 | 1.05 | 0.77 | 1.25 | 0.96 |

ಮೂಲ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು.

ರಾಜಸ್ವ ವೆಚ್ಚವು 2015–16ರಲ್ಲಿದ್ದ ₹1,17,028 ಕೋಟಿಯಿಂದ 2019–20ರಲ್ಲಿ ₹1,74,258 ಕೋಟಿಗೆ ಏರಿಕೆಯಾಗಿದ್ದು, ಇದು ಶೇಕಡಾ 49ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಹೆಚ್ಚಳವು ಶೇಕಡ 6ರಷ್ಟಿದ್ದು ಇದು ವೇತನ ವೆಚ್ಚ (ಶೇಕಡ 12.48), ಬಡ್ಡಿ ಪಾವತಿ (ಶೇಕಡ 19.80), ಪಿಂಚಣಿ (ಶೇಕಡ 19.83) ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ (ಶೇಕಡ 3) ಇತ್ಯಾದಿಗಳ ಹೆಚ್ಚಳದಿಂದಾಗಿ ಉಂಟಾಗಿದೆ.

**ನಕ್ಷೆ–2.9: ರಾಜಸ್ವ ವೆಚ್ಚದ ವಲಯವಾರು ವಿತರಣೆ**




2019–20ರಲ್ಲಿ, ರಾಜಸ್ವ ವೆಚ್ಚವು ರಾಒಆಂಉದ ಶತಾಂಶವಾಗಿ ಕಡಿಮೆಯಾಗಿದೆ, ಇದು ಹಿಂದಿನ ವರ್ಷಕ್ಕಿಂತ ₹9,958 ಕೋಟಿ (ಶೇ 6.06) ಹೆಚ್ಚಾಗಿದೆ. ರಾಜಸ್ವ ವೆಚ್ಚವು ಮಧ್ಯಮ ಅವಧಿಯ ವಿತ್ತೀಯ ಯೋಜನೆಯಲ್ಲಿ (ಎಂಟಿಎಫ್‌ಪಿ) (2018–22) ಮಾಡಿದ ಅಂದಾಜಿಗೆ ಹೋಲಿಸಿದರೆ (₹1,87,633 ಕೋಟಿ) ₹13,375 ಕೋಟಿಯಷ್ಟು ಕಡಿಮೆಯಾಗಿದೆ.

### *2.5.2.1 ರಾಜಸ್ವ ವೆಚ್ಚದಲ್ಲಿ ಪ್ರಮುಖ ಬದಲಾವಣೆಗಳು*

ಪ್ರಸಕ್ತ ವರ್ಷ ಮತ್ತು ಹಿಂದಿನ ವರ್ಷದಲ್ಲಿ ರಾಜ್ಯದ ರಾಜಸ್ವ ವೆಚ್ಚಕ್ಕೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಕಂಡು ಬಂದ ಗಮನಾರ್ಹ ವ್ಯತ್ಯಾಸಗಳನ್ನು **ಕೋಷ್ಟಕ–2.15** ವಿವರಿಸಲಾಗಿದೆ.

**ಕೋಷ್ಟಕ–2.15: 2018–19ಕ್ಕೆ ಹೋಲಿಸಿದರೆ 2019–20ರ ಅವಧಿಯಲ್ಲಿ ರಾಜಸ್ವ ವೆಚ್ಚದಲ್ಲಿನ ವ್ಯತ್ಯಾಸ**

**(₹ ಕೋಟಿಗಳಲ್ಲಿ)**

| ಪ್ರಧಾನ ಲೆಕ್ಕಶೀರ್ಷಿಕೆ | 2018–19 | 2019–20 | ಏರಿಕೆ (+)/ಇಳಿಕೆ (–) (ಶತಾಂಶವಾಗಿ) |
|---|---|---|---|
| 2075–ಇತರೆ ಸಾಮಾನ್ಯ ಸೇವೆಗಳು | 118.58 | 123.07 | 4.49 (3.79) |
| 2215–ನೀರು ಸರಬರಾಜು ಮತ್ತು ನೈರ್ಮಲ್ಯ | 3,075.32 | 1,736.33 | (–) 1,338.99 (–43.54) |
| 2216–ವಸತಿ | 3,006.74 | 3,223.01 | 216.27 (7.19) |
| 2225–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ | 8,487.81 | 7,167.25 | (–) 1,320.56 (–15.56) |
| 2236–ಪೌಷ್ಟಿಕತೆ | 1,889.29 | 1,890.21 | 0.92 (0.05) |
| 2501–ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು | 216.87 | 261.18 | 44.31 (20.43) |
| 2505–ಗ್ರಾಮೀಣ ಉದ್ಯೋಗ | 1,992.79 | 1,818.52 | (–) 174.27 (–8.75) |
| 2515–ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | 4,776.82 | 5,179.96 | 403.14 (8.44) |
| 2575–ಇತರೆ ವಿಶೇಷ ಪ್ರದೇಶಗಳ ಕಾರ್ಯ ಕ್ರಮಗಳು | 302.57 | 225.81 | (–) 76.76 (–25.37) |

ಪ್ರಸಕ್ತ ವರ್ಷದಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯದ ಅಡಿಯಲ್ಲಿನ ರಾಜಸ್ವ ವೆಚ್ಚವು ಕುಸಿಯಿತು, ಇದು ಮುಖ್ಯವಾಗಿ 102–ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮಗಳ ಅಡಿಯಲ್ಲಿ ಕಡಿಮೆಯಾಗಿದ್ದರಿಂದ ಉಂಟಾಗಿದೆ. ಅಂತೆಯೇ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಲ್ಯಾಣದ ವೆಚ್ಚವು, ಹಿಂದಿನ ವರ್ಷಕ್ಕೆ ಹೋಲಿಸಿದರೆ 2019–20ರಲ್ಲಿ ಇಳಿಕೆಯನ್ನು ದಾಖಲಿಸಿದೆ.

### *2.5.2.2 ಉದ್ದೇಶ ಶೀರ್ಷಿಕೆವಾರು ವೆಚ್ಚ*

ಹಣಕಾಸು ಲೆಕ್ಕಗಳು ವಹಿವಾಟುಗಳನ್ನು ಒಳಶೀರ್ಷಿಕೆಯ ಹಂತದವರೆಗೆ ಮಾತ್ರ ದಾಖಲಿಸುತ್ತದೆ. ಆದ್ದರಿಂದ, ಒಟ್ಟು ಪಟ್ಟಿ ಮಾಡಲಾದ 117 ಉದ್ದೇಶ ಶೀರ್ಷಿಕೆಗಳಲ್ಲಿ 22 ಉದ್ದೇಶ ಶೀರ್ಷಿಕೆಗಳಲ್ಲಿ ಆಯವ್ಯಯ ಹಂಚಿಕೆ ಮತ್ತು ವೆಚ್ಚದ ವ್ಯಾಪ್ತಿಯನ್ನು (₹100 ಕೋಟಿಗಿಂತ ಹೆಚ್ಚು) **ಕೋಷ್ಟಕ–2.16** ರಲ್ಲಿ ನೀಡಲಾಗಿದೆ.

**ಕೋಷ್ಟಕ–2.16: ಉದ್ದೇಶ ಶೀರ್ಷಿಕೆವಾರು ವೆಚ್ಚ ಮತ್ತು ಆಯವ್ಯಯಹಂಚಿಕೆ**

(₹ ಕೋಟಿಗಳಲ್ಲಿ)

| ಶೀರ್ಷಿಕೆ | ಆಯವ್ಯಯ | ವೆಚ್ಚ | ಬಳಕೆಯ ಶೇಕಡಾವಾರು |
|---|---|---|---|
| ವೇತನಗಳು* | 14,974.69 | 14,561.07 | 97.24 |
| ದಿನಗೂಲಿ | 183.07 | 179.61 | 98.11 |
| ಬಂಡವಾಳ ಆಸ್ತಿಗಳ ಸೃಜನೆಗಾಗಿ ಅನುದಾನಗಳು | 2,559.50 | 2,348.50 | 91.76 |
| ಗುತ್ತಿಗೆ/ಹೊರಗುತ್ತಿಗೆ | 843.33 | 743.02 | 88.11 |
| ಸಾಮಾನ್ಯ ವೆಚ್ಚಗಳು | 1,087.98 | 1,002.65 | 92.16 |
| ಇತರೆ ವೆಚ್ಚಗಳು | 15,346.18 | 13,404.24 | 87.35 |
| ಕಟ್ಟಡ ವೆಚ್ಚಗಳು | 294.24 | 273.04 | 92.79 |
| ಸಹಾಯಾನುದಾನ ವೇತನಗಳು | 5,346.09 | 5,282.39 | 98.81 |
| ಸಹಾಯಾನುದಾನ ಸಾಮಾನ್ಯ | 3,390.20 | 3,095.89 | 91.32 |
| ಸಹಾಯಧನಗಳು | 17,621.23 | 17,538.92 | 99.53 |
| ವಿದ್ಯಾರ್ಥಿವೇತನಗಳು ಮತ್ತು ಪ್ರೋತ್ಸಾಹಕಗಳು | 336.94 | 165.00 | 48.97 |
| ಬಂಡವಾಳ ವೆಚ್ಚಗಳು | 895.58 | 668.39 | 74.63 |
| ಭಾರಿ ಕಾಮಗಾರಿಗಳು | 945.75 | 925.31 | 97.84 |
| ಸಾರಿಗೆ ವೆಚ್ಚಗಳು | 396.94 | 378.64 | 95.39 |
| ನಿರ್ವಹಣಾ ವೆಚ್ಚಗಳು | 3,283.51 | 3,069.54 | 93.48 |
| ಸರಕುಗಳು ಮತ್ತು ಸರಬರಾಜುಗಳು | 518.46 | 510.94 | 98.55 |
| ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 18,667.76 | 18,644.72 | 99.88 |

*ಕ್ರೋಡೀಕೃತ ಸಂಬಳವು, ಅಧಿಕಾರಿಗಳ ವೇತನ, ಸಿಬ್ಬಂದಿಗಳ ವೇತನ, ಮಧ್ಯಂತರ ಪರಿಹಾರ, ತುಟ್ಟಿಭತ್ಯೆ, ಇತರ ಭತ್ಯೆಗಳು, ವೈದ್ಯಕೀಯ ಭತ್ಯೆ ಮತ್ತು ವೈದ್ಯಕೀಯ ವೆಚ್ಚಗಳ ಮರುಪಾವತಿಯ ಉದ್ದೇಶ ಶೀರ್ಷಿಕೆಗಳನ್ನು ಒಳಗೊಂಡಿದೆ.

2019–20ರಲ್ಲಿ ವಿವಿಧ ಉದ್ದೇಶ ಶೀರ್ಷಿಕೆಗಳಡಿಯ₹2,63,804.67 ಕೋಟಿಗಳ ಒಟ್ಟು ಆಯವ್ಯಯದಲ್ಲಿ, ₹2,33,978.23 ಕೋಟಿಗಳು (ಶೇಕಡಾ 88.69) ವೆಚ್ಚವಾಗಿದೆ. ಮೇಲೆ ತಿಳಿಸಲಾದ 17 ಉದ್ದೇಶ ಶೀರ್ಷಿಕೆಗಳಡಿ ಯಾವುದೇ ಶೀರ್ಷಿಕೆಯಡಿ ಆಯವ್ಯಯ ಹಂಚಿಕೆಯನ್ನು ಪೂರ್ಣವಾಗಿ ಖರ್ಚು ಮಾಡಿಲ್ಲ, 14 ಉದ್ದೇಶ ಶೀರ್ಷಿಕೆಗಳಡಿ ಹಂಚಿಕೆಯ ಶೇಕಡಾ 90ಕ್ಕಿಂತ ಹೆಚ್ಚು ಹಣ ಬಳಕೆಯಾಗಿದೆ. ಉಳಿದ, ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಕಗಳು, ಗುತ್ತಿಗೆ/ಹೊರಗುತ್ತಿಗೆ ಮತ್ತು ಬಂಡವಾಳ ವೆಚ್ಚಗಳ ಮೂರು ಶೀರ್ಷಿಕೆಗಳಡಿ ಕ್ರಮವಾಗಿ ಶೇಕಡಾ 49, 88 ಮತ್ತು 75ರಷ್ಟು ಬಳಕೆಯಾಗಿದೆ. ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಕಗಳಿಗೆ ನಿಗದಿಪಡಿಸಿದ ವೆಚ್ಚವನ್ನು ರಾಜ್ಯವು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದ, ಫಲಾನುಭವಿಗಳು ಸವಲತ್ತುಗಳಿಂದ ವಂಚಿತರಾದರು.

### *2.5.2.3 ಬದ್ಧ ವೆಚ್ಚ*

ಬಹುತೇಕ ರಾಜಸ್ವ ವೆಚ್ಚವು ಸಂಬಳ, ಬಡ್ಡಿ, ಪಿಂಚಣಿ, ಸಹಾಯಧನ ಇತ್ಯಾದಿಗಳ ಮೇಲಿನ ಬದ್ಧತೆಯ ವೆಚ್ಚದ ಸ್ವರೂಪದಲ್ಲಿದೆ. ಬದ್ಧತೆಯ ವೆಚ್ಚದಲ್ಲಿನ ಏರು ಪ್ರವೃತ್ತಿಯು ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸುವಲ್ಲಿ ಮತ್ತು ಸಾಮಾಜಿಕ ಮತ್ತು ಆರ್ಥಿಕ ಮೂಲಸೌಕರ್ಯಗಳ ಹೆಚ್ಚುತ್ತಿರುವ ಅಗತ್ಯತೆಗಳನ್ನು ಪೂರೈಸಲು ಆದ್ಯತೆ ನೀಡುವಲ್ಲಿ ಪರಿಣಾಮ ಬೀರುತ್ತದೆ. ಇವುಗಳ ಜೊತೆಗೆ, ಸಾಮಾಜಿಕ ಭದ್ರತಾ

ಯೋಜನೆಗಳ ಅಡಿಯಲ್ಲಿನ ಪಿಂಚಣಿ, ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಉದ್ಭವಿಸುವ ಸಹಾಯಧನಗಳು, ಸಹಾಯಾನುದಾನ ಮತ್ತು ಹಣಕಾಸಿನ ನೆರವು, ಆಡಳಿತಾತ್ಮಕ ವೆಚ್ಚಗಳು, ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮುಂತಾದ ಕೆಲವು ಇತರ ವೆಚ್ಚವನ್ನು ಮಧ್ಯಮ ಅವಧಿಯ ಹಣಕಾಸಿನ ಯೋಜನೆ (ಎಂಟಿಎಫ್‌ಪಿ) 2020–24ರಲ್ಲಿ ಬದ್ಧ ವೆಚ್ಚವೆಂದು ಪರಿಗಣಿಸಲಾಗಿದೆ. 2015–16ರಿಂದ 2019–20ರ ಅವಧಿಯಲ್ಲಿ ಈ ಘಟಕಗಳ ಮೇಲಿನ ವೆಚ್ಚವನ್ನು **ಕೋಷ್ಟಕ–2.17** ಮತ್ತು **ನಕ್ಷೆ–2.10** ರಲ್ಲಿ ನೀಡಲಾಗಿದೆ. ಬದ್ಧ ವೆಚ್ಚವು ಏರುತ್ತಿರುವ ಪ್ರವೃತ್ತಿಯ ವೆಚ್ಚದ ಆದ್ಯತೆಹಾಗೂ ಸಾಮಾಜಿಕ ಮತ್ತು ಆರ್ಥಿಕ ಮೂಲಭೂತ ಸೌಕರ್ಯಗಳಲ್ಲಿ ಹೆಚ್ಚುತ್ತಿರುವ ಬಂಡವಾಳ ಹೂಡಿಕೆಯ ಕುಶಲತೆಯ ಮೇಲೆ ಪರಿಣಾಮ ಬೀರುತ್ತದೆ.

**ಕೋಷ್ಟಕ–2.17: ಬದ್ಧ ವೆಚ್ಚದ ಘಟಕಗಳು**

(₹ ಕೋಟಿಗಳಲ್ಲಿ)

| ಘಟಕಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ವೇತನಗಳು | 9,166 | 9,790 | 10,546 | 13,315 | 14,561 |
| ಪಿಆರ್‌ಐಗಳ ವೇತನಗಳು (ಸಹಾಯಾನುದಾನು) | 11,608 | 11,918 | 12,412 | 14,709 | 16,960 |
| ಬಡ್ಡಿ ಪಾವತಿಗಳು# | 11,343 | 12,850 | 14,973 | 16,614 | 19,903 |
| ಪಿಂಚಣಿಗಳು | 11,251 | 11,295 | 11,684 | 15,109 | 18,404 |
| ಸಹಾಯಧನಗಳು @ | 13,149 | 14,387 | 14,148 | 15,400 | 17,534 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 10,840 | 13,163 | 11,812 | 24,888 | 19,023 |
| ಸ್ಥಳೀಯ ಸಂಸ್ಥೆಗಳಿಗೆ ವಿತರಣೆ* | 21,163 | 23,466 | 25,131 | 26,720 | 27,514 |
| ಸಾಮಾಜಿಕ ಭದ್ರತೆ ಪಿಂಚಣಿಗಳು | 2,247 | 2,503 | 4,055 | 5,460 | 7,243 |
| ಆಡಳಿತಾತ್ಮಕ ವೆಚ್ಚಗಳು | 1,958 | 1,966 | 2,404 | 2,136 | 2,467 |
| ಒಟ್ಟು^ | **92,725** | **1,01,338** | **1,07,165** | **1,34,351** | **1,43,609** |
| ರಾಜಸ್ವ ಸ್ವೀಕೃತಿಗಳಿಗೆ ಶತಾಂಶವಾಗಿ | | | | | |
| ವೇತನಗಳು | 7.71 | 7.35 | 7.17 | 8.07 | 8.30 |
| ಪಂಚಾಯತ್ ರಾಜ್ ಸಂಸ್ಥೆಗಳವೇತನಗಳು (ಸಹಾಯಾನುದಾನ) | 9.77 | 8.95 | 8.44 | 8.92 | 9.67 |
| ಬಡ್ಡಿ ಪಾವತಿಗಳು | 9.55 | 9.65 | 10.18 | 10.07 | 11.34 |
| ಪಿಂಚಣಿಗಳು | 9.47 | 8.48 | 7.95 | 9.16 | 10.49 |
| ಸಹಾಯಧನಗಳು | 11.07 | 10.80 | 9.62 | 9.33 | 9.99 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 9.12 | 9.88 | 8.04 | 15.08 | 10.84 |
| ಸ್ಥಳೀಯ ಸಂಸ್ಥೆಗಳಿಗೆ ವಿತರಣೆ | 17.81 | 17.61 | 17.10 | 16.20 | 15.68 |
| ಸಾಮಾಜಿಕ ಭದ್ರತೆ ಪಿಂಚಣಿಗಳು | 1.89 | 1.88 | 2.76 | 3.31 | 4.13 |
| ಆಡಳಿತಾತ್ಮಕ ವೆಚ್ಚಗಳು | 1.65 | 1.47 | 1.64 | 1.29 | 1.41 |
| ಒಟ್ಟು | **78.04** | **76.07** | **72.90** | **81.43** | **81.85** |
| ರಾಜಸ್ವ ವೆಚ್ಚದ ಶತಾಂಶವಾಗಿ | | | | | |
| ವೇತನಗಳು | 7.83 | 7.42 | 7.40 | 8.10 | 8.36 |
| ಪಂಚಾಯತ್ ರಾಜ್ ಸಂಸ್ಥೆಗಳವೇತನಗಳು (ಸಹಾಯಾನುದಾನ) | 9.92 | 9.03 | 8.71 | 8.96 | 9.73 |
| ಬಡ್ಡಿ ಪಾವತಿಗಳು | 9.69 | 9.74 | 10.51 | 10.11 | 11.42 |
| ಪಿಂಚಣಿಗಳು | 9.62 | 8.56 | 8.20 | 9.20 | 10.56 |
| ಸಹಾಯಧನಗಳು | 11.24 | 10.91 | 9.93 | 9.37 | 10.06 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 9.26 | 9.98 | 8.29 | 15.15 | 10.92 |
| ಸ್ಥಳೀಯ ಸಂಸ್ಥೆಗಳಿಗೆ ವಿತರಣೆ | 18.08 | 17.79 | 17.64 | 16.26 | 15.79 |
| ಸಾಮಾಜಿಕ ಭದ್ರತೆ ಪಿಂಚಣಿಗಳು | 1.92 | 1.90 | 2.84 | 3.32 | 4.16 |
| ಆಡಳಿತಾತ್ಮಕ ವೆಚ್ಚಗಳು | 1.67 | 1.49 | 1.69 | 1.30 | 1.41 |
| ಒಟ್ಟು | **79.23** | **76.82** | **75.21** | **81.77** | **82.41** |

# ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಒಳಗೊಂಡಿದೆ.

@ಹಣಕಾಸಿನ ಸಹಾಯದ ರೂಪದ ಸಹಾಯಧನಗಳನ್ನು ಒಳಗೊಂಡಿರುತ್ತದೆ.

^ಗುತ್ತಿಗೆ/ಹೊರಗುತ್ತಿಗೆ ಉದ್ಯೋಗಿಗಳಿಗೆ ದಿನಗೂಲಿ ಮತ್ತು ವೇತನವನ್ನು ಒಳಗೊಂಡಿಲ್ಲ.

* ಪಂಚಾಯತ್ ರಾಜ್ ಸಂಸ್ಥೆಗಳ ವೇತನೇತರ ಘಟಕ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಇತರ ಖರ್ಚುಗಳನ್ನು ಒಳಗೊಂಡಿದೆ.

**ನಕ್ಷೆ–2.10: ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚದ ಪಾಲು**




ಮೇಲಿನ ಕೋಷ್ಟಕದಲ್ಲಿ ಕಂಡಂತೆ, ಬದ್ಧ ವೆಚ್ಚವು 2015–16ರಿಂದ 2019–20ರ ಅವಧಿಯಲ್ಲಿ ರಾಜಸ್ವ ವೆಚ್ಚದ ಶೇಕಡಾ 75ರಿಂದ 82ರಷ್ಟಿದೆ. ಬದ್ಧವಲ್ಲದ ವೆಚ್ಚವು ಈ ಅವಧಿಯಲ್ಲಿ ಶೇಕಡಾ 18 ರಿಂದ 25ರವರೆಗೆ ಇದೆ. 2019–20ರಲ್ಲಿ ಇತರ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಲಭ್ಯವಿರುವ ರಾಜಸ್ವ ವೆಚ್ಚವುಶೇಕಡಾ 18 ಮತ್ತು ಒಟ್ಟು ವೆಚ್ಚದ ಶೇಕಡಾ 14 ರಷ್ಟಿತ್ತು.

### *2.5.2.4 ವೇತನಗಳು ಮತ್ತು ದಿನಗೂಲಿಗಳು*

ವೇತನದ ಮೇಲಿನ ವೆಚ್ಚವು 2015–16ರಲ್ಲಿ ₹20,774 ಕೋಟಿಯಿದ್ದು 2019–20ರಲ್ಲಿ ₹31,521 ಕೋಟಿಗೆ ಏರಿದೆ. ಇದು ಹಿಂದಿನ ವರ್ಷಕ್ಕಿಂತ ಶೇಕಡಾ 12ರಷ್ಟು ಹೆಚ್ಚಾಗಿದೆ. ಈ ವೆಚ್ಚವು ಪಂಚಾಯತ್ ರಾಜ್ಯ ಸಂಸ್ಥೆಗಳ ವೇತನವನ್ನು ಒಳಗೊಂಡಿದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳ ವೇತನವನ್ನು ಒಳಗೊಂಡಿಲ್ಲ. ಹೀಗಾಗಿ ವೇತನದ ಮೇಲಿನ ವೆಚ್ಚವನ್ನು ಕಡಿಮೆಯಾಗಿ ಹೇಳಲಾಗಿದೆ. ಇದು 2019–20ರಲ್ಲಿ ರಾಜಸ್ವ ವೆಚ್ಚದ ಶೇಕಡಾ 18ರಷ್ಟಿದ್ದು, ಹಿಂದಿನ ವರ್ಷಕ್ಕಿಂತ ಶೇಕಡಾ ಒಂದರಷ್ಟು ಹೆಚ್ಚಾಗಿದೆ. ಹಣಕಾಸು ಲೆಕ್ಕಗಳು ರಾಜ್ಯ ವಲಯಕ್ಕೆ ಸಂಬಂಧಿಸಿದಂತೆ ಮಾತ್ರ ವೇತನದ ದತ್ತಾಂಶವನ್ನು ಒದಗಿಸಿರುತ್ತದೆ. ಆದರೆ ಪಂಚಾಯತ್ ರಾಜ್ಯ ಸಂಸ್ಥೆಗಳ ವೇತನ (₹16,960 ಕೋಟಿ) ವೆಚ್ಚವನ್ನು ದಾಖಲಿಸಿರುವುದಿಲ್ಲ. ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಸಂಬಂಧಿಸಿದ ವೇತನವನ್ನು ಸಹಾಯಾನುದಾನವಾಗಿ ಬಿಡುಗಡೆ ಮಾಡಲಾಗಿರುವುದರಿಂದ ಒಟ್ಟು ವೇತನ ವೆಚ್ಚವು ಹಣಕಾಸು ಲೆಕ್ಕಗಳಲ್ಲಿ ಪ್ರತಿಫಲಿಸಿರುವುದಿಲ್ಲ. 2019–20ರಲ್ಲಿ, ದಿನಗೂಲಿ ಮತ್ತು ಗುತ್ತಿಗೆ/ಹೊರಗುತ್ತಿಗೆ ನೌಕರರ ವೆಚ್ಚವು ₹922.63 ಕೋಟಿಯಿದ್ದು ಇದು ಹಿಂದಿನ ವರ್ಷಕ್ಕಿಂತ ₹209 ಕೋಟಿ ಹೆಚ್ಚಾಗಿದೆ.

ಹಿಂದಿನ ರಾಜ್ಯ ಹಣಕಾಸು ವ್ಯವಹಾರಗಳ ಲೆಕ್ಕಪರಿಶೋಧನೆಯ ಮೂಲಕ ಇದನ್ನು ಗಮನಕ್ಕೆ ತಂದಾಗ ಆರ್ಥಿಕ ಇಲಾಖೆ ತನ್ನ ಅನಧಿಕೃತ ಟಿಪ್ಪಣಿಯಲ್ಲಿ (ಜನವರಿ 2020) 2020–21ರ ಆರ್ಥಿಕ ವರ್ಷಕ್ಕೆ ಜಿಲ್ಲಾ ವಲಯ ವೇತನವನ್ನು ಲೆಕ್ಕ ಮಾಡಲು ಹೊಸ ಉದ್ದೇಶ ಶೀರ್ಷಿಕೆ '005 –ಜಿಲ್ಲಾ ಪಂಚಾಯತ್ ವಲಯ–ವೇತನ' ವನ್ನು ಆರಂಭಿಸಲಾಗಿದೆ ಎಂದು ಹೇಳಿದೆ.

### *2.5.2.5 ನಿವೃತ್ತಿ ವೇತನಗಳು*

2019–20ರಲ್ಲಿ ನಿವೃತ್ತಿ ವೇತನ ವೆಚ್ಚವು ₹18,404 ಕೋಟಿಯಷ್ಟಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ₹3,295 ಕೋಟಿಯಷ್ಟು ಅಧಿಕವಾಗಿದೆ.

- **ನೂತನ ಪಿಂಚಣಿ ಯೋಜನೆ**

ಏಪ್ರಿಲ್ 01, 2006 ರಂದು ಅಥವಾ ನಂತರ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ಎಲ್ಲ ಉದ್ಯೋಗಿಗಳಿಗೆ ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ಎಂದು ಕರೆಯಲ್ಪಡುವ ನಿರ್ದಿಷ್ಟ ವಂತಿಗೆ ಪಿಂಚಣಿ ಯೋಜನೆಯು 01 ಏಪ್ರಿಲ್ 2010ರರಿಂದ ಸಂಪೂರ್ಣವಾಗಿ ಜಾರಿಗೊಂಡಿದೆ. ಖಜಾನೆಗಳ ನಿರ್ದೇಶನಾಲಯದ ಅಡಿಯಲ್ಲಿ ಇದಕ್ಕಾಗಿಯೇ ಎನ್‌ಪಿಎಸ್ ಕೋಶವನ್ನು ರಚಿಸಲಾಗಿದೆ. ರಾಜ್ಯ ಸರ್ಕಾರವು ನಿವೃತ್ತಿ ವೇತನ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ವಿನ್ಯಾಸಗೊಳಿಸಿದ ಎನ್‌ಪಿಎಸ್ ರಚನೆಯನ್ನು ರಾಜ್ಯ ಸರ್ಕಾರ ಅಳವಡಿಸಿಕೊಂಡಿದೆ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಅನ್ನು ಕೇಂದ್ರ ದಾಖಲೆ ನಿರ್ವಹಣಾ ಏಜೆನ್ಸಿ (ಸಿಆರ್‌ಎ) ಆಗಿ ನೇಮಿಸಿದೆ. ಆಕ್ಸಿಸ್ ಬ್ಯಾಂಕ್ ಅನ್ನು ಪಿಂಚಣಿ ನಿಧಿಗಳ ಕಾರ್ಯಾಚರಣೆಯ ಉಸ್ತುವಾರಿ ಟ್ರಸ್ಟೀ ಬ್ಯಾಂಕ್ ಆಗಿ ಆಯ್ಕೆ ಮಾಡಲಾಗಿದೆ.

ಖಜಾನೆಗಳ ಆಯುಕ್ತರು (ಸೆಪ್ಟೆಂಬರ್ 2020) ಒದಗಿಸಿದ ಯೋಜನೆಯ ವಿವರಗಳು ಮತ್ತು ರಾಜ್ಯ ಸರ್ಕಾರ ಮತ್ತು ನೌಕರರು ನೀಡಿದ ವಂತಿಗೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

- ಸರ್ಕಾರಿ ವಲಯ ಮತ್ತು ಸ್ವಾಯತ್ತ ಸಂಸ್ಥೆಗಳ ಅಡಿಯಲ್ಲಿ ಶಾಶ್ವತ ನಿವೃತ್ತಿ ಖಾತೆ ಸಂಖ್ಯೆ (ಪಿಆರ್ ಎಎನ್) ನಿಗದಿಪಡಿಸಿದ ನೌಕರರ ಸಂಖ್ಯೆ ಕ್ರಮವಾಗಿ 2,29,281 ಮತ್ತು 25,616 ಆಗಿದೆ
- 2019–20ರ ಅವಧಿಯಲ್ಲಿ, ನೌಕರರ ಕೊಡುಗೆ (ಸ್ಥಾಯಿ ಮತ್ತು ಬಾಕಿ ಇದ್ದ[12]) ₹868.83 ಕೋಟಿ ಮತ್ತು ಸರ್ಕಾರದ ವಂತಿಗೆ[13] ₹1,293.55 ಕೋಟಿ ಆಗಿತ್ತು.
- ಈ ವರ್ಷದಲ್ಲಿ, ₹4.67 ಕೋಟಿಗಳ ಆರಂಭಿಕ ಬಾಕಿ ಮೊತ್ತವನ್ನು ಒಳಗೊಂಡ₹1,902.14 ಕೋಟಿಗಳನ್ನು ಎನ್‌ಎಸ್ ಡಿಎಲ್/ಟ್ರಸ್ಟೀ ಬ್ಯಾಂಕ್, (ನೌಕರರು ಮತ್ತು ಉದ್ಯೋಗದಾತರ ಕೊಡುಗೆ) 31 ಮಾರ್ಚ್ 2020ರ ಅಂತ್ಯದ ವೇಳೆಗೆ ವರ್ಗಾಯಿಸಲಾಯಿತು ಮತ್ತು
- 2019–20ರಲ್ಲಿ, ₹1.80 ಕೋಟಿಗಳನ್ನು ಸಂಚಿತ ನಿಧಿಯಿಂದ ನೂತನ ವಂತಿಗೆ ಪಿಂಚಣಿ ಯೋಜನೆಯ ಹೊಸ ಕೊಡುಗೆ ಪಿಂಚಣಿ ಯೋಜನೆಗಳು – ಸೇವೆಯಲ್ಲಿದ್ದಾಗ ನಿವೃತ್ತರಾದ/ ಮರಣ ಹೊಂದಿದ ವ್ಯಕ್ತಿಗಳು/ಕುಟುಂಬಗಳ ಪ್ರಕರಣಗಳಿಗೆ ಸೌಲಭ್ಯದ ವಿಸ್ತರಣೆ ಮತ್ತು ಹೊಸ ಪಿಂಚಣಿ ಯೋಜನೆಯಡಿ ನೀಡಲಾಗಿದೆ.

ಎನ್‌ಪಿಎಸ್ ಕೋಶದಿಂದ ಪಡೆದ ಮಾಹಿತಿಯಂತೆ, ಎನ್‌ಎಸ್‌ಡಿಎಲ್‌ಗೆ 2019–20ರಲ್ಲಿ ವರ್ಗಾಯಿಸಿದ ಮೊತ್ತ ₹1,902.14 ಕೋಟಿಗಳಾಗಿದ್ದು ಪ್ರಧಾನ ಮಹಾಲೇಖಾಪಾಲರ (ಲೆಕ್ಕ ಮತ್ತು ಹಕ್ಕುಪತ್ರ) ಪುಸ್ತಕಗಳ ಪ್ರಕಾರ ವರ್ಗಾಯಿಸಿದ ಮೊತ್ತ ₹1,897,57 ಕೋಟಿಗಳಾಗಿವೆ. ಸರ್ಕಾರದ ಆದೇಶದಲ್ಲಿನ (ಮೇ 2017) ಸೂಚನೆಗಳನ್ವಯ ₹4.57 ಕೋಟಿಗಳ ವ್ಯತ್ಯಾಸವನ್ನು ಹೊಂದಾಣಿಕೆ ಮಾಡಬೇಕಾಗಿದೆ.

---

[12]ನೌಕರನು ಸೇವೆಗೆ ಸೇರಿದಂದಿನಿಂದ ಯೋಜನೆಯು ಅನುಷ್ಠಾನಗೊಂಡ ದಿನಾಂಕದವರೆಗೆ ನೌಕರನು ನೀಡಬೇಕಾದ ವಂತಿಗೆ.

[13]31 ಮಾರ್ಚ್ 2020ರವರೆಗೆ ನೌಕರರ ವಂತಿಗೆಯು ₹4,316.58 ಕೋಟಿ ಮತ್ತು ರಾಜ್ಯ ಸರ್ಕಾರ ನೀಡಿದ ಅನುರೂಪ ವಂತಿಗೆ ₹4,791.79 ಕೋಟಿಗಳು.

### *2.5.2.6 ಬಡ್ಡಿ ಪಾವತಿಗಳು*[14]

2015–16ರಲ್ಲಿ ₹11,343 ಕೋಟಿಯಿದ್ದ ಬಡ್ಡಿ ಪಾವತಿಗಳು 2019–20ರ ಅವಧಿಯಲ್ಲಿ ₹19,903 ಕೋಟಿಗೆ ಏರಿ ₹8,560 ಕೋಟಿಯಷ್ಟು (ಶೇಕಡಾ 75) ಹೆಚ್ಚಾಗಿದೆ. 2018–19ಕ್ಕೆ ಹೋಲಿಸಿದರೆ ಬಡ್ಡಿ ಪಾವತಿಯು ಶೇ.19.80ರಷ್ಟು ಹೆಚ್ಚಾಗಿದೆ. 2019–20ರಲ್ಲಿ ಬಡ್ಡಿ ಪಾವತಿಗಳು ಆಂತರಿಕ ಸಾಲದ ಮೇಲಿನ ಬಡ್ಡಿ (₹15,085 ಕೋಟಿ), ಸಣ್ಣ ಉಳಿತಾಯ ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ (₹ 2,747 ಕೋಟಿ), ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು ಮೇಲಿನ ಬಡ್ಡಿ (₹684 ಕೋಟಿ), ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹1,384 ಕೋಟಿ) ಮತ್ತು ಇತರ ಬಾಧ್ಯತೆಗಳ ಮೇಲಿನ ಬಡ್ಡಿಗಳನ್ನು (₹3 ಕೋಟಿ) ಒಳಗೊಂಡಿವೆ.

ಮಾರುಕಟ್ಟೆ ಸಾಲದ ಮೇಲಿನ ಬಡ್ಡಿ ಪಾವತಿಯನ್ನು ₹2,790 ಕೋಟಿ (ಶೇಕಡಾ 27) ಹೆಚ್ಚಿಸಿದ ಕಾರಣ ಆಂತರಿಕ ಸಾಲದ ಮೇಲಿನ ಬಡ್ಡಿ 2018–19ರಲ್ಲಿ ₹12,359 ಕೋಟಿಯಿಂದ 2019–20ರಲ್ಲಿ ₹15,085 ಕೋಟಿಗೆ ಏರಿದೆ. ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ 2018–19ರಲ್ಲಿದ್ದ ₹2,358 ಕೋಟಿಯಿಂದ 2019–20ರಲ್ಲಿ ₹2,747 ಕೋಟಿಯಾಗಿ ₹390 ಕೋಟಿ ಏರಿಕೆಯಾಗಿದೆ. ಇದು ಮುಖ್ಯವಾಗಿ ರಾಜ್ಯ ಭವಿಷ್ಯ ನಿಧಿ (ಶೇಕಡಾ20) ಮತ್ತು ವಿಮೆಯ ಮೇಲಿನ ಬಡ್ಡಿ ಹೆಚ್ಚಳದಿಂದಾಗಿ (ಶೇಕಡಾ 14) ಉಂಟಾಗಿದೆ.

### *2.5.2.7 ಸಹಾಯಧನಗಳು*

ಕೋಷ್ಟಕ–2.18ರಲ್ಲಿ ನೀಡಲಾಗಿರುವ ವಿವರದಲ್ಲಿ ತಿಳಿಸಿರುವಂತೆ 2019–20ರಲ್ಲಿ ಸಹಾಯಧನಗಳ ವೆಚ್ಚದಲ್ಲಿ ಗಮನಾರ್ಹ ಏರಿಕೆ ಕಂಡು ಬಂದಿದೆ. ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಸಹಾಯಧನಗಳು 2018–19ರಲ್ಲಿನ ಒಂಬತ್ತು ಪ್ರತಿಶತದಿಂದ 2019–20ರಲ್ಲಿ 10ಕ್ಕೆ ಏರಿದೆ. ನಿಖರವಾಗಿ ಹೇಳುವುದಾದರೆ, ಸಹಾಯಧನಗಳ ಖರ್ಚು 2018–19ರಲ್ಲಿದ್ದ ₹15,400 ಕೋಟಿಯಿಂದ 2019–20ರಲ್ಲಿ ₹17,534 ಕೋಟಿಗೆ ಏರಿದೆ.

**ಕೋಷ್ಟಕ–2.18: 2015–16 ರಿಂದ 2019–20ರ ಅವಧಿಯಲ್ಲಿ ಸಹಾಯಧನಗಳ ಮೇಲಿನ ವೆಚ್ಚ.**

| | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಸಹಾಯ ಧನಗಳು(₹ ಕೋಟಿಗಳಲ್ಲಿ) | 13,149 | 14,387 | 14,148 | 15,400 | 17,534 |
| ರಾಜಸ್ವ ಸ್ವೀಕೃತಿಗಳಿಗೆ ಶತಾಂಶವಾಗಿ ಸಹಾಯಧನಗಳು | 11.07 | 10.80 | 9.62 | 9.33 | 9.99 |
| ರಾಜಸ್ವ ವೆಚ್ಚಕ್ಕೆ ಶತಾಂಶವಾಗಿ ಸಹಾಯಧನಗಳು | 11.24 | 10.91 | 9.93 | 9.37 | 10.06 |

ಆಕರ: ಹಣಕಾಸು ಲೆಕ್ಕಗಳು

ಕೃಷಿ ಪಂಪ್ ಸೆಟ್ ಬಳಕೆಗಾಗಿ ರೈತರಿಗೆ ಒದಗಿಸಲಾದ ಉಚಿತ ವಿದ್ಯುತ್ ಸರಬರಾಜು ಸಹಾಯಧನ, ಆಹಾರ ಸಹಾಯಧನ, ಬೆಳೆ ಸಾಲದ ಮೇಲಿನ ಬಡ್ಡಿ ಸಹಾಯಧನ ಮತ್ತು ಸಾರಿಗೆ ಸಹಾಯಧನ ನಾಲ್ಕು ಪ್ರಮುಖ ಸಹಾಯಧನಗಳ ಘಟಕಗಳಾಗಿವೆ. ಕಳೆದ ಐದು ವರ್ಷಗಳ ಸಹಾಯಧನಗಳ ವಿವರಗಳನ್ನು **ಅನುಬಂಧ–2.3** ಮತ್ತು 2019–20ರಲ್ಲಿ ನೀಡಲಾದ ವಿವರಗಳನ್ನು **ನಕ್ಷೆ–2.11**ರಲ್ಲಿ ತೋರಿಸಲಾಗಿದೆ.

[14] 2019–20ರ ಬಡ್ಡಿ ಪಾವತಿಗಳಿಗಾಗಿ 14ನೇ ಹಣಕಾಸು ಆಯೋಗವು ₹17,168 ಕೋಟಿಗಳ ಅಂದಾಜು ಮಾಡಿತ್ತು. ರಾಜ್ಯ ಸರ್ಕಾರವು ತನ್ನ ಆಯವ್ಯಯ ಮತ್ತು ಎಂ ಟಿ ಎಫ್ ಪಿ ನಲ್ಲಿ ಕ್ರಮವಾಗಿ ₹19,060 ಕೋಟಿ ಮತ್ತು ₹18,990 ಕೋಟಿಗಳ ಪ್ರಕ್ಷೇಪಣ ಮಾಡಿತ್ತು. ಆದರೆ ವಾಸ್ತವ ಬಡ್ಡಿ ಪಾವತಿಯು ₹19,903 ಕೋಟಿಗಳಷ್ಟಿತ್ತು.

**ನಕ್ಷೆ–2.11: 2019–20ರ ಅವಧಿಯಲ್ಲಿ ಸಹಾಯಧನ**

**(₹ ಕೋಟಿಗಳಲ್ಲಿ)**




- **ಹಣಕಾಸಿನ ಬೆಂಬಲ, ಪ್ರೋತ್ಸಾಹಕ ಇತ್ಯಾದಿಗಳ ರೂಪದಲ್ಲಿ ಸಹಾಯಧನಗಳು**

ರಾಜ್ಯ ಸರ್ಕಾರವು ಒದಗಿಸುವ ಸಹಾಯಧನಗಳು ಎರಡು ವಿಧಗಳಾಗಿವೆ. ಒಂದು ರಾಜ್ಯವು ಸ್ಪಷ್ಟವಾಗಿ ಸಹಾಯಧನದ ಸ್ವರೂಪದಲ್ಲಿ ವೆಚ್ಚ ಮಾಡಲು ಒದಗಿಸುತ್ತದೆ ಮತ್ತು ಇನ್ನೊಂದು ಸರ್ಕಾರದ ಕೆಲವು ಯೋಜನೆಗಳಿಗೆ ಅನುದಾನವನ್ನು ನೀಡಲಾಗುತ್ತದೆ. ಈ ಸಹಾಯಧನಗಳು ಪರೋಕ್ಷವಾಗಿ ವಸ್ತು ರೂಪದಲ್ಲಿ ಅಥವಾ ತೆರಿಗೆ ರಿಯಾಯಿತಿಗಳ ರೂಪದಲ್ಲಿ ಇರಬಹುದು.

ಹಣಕಾಸಿನ ನೆರವಿನ ರೂಪದಲ್ಲಿ ಸಹಾಯಧನಗಳು 2015–16ರಲ್ಲಿ ₹3,913 ಕೋಟಿಗಳಷ್ಟಿದ್ದು 2019–20ರ ಅವಧಿಯಲ್ಲಿ ₹4,048 ಕೋಟಿಗೆ ಏರಿದೆ. ಅವುಗಳಲ್ಲಿ ಮುಖ್ಯವಾಗಿ ಬೀಜಗಳ ಪೂರೈಕೆ, ನೇಕಾರರ ಪ್ಯಾಕೇಜ್, ಆಶ್ರಯ ಯೋಜನೆ, ಸೂಕ್ಷ್ಮ/ಹನಿ ನೀರಾವರಿ, ಕನಿಷ್ಠ ಮೂಲ ಬೆಲೆ ಯೋಜನೆ, ದುರ್ಬಲ ವರ್ಗದವರಿಗೆ ವಸತಿ, ಗ್ರಾಮೀಣ ಭೂಹೀನರಿಗೆ ಮನೆ ನಿವೇಶನಗಳು ಇತ್ಯಾದಿಗಳು ಸೇರಿವೆ. 2015–16 ರಿಂದ 2019–20ರವರೆಗೆ ವಿಸ್ತರಿಸಲ್ಪಟ್ಟ ಈ ಸಹಾಯಧನಗಳ ವಿವರಗಳನ್ನು **ಅನುಬಂಧ–2.4**ರಲ್ಲಿ ನೀಡಲಾಗಿದೆ. ಸಹಾಯಧನಗಳ ವೆಚ್ಚವು ನಿಜವಾಗಿ ತೋರಿಸಿದ್ದಕ್ಕಿಂತ ಹೆಚ್ಚಾಗಿದೆ. ನಿಜವಾದ ಸಹಾಯಧನದ ಪಾವತಿಯು ₹17,534 ಕೋಟಿಗೆ ಬದಲಾಗಿ ₹21,582 ಕೋಟಿಗಳಾಗುತ್ತದೆ.

***ಶಿಫಾರಸು: ಹಣಕಾಸಿನ ನೆರವಿನ ರೂಪದಲ್ಲಿ** ಸಹಾಯಧನ**ಗಳ ವೆಚ್ಚವು ಸ್ಥಿರವಾಗಿ ಹೆಚ್ಚುತ್ತಿದೆ, ರಾಜ್ಯ ಸರ್ಕಾರ ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು.***

### *2.5.2.8 ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು*

2015–16ರಿಂದ 2019–20ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಅನುದಾನದ ಮೂಲಕ ಒದಗಿಸಲಾದ ಸಹಾಯದ ಪ್ರಮಾಣವನ್ನು **ಕೋಷ್ಟಕ–2.19** ಮತ್ತು **ಕೋಷ್ಟಕ–2.20**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.19: ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ನೆರವು**

(₹ ಕೋಟಿಗಳಲ್ಲಿ)

| ಸಂಸ್ಥೆಯಹೆಸರು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಪಂಚಾಯತ್ ರಾಜ್ ಸಂಸ್ಥೆಗಳು | 26,694.94 | 29,697.94 | 31,054.63 | 35,897.61 | 38,049.61 |
| ನಗರ ಸ್ಥಳೀಯ ಸಂಸ್ಥೆಗಳು | 6,076.05 | 5,685.58 | 6,489.76 | 5,425.31 | 6,424.72 |
| ಒಟ್ಟು | **32,770.99** | **35,383.52** | **37,544.39** | **41,322.92** | **44,474.33** |

ಆಕರ: ಹಣಕಾಸು ಲೆಕ್ಕಗಳು

ಹನ್ನೊಂದನೇ ಹಣಕಾಸು ಆಯೋಗದ ಶಿಫಾರಸುಗಳ ಮುಂದುವರಿದ ಭಾಗವಾಗಿ, 196, 197 ಮತ್ತು 198 ಎಂಬ ಮೂರು ವಿಭಿನ್ನ ಕಾರ್ಯಕ್ರಮ ಒಳ ಶೀರ್ಷಿಕೆಗಳ ಅಡಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಹಾಯವು 2015–16ರಲ್ಲಿ ₹26,695 ಕೋಟಿಯಿದ್ದು 2019–20ರಲ್ಲಿ ₹38,050 ಕೋಟಿಗೆ ಹೆಚ್ಚಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನೆರವು 2015–16ರಲ್ಲಿ ₹6,076 ಕೋಟಿಯಿದ್ದು 2019–20ರಲ್ಲಿ ₹6,425 ಕೋಟಿಗೆ ಏರಿದೆ.

2019–20ರ ಅವಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಂಚಿಕೆಯಾದ ಒಟ್ಟು ₹38,050 ಕೋಟಿಗಳಲ್ಲಿ ₹16,960 ಕೋಟಿಗಳು (ಶೇಕಡ 45)ಸಂಬಳದ ಕಡೆಗೆ ಇತ್ತು. ರಾಜ್ಯ ಸರ್ಕಾರದ ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿ ಕರ್ತವ್ಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ಇದರಲ್ಲಿ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ 14ನೇ ಹಣಕಾಸು ಆಯೋಗದ ಅನುದಾನವೂ ಸೇರಿದೆ (₹2,504.13 ಕೋಟಿ).

ಹಿಂದಿನ ವರ್ಷಕ್ಕಿಂತ ನಗರ ಸ್ಥಳೀಯ ಸಂಸ್ಥೆಗಳಿಗೆ ನೆರವು ₹999 ಕೋಟಿಯಷ್ಟು ಹೆಚ್ಚಾಗಿದೆ, ಇದರಲ್ಲಿ ವೇತನದ ಭಾಗವೂ ಸೇರಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ₹6,424.72 ಕೋಟಿಗಳ ನೆರವಿನಲ್ಲಿ, ₹1,330.39 ಕೋಟಿ (ಶೇಕಡ 21) ಬಂಡವಾಳ ಆಸ್ತಿಗಳ ಸೃಜನೆಗೆ ಬಿಡುಗಡೆಯಾಗಿದೆ. ಇದರಲ್ಲಿ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ 14ನೇ ಹಣಕಾಸು ಆಯೋಗದ ಅನುದಾನವೂ ಸೇರಿದೆ (₹1,661.78 ಕೋಟಿ).

**ಕೋಷ್ಟಕ–2.20: ಇತರೆ ಸಂಸ್ಥೆಗಳಿಗೆ ಆರ್ಥಿಕ ಬೆಂಬಲ**

(₹ ಕೋಟಿಗಳಲ್ಲಿ)

| ಸಂಸ್ಥೆಯಹೆಸರು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಶಿಕ್ಷಣ ಸಂಸ್ಥೆಗಳು (ವಿಶ್ವವಿದ್ಯಾಲಯಗಳನ್ನು ಒಳಗೊಂಡು) | 1,406.50 | 1,449.75 | 1,293.70 | 1,081.29 | 1,405.90 |
| ಸಹಕಾರಿ ಸಂಘಗಳು ಮತ್ತು ಸಹಕಾರಿ ಸಂಸ್ಥೆಗಳು | 1,023.13 | 1,009.47 | 1,191.32 | 1,477.76 | 1,275.78 |
| ಇತರೆ ಸಂಸ್ಥೆಗಳು ಮತ್ತು ನಿಕಾಯಗಳು (ಶಾಸನಬದ್ಧ ಸಂಸ್ಥೆಗಳನ್ನು ಒಳಗೊಂಡು) | 4,820.87 | 6,656.29 | 7,067.08 | 6,720.59 | 7,446.88 |
| ಒಟ್ಟು | **7,250.50** | **9,115.51** | **9,552.10** | **9,279.64** | **10,128.56** |

ಆಕರ: ಹಣಕಾಸು ಲೆಕ್ಕಗಳು

2019–20ರಲ್ಲಿ ಇತರ ಸಂಸ್ಥೆಗಳಿಗೆ ನೀಡಿದ ಆರ್ಥಿಕ ನೆರವು(₹7,447 ಕೋಟಿ) ಶಾಸನಬದ್ಧ ಸಂಸ್ಥೆಗಳು ಮತ್ತು ಅಭಿವೃದ್ಧಿ ಪ್ರಾಧಿಕಾರಗಳು (₹1,875 ಕೋಟಿ), ಸರ್ಕಾರೇತರ ಸಂಸ್ಥೆಗಳು (₹2,305 ಕೋಟಿ), ಸಾರ್ವಜನಿಕ ವಲಯ ಉದ್ಯಮಗಳು (₹13 ಕೋಟಿ) ಮತ್ತು ಇತರರಿಗೆ (₹3,254 ಕೋಟಿ) ನೀಡಿದ ಸಹಾಯವನ್ನು ಒಳಗೊಂಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಹಕಾರ ಸಂಘಗಳಿಗೆ ನೆರವು ₹202

ಕೋಟಿಯಷ್ಟು ಕಡಿಮೆಯಾಗಿದೆ ಮತ್ತು ಇತರ ಸಂಸ್ಥೆಗಳಿಗೆ ₹726 ಕೋಟಿ ಅಧಿಕವಾಗಿದೆ. 2019–20ರಲ್ಲಿ ಶಿಕ್ಷಣ ಸಂಸ್ಥೆಗಳಿಗೆ ನೆರವು ₹325 ಕೋಟಿ ಹೆಚ್ಚಾಗಿದೆ.

### *2.5.3 ಬಂಡವಾಳ ವೆಚ್ಚ*

ಬಂಡವಾಳ ವೆಚ್ಚವು (ಕ್ಯಾಪೆಕ್ಸ್) ಮುಖ್ಯವಾಗಿ ಕಟ್ಟಡಗಳು, ರಸ್ತೆಗಳು, ಸೇತುವೆಗಳು ಮುಂತಾದ ಸ್ಥಿರ ಮೂಲಸೌಕರ್ಯ ಸ್ವತ್ತುಗಳ ರಚನೆಗೆ ಮಾಡಿದ ವೆಚ್ಚವನ್ನು ಒಳಗೊಂಡಿದೆ. ಬಂಡವಾಳ ವೆಚ್ಚವನ್ನು ಆಯವ್ಯಯ ಬೆಂಬಲ ಮತ್ತು ಹೆಚ್ಚುವರಿ ಆಯವ್ಯಯ ಸಂಪನ್ಮೂಲಗಳು/ಆಯವ್ಯಯದ ಹೊರಗಿನ ಸಂಪನ್ಮೂಲಗಳಿಂದ ಪೂರೈಸಲಾಗುತ್ತದೆ. ಇತ್ತೀಚೆಗೆ, ಮೂಲಸೌಕರ್ಯದ ಅವಶ್ಯಕತೆಗಳು ಅನೇಕ ಪಟ್ಟು ಹೆಚ್ಚಿವೆ ಮತ್ತು ಹೆಚ್ಚಿನ ಪ್ರಮಾಣದ ವೆಚ್ಚವನ್ನು ನಿರ್ವಹಿಸಲು ವಿಶೇಷ ಉದ್ದೇಶ ಸಾಧನಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದ ಬಂಡವಾಳ ವೆಚ್ಚವು (ಸಾಲ ಮತ್ತು ಮುಂಗಡಗಳ ವಿತರಣೆ ಸೇರಿದಂತೆ) 2015–16ರಲ್ಲಿದ್ದ ₹21,370 ಕೋಟಿಯಿಂದ 2018–19ರಲ್ಲಿ ₹39,146 ಕೋಟಿಗೆ ಏರಿಕೆಯಾಗಿದೆ. 2019–20ರಲ್ಲಿ, ಬಂಡವಾಳ ವೆಚ್ಚವು ಹಿಂದಿನ ವರ್ಷಕ್ಕಿಂತ ₹453 ಕೋಟಿಗಳಷ್ಟು ಹೆಚ್ಚಾಗಿದೆ ಮತ್ತು ಇದು ₹39,599 ಕೋಟಿಗಳಷ್ಟಿದೆ. 2015–20ರ ಐದು ವರ್ಷಗಳ ಅವಧಿಯಲ್ಲಿ ಬಂಡವಾಳ ವೆಚ್ಚದ ಹಾಗೂ ಆಯವ್ಯಯ ವಿವರಗಳನ್ನು **ನಕ್ಷೆ 2.12** ರಲ್ಲಿ ನೀಡಲಾಗಿದೆ.

**ನಕ್ಷೆ–2.12: 2015–16ರಿಂದ 2019–20ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಬಂಡವಾಳ ವೆಚ್ಚದ (ಸಾಲ ಮತ್ತು ಮುಂಗಡಗಳನ್ನು ಒಳಗೊಂಡಂತೆ) ಪ್ರವೃತ್ತಿ**




ಮೇಲಿನ ನಕ್ಷೆಯಲ್ಲಿ ತೋರಿಸಿದಂತೆ, 2015–16 ರಿಂದ 2017–18ರ ಅವಧಿಯಲ್ಲಿ ಅಂದಾಜು ಮಾಡಲಾದ ಬಂಡವಾಳ ವೆಚ್ಚಕ್ಕಿಂತ ವಾಸ್ತವ ವೆಚ್ಚವು ಹೆಚ್ಚಾಗಿದೆ. ಆದರೆ, 2018–19 ಮತ್ತು 2019–20ರ ಅವಧಿಯಲ್ಲಿ, ವಾಸ್ತವ ಬಂಡವಾಳ ವೆಚ್ಚವು ಅಂದಾಜಿಗಿಂತ ಕ್ರಮವಾಗಿ ಶೇಕಡ ಐದು ಮತ್ತು ಎಂಟರಷ್ಟು ಕಡಿಮೆಯಾಗಿದೆ. 2019–20ರಲ್ಲಿಹಿಂದಿನ ವರ್ಷಕ್ಕೆ ಹೋಲಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಬಂಡವಾಳ ವೆಚ್ಚದಲ್ಲಿ ಗಮನಾರ್ಹ ಹೆಚ್ಚಳ ಅಥವಾ ಇಳಿಕೆಯ ಪ್ರಕರಣಗಳನ್ನು **ಕೋಷ್ಟಕ–2.21**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.21: 2018–19ಕ್ಕೆ ಹೋಲಿಸಿದರೆ 2019–20ರಲ್ಲಿ ಬಂಡವಾಳ ವೆಚ್ಚ**

(₹ ಕೋಟಿಗಳಲ್ಲಿ)

| ಪ್ರಧಾನಲೆಕ್ಕಶೀರ್ಷಿಕೆ | 2018–19 | 2019–20 | ಏರಿಕೆ (+)/ ಇಳಿಕೆ (–) | ಶೇಕಡಾವಾರು ವ್ಯತ್ಯಾಸ |
|---|---|---|---|---|
| 4059–ಲೋಕೋಪಯೋಗಿ ಕಾಮಗಾರಿಗಳ ಮೇಲಣ ಬಂಡವಾಳ ವೆಚ್ಚ | 536.12 | 420.86 | (–)115.26 | (–)21.50 |
| 4202–ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಮೇಲಣ ಬಂಡವಾಳ ವೆಚ್ಚ | 1,107.31 | 1,203.17 | 95.86 | 8.66 |
| 4210–ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ಮೇಲಣ ಬಂಡವಾಳ ವೆಚ್ಚ | 1,107.97 | 821.96 | (–)286.01 | (–)25.81 |
| 4215–ನೀರು ಸರಬರಾಜು ಮತ್ತು ನೈರ್ಮಲ್ಯದ ಮೇಲಣ ಬಂಡವಾಳ ವೆಚ್ಚ | 1,612.29 | 2,255.91 | 643.62 | 39.92 |
| 4217–ನಗರಾಭಿವೃದ್ಧಿಯ ಮೇಲಣ ಬಂಡವಾಳ ವೆಚ್ಚ | 2,153.63 | 1,764.52 | (–)389.11 | (–)18.07 |
| 4225–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತ ಅಲ್ಪಸಂಖ್ಯಾತರ ಕಲ್ಯಾಣದ ಮೇಲಣ ಬಂಡವಾಳ ವೆಚ್ಚ | 3,422.37 | 2,783.45 | (–)638.92 | (–)18.67 |
| 4701–ಮಧ್ಯಮ ನೀರಾವರಿ ಮೇಲಣ ಬಂಡವಾಳ ವೆಚ್ಚ | 9,963.87 | 10,862.48 | 898.61 | 9.02 |
| 4702–ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ | 1,990.67 | 2,268.59 | 277.92 | 13.96 |
| 4711–ನೆರೆ ನಿಯಂತ್ರಣ ಯೋಜನೆಗಳ ಮೇಲಣ ಬಂಡವಾಳ ವೆಚ್ಚ | 55.50 | 98.19 | 42.69 | 76.92 |
| 4801–ವಿದ್ಯುಚ್ಛಕ್ತಿ ಯೋಜನೆಗಳ ಮೇಲಣ ಬಂಡವಾಳ ವೆಚ್ಚ | 627.85 | 858.35 | 230.50 | 36.71 |
| 5054–ರಸ್ತೆಗಳು ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ | 8,327.05 | 8,343.98 | 16.93 | 0.20 |
| 5055–ರಸ್ತೆ ಸಾರಿಗೆ ಮೇಲಣ ಬಂಡವಾಳ ವೆಚ್ಚ | 399.38 | 389.17 | (–)10.21 | –2.56 |

ಮೇಲಿನ ಕೋಷ್ಟಕವು ಬಂಡವಾಳ ವೆಚ್ಚವು ಪ್ರಧಾನವಾಗಿ ಮಧ್ಯಮ ನೀರಾವರಿ (ಶೇಕಡ 31) ಮತ್ತು ರಸ್ತೆಗಳು ಮತ್ತು ಸೇತುವೆಗಳು (ಶೇಕಡ 23) ಅಡಿಯಲ್ಲಿ ಮಾಡಲಾಗಿದೆ ಎಂಬುದನ್ನು ತೋರಿಸುತ್ತದೆ.

ರಾಜ್ಯ ಸರ್ಕಾರದ ವೆಚ್ಚ ಸುಧಾರಣಾ ಆಯೋಗ (ಇಆರ್‌ಸಿ) ತನ್ನ ಮೊದಲ ವರದಿಯಲ್ಲಿ (ಫೆಬ್ರವರಿ 2010) ವಿವೇಚನಾಯುಕ್ತಹಂಚಿಕೆಗಳ ಮೂಲಕ ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಬೇಕು ಮತ್ತು ಹಣಕಾಸಿನ ಅನಿಶ್ಚಿತತೆಗಳಿಂದ ರಕ್ಷಿಸಬೇಕು ಎಂದು ಶಿಫಾರಸು ಮಾಡಿತ್ತು. ಬಂಡವಾಳ ವೆಚ್ಚವನ್ನು (ಋಣ ಸೇವೆಯನ್ನು ಹೊರತುಪಡಿಸಿ) ರಾಜಿಆಂಉದ ಐದು ಪ್ರತಿಶತದಷ್ಟು ಕಾಯ್ದುಕೊಳ್ಳಲು ಅದು ಶಿಫಾರಸು ಮಾಡಿತ್ತು. ಆದರೆ, 2015–16 ರಿಂದ 2019–20ರ ಅವಧಿಯಲ್ಲಿ ರಾಜಿಆಂಉಕ್ಕೆ ಬಂಡವಾಳ ವೆಚ್ಚದ ಅನುಪಾತವು ಸರಾಸರಿ ಶೇಕಡಾ ಎರಡರಿಂದ ಮೂರರಷ್ಟು ಮಾತ್ರಇತ್ತು.

**ಆರ್ಥಿಕ ಇಲಾಖೆಯು (ಫೆಬ್ರವರಿ 2021) ರಾಜಸ್ವ ವೆಚ್ಚವನ್ನು ಸಂಕುಚಿತಗೊಳಿಸಿ ರಾಜಸ್ವ ಹೆಚ್ಚಳವನ್ನು ಗಣನಾರ್ಹವಾಗಿ ಹೆಚ್ಚಿಸಿದರೆ, ಬಂಡವಾಳ ವೆಚ್ಚವನ್ನು ಅಧಿಕವಾಗಿಸಬಹುದಾದರೂ ರಾಜಸ್ವ ವೆಚ್ಚವನ್ನು ಕಡಿಮೆಗೊಳಿಸುವುದು ಕಾರ್ಯಸಾಧ್ಯವಲ್ಲವಾದ್ದರಿಂದ, ಬಂಡವಾಳ ವೆಚ್ಚವು ಶೇಕಡ ಎರಡರಿಂದ ಮೂರರಷ್ಟಿದೆ ಎಂದು ತಿಳಿಸಿದೆ.**

### *2.5.4 ಬಂಡವಾಳ ವೆಚ್ಚದ ಗುಣಮಟ್ಟ*

ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಜಾರಿಯ ನಂತರದಲ್ಲಿ ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು (ಸಾಲ ಪಡೆಯುವುದು) ಕಡಿಮೆ ಮಟ್ಟದಲ್ಲಿರಿಸಿಕೊಳ್ಳುತ್ತದೆ ಮತ್ತು ಅದರ ಬಂಡವಾಳ ವೆಚ್ಚ/ಹೂಡಿಕೆ (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಅವಶ್ಯಕತೆಗಳನ್ನು ಪೂರೈಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಇದರ ಜೊತೆಯಲ್ಲಿ, ರಾಜ್ಯ ಸರ್ಕಾರವು ಸಹಾಯಧನ ನೀಡಿಕೆಗೆ ಬದಲಾಗಿ ತನ್ನ ಹೂಡಿಕೆಯ ಮೇಲೆ ಸಮರ್ಪಕ ಲಾಭವನ್ನು ಗಳಿಸುವ ಕ್ರಮಗಳನ್ನು ಪ್ರಾರಂಭಿಸುವ ಅಗತ್ಯವಿದೆ, ಸಾಲ ಪಡೆದ ನಿಧಿಯ ವೆಚ್ಚವನ್ನು ಮರುಪಡೆಯುವುದು ಮತ್ತು ಹಣಕಾಸು ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆಯನ್ನು ತುಂಬಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ವಿಭಾಗವು ಹಿಂದಿನ

ವರ್ಷಗಳಿಗೆ ಹೋಲಿಸಿದಂತೆ 2019-20ರಲ್ಲಿ ಸರ್ಕಾರವು ಕೈಗೊಂಡ ಹೂಡಿಕೆಗಳು ಮತ್ತು ಇತರ ಬಂಡವಾಳ ವೆಚ್ಚಗಳ ಸ್ಥೂಲ ಆರ್ಥಿಕ ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತದೆ.

### *2.5.4.1 ಕಂಪನಿಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳಲ್ಲಿ ಹೂಡಿಕೆ*

31 ಮಾರ್ಚ್ 2020ರಲ್ಲಿದ್ದಂತೆ, ಸರ್ಕಾರವು ₹67,817 ಕೋಟಿಗಳನ್ನು 87[15] ಸರ್ಕಾರಿ ಕಂಪನಿಗಳಲ್ಲಿ (₹60,319 ಕೋಟಿ), ಒಂಬತ್ತು ಶಾಸನಬದ್ಧ ನಿಗಮಗಳಲ್ಲಿ (₹2,764 ಕೋಟಿ), 44 ಕೂಡು ಬಂಡವಾಳ ಕಂಪನಿಗಳಲ್ಲಿ (₹4,137 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ(₹597 ಕೋಟಿ)ಹೂಡಿಕೆ ಮಾಡಿದೆ. 2019-20ರಲ್ಲಿ, ಸರ್ಕಾರವು ₹1298.43 ಕೋಟಿಗಳನ್ನು ಸರ್ಕಾರಿ ಕಂಪನಿಗಳಲ್ಲಿ (ಕೆಲಸ ಮಾಡುತ್ತಿರುವ) (₹40.49 ಕೋಟಿ), ಕೂಡು ಬಂಡವಾಳ ಕಂಪನಿಗಳಲ್ಲಿ (₹1,104.00 ಕೋಟಿ), ಶಾಸನಬದ್ಧ ನಿಗಮಗಳಲ್ಲಿ (₹100.00 ಕೋಟಿ), ಮತ್ತು ಸಹಕಾರಿ ಸಂಸ್ಥೆಗಳಲ್ಲಿ (₹53.94 ಕೋಟಿ)ಹೂಡಿಕೆ ಮಾಡಿದೆ. ಶಾಸನಬದ್ಧ ನಿಗಮಗಳು ಮತ್ತು ಸರ್ಕಾರಿ ಕಂಪನಿಗಳ ಅಡಿಯಲ್ಲಿನ ಹೂಡಿಕೆಗಳು ವಿವಿಧ ವಿಭಾಗಗಳ[16] ಅಡಿಯಲ್ಲಿ ಹರಡಿದೆ.

2019-20ರ ಅವಧಿಯಲ್ಲಿ, 'ಸಹಕಾರಿ ಸಂಸ್ಥೆಗಳು' ಅಡಿಯಲ್ಲಿ, ಸಂಸ್ಥೆಗಳ ಷೇರು ಬಂಡವಾಳದಲ್ಲಿ ಸರ್ಕಾರದ ಹೂಡಿಕೆಯ ಹಿಂತೆಗೆತದ ಕಾರಣದಿಂದಾಗಿ, ಹೂಡಿಕೆಯು ₹1.00 ಕೋಟಿಯಷ್ಟು ಕಡಿಮೆಯಾಗಿದೆ ಅದರ ಸ್ವೀಕೃತಿಯನ್ನು ಇತರೆ ಬಂಡವಾಳ ಸ್ವೀಕೃತಿ ಶೀರ್ಷಿಕೆಯಡಿ ಲೆಕ್ಕ ಮಾಡಲಾಗಿದೆ. ಅಲ್ಲದೆ, 2014-15ಕ್ಕೆ ಸಂಬಂಧಿಸಿದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕೆಆರ್‌ಡಿಸಿಎಲ್) ಸಂಬಂಧಿಸಿದ ಹೂಡಿಕೆಯನ್ನು ಬಂಡವಾಳ ವೆಚ್ಚವಾಗಿ ಪರಿವರ್ತಿಸಿದ ಕಾರಣ ಹೂಡಿಕೆಯಲ್ಲಿ ₹885.70 ಕೋಟಿ ಇಳಿಕೆಯಾಗಿದೆ.

- **ಹೂಡಿಕೆಯ ಮೇಲಿನ ಪ್ರತಿಫಲ**

ಕಳೆದ ಐದು ವರ್ಷಗಳ ಹೂಡಿಕೆಯ ವಿವರಗಳು ಮತ್ತು ಅದರ ಲಾಭವನ್ನು **ಕೋಷ್ಟಕ – 2.22**ರಲ್ಲಿ ಸೂಚಿಸಲಾಗಿದೆ. ಹೂಡಿಕೆಯ ಮೇಲಿನ ಪ್ರತಿಫಲವು ನಗಣ್ಯ ಎಂದು ಕೋಷ್ಟಕದಿಂದ ಸ್ಪಷ್ಟವಾಗಿದೆ.

**ಕೋಷ್ಟಕ-2.22: ಹೂಡಿಕೆಗಳ ಮೇಲಿನ ಪ್ರತಿಫಲ**

| | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ವರ್ಷಾಂತ್ಯದಲ್ಲಿ ಹೂಡಿಕೆಗಳು (₹ ಕೋಟಿಗಳಲ್ಲಿ) | 61,335.89 | 63,115.06 | 65,145.88 | 66,518.28 | 67,816.71 |
| ಪ್ರತಿಫಲ (₹ ಕೋಟಿಗಳಲ್ಲಿ) | 69.40 | 82.50 | 78.83 | 38.30 | 53.64 |
| ಪ್ರತಿಫಲ (ಶೇಕಡಾವಾರು) | 0.1 | 0.1 | 0.1 | 0.1 | 0.1 |
| ಸರ್ಕಾರಿದ ಸಾಲದ ಮೇಲಿನ ಸರಾಸರಿ ಬಡ್ಡಿಯ ದರ (ಶೇಕಡ) | 6.53 | 6.35 | 6.40 | 6.25 | 6.39 |
| ಬಡ್ಡಿಯ ದರ ಮತ್ತು ಹೂಡಿಕೆಗಳ ಮೇಲಿನ ಪ್ರತಿಫಲಗಳ ನಡುವಿನ ವ್ಯತ್ಯಾಸ (ಶೇಕಡ) | 6.43 | 6.25 | 6.30 | 6.15 | 6.29 |

ಆಕರ : ಹಣಕಾಸು ಲೆಕ್ಕಗಳು

ಈ ಹೂಡಿಕೆಗಳ ಮೇಲಿನ ಲಾಭವು ಅಲ್ಪವಾಗಿದೆ ಎಂದು ರಾಜ್ಯ ಸರ್ಕಾರ ಒಪ್ಪಿಕೊಂಡಿದ್ದರೂ (ಜುಲೈ 2011) ದೀರ್ಘಾವಧಿಯ ಸ್ವಯಂವರ್ಧನೆ ಮತ್ತು ಮರುಪಾವತಿ ಅವಧಿಗಳನ್ನು ಒಳಗೊಂಡ ಸಾಮಾಜಿಕ ಮೂಲ ಸೌಕರ್ಯಗಳಲ್ಲಿ ಹೂಡಿಕೆ ಮಾಡುವುದಕ್ಕೆ ಅದು ಹಿಂಜರಿಯುವುದಿಲ್ಲ ಎಂದು ಹೇಳಿದೆ. ಸಾರ್ವಜನಿಕ ಲೆಕ್ಕ ಸಮಿತಿಯು ಸರ್ಕಾರದ ಉತ್ತರವನ್ನು ಒಪ್ಪಿಕೊಂಡಿದ್ದರೂ (ಡಿಸೆಂಬರ್ 2011) ಹಣಕಾಸಿನ ದೃಷ್ಟಿಯಿಂದ ನಿರೀಕ್ಷಿತ ಪ್ರತಿಫಲವನ್ನು ಮೌಲ್ಯಮಾಪನ ಮಾಡಲು ಆರ್ಥಿಕ ಇಲಾಖೆಯು

[15] ಇದು 16 ನಿಷ್ಕ್ರಿಯ ಸರ್ಕಾರಿ ಕಂಪನಿಗಳಲ್ಲಿ ಹೂಡಿರುವ ₹68 ಕೋಟಿಗಳನ್ನು ಒಳಗೊಂಡಿದೆ.

[16] ನೀರಾವರಿ (₹36,779 ಕೋಟಿ), ವಿದ್ಯುಚ್ಛಕ್ತಿ (₹10,375.11 ಕೋಟಿ), ಮೂಲಸೌಕರ್ಯ (₹4,819 ಕೋಟಿ), ಹಣಕಾಸು (₹3,455 ಕೋಟಿ), ಸಾರಿಗೆ (₹1,513 ಕೋಟಿ), ಸಾಮಾಜಿಕ (₹1,997 ಕೋಟಿ), ವಸತಿ (₹1,451 ಕೋಟಿ), ಕೈಗಾರಿಕೆ (₹1,048 ಕೋಟಿ), ನಿರ್ಮಾಣ (₹2 ಕೋಟಿ) ಮತ್ತು ಇತರೆ ವಿಭಾಗಗಳು (₹118 ಕೋಟಿ).

ಯಾವುದೇ ಕಾರ್ಯವಿಧಾನವನ್ನು ಪ್ರಾರಂಭಿಸಿಲ್ಲ ಎಂದು ಗಮನಿಸಿದೆ. ಇದಕ್ಕಾಗಿ ಮಾರ್ಗಸೂಚಿಗಳನ್ನು ರೂಪಿಸಲು ಸಮಿತಿಯು ಶಿಫಾರಸು ಮಾಡಿತ್ತು. ಸರ್ಕಾರವು ಈ ನಿಟ್ಟಿನಲ್ಲಿ ಸರಿಯಾದ ಪ್ರತಿಫಲವನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಲಾಗುವುದು ಎಂದು ಹೇಳಿದೆ. ಕಳೆದ ಹತ್ತು ವರ್ಷಗಳಿಂದ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸುಗಳು ಮತ್ತು ನಮ್ಮ ನಿರಂತರ ಆಕ್ಷೇಪಣೆಗಳ ಹೊರತಾಗಿಯೂ, ಯಾವುದೇ ಮಾರ್ಗಸೂಚಿಗಳನ್ನು ರೂಪಿಸಲಾಗಿಲ್ಲ. ಇದಲ್ಲದೆ, ಶಾಸನಸಭೆಯ ಮುಂದೆ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆಗಳು ಹೂಡಿಕೆಗಳ ಮೇಲೆ ಸರಿಯಾದ ಲಾಭವನ್ನು ಖಾತ್ರಿಪಡಿಸಿಕೊಳ್ಳಲು ಯಾವುದೇ ದಿಕ್ಸೂಚಿಯನ್ನು ಹೊಂದಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ.

- **ನಷ್ಟದಲ್ಲಿರುವ ಕಂಪನಿಗಳಲ್ಲಿ ಹೂಡಿಕೆ**

ಮೇಲಿನ ಹೂಡಿಕೆಗಳಲ್ಲಿ ಗಣನಾರ್ಹ ನಷ್ಟದಲ್ಲಿರುವ ಈ ಕೆಳಗಿನ ಕಂಪನಿಗಳು/ನಿಗಮಗಳಲ್ಲಿ ಹೂಡಿರುವ ₹41,989.34 ಕೋಟಿಗಳು (62 ಶೇಕಡಾ) ಸೇರಿವೆ ಮತ್ತು ಅವುಗಳಲ್ಲಿನ ಹೂಡಿಕೆಗಳು ಗಣನೀಯವಾಗಿವೆ (**ಕೋಷ್ಟಕ–2.23**).

**ಕೋಷ್ಟಕ–2.23: ನಷ್ಟದಲ್ಲಿರುವ ಕಂಪನಿಗಳಲ್ಲಿ ಮಾಡಿದ ಹೂಡಿಕೆಗಳು**

(₹ ಕೋಟಿಗಳಲ್ಲಿ)

| ಕಂಪನಿ/ನಿಗಮ | 2016–17ರ ಅಂತ್ಯಕ್ಕೆ ಸಂಚಿತ ನಷ್ಟ | 2017–18ರ ಅಂತ್ಯಕ್ಕೆ ಸಂಚಿತ ನಷ್ಟ | 2018–19ರ ಅಂತ್ಯಕ್ಕೆ ಸಂಚಿತ ನಷ್ಟ | 2019–20ರವರೆಗೆ ಮಾಡಿದ ಹೂಡಿಕೆ |
|---|---|---|---|---|
| ಶಾಸನಬದ್ಧ ನಿಗಮಗಳು | | | | |
| ವಾಯುವ್ಯ ಕರ್ನಾಟಕ ರಸ್ತೆಸಾರಿಗೆ ನಿಗಮ | 720.50 | 792.48 | 881.55 | 266.85 |
| ಈಶಾನ್ಯ ಕರ್ನಾಟಕ ರಸ್ತೆಸಾರಿಗೆ ನಿಗಮ | 509.11 | 542.42 | 610.65 | 183.43 |
| ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ | 412.70 | 391.20 | 386.17 | 1,178.41 |
| ಸರ್ಕಾರಿ ಕಂಪನಿಗಳು | | | | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 2,448.13 | 2,587.22 | 2,811.73 | 23,745.34 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 2,971.09 | 3,492.46 | 4,469.21 | 13,034.03 |
| ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ | 416.67 | 289.42 | 460.89 | 335.78 |
